ಜನಶಕ್ತಿ

ದುಡಿಯುವ ಜನರ ಪ್ರಾಣ ಮಿತ್ರ

ಕನ್ನಡ ವಾರಪತ್ರಿಕೆ

ಬಂಗಾಳ ಎಡರಂಗ ಮಾಜಿ ಮಂತ್ರಿ
ಸತ್ಯಸಾಧನ ಚಕ್ರವರ್ತಿ
ಲಾಲ್ ಸಲಾಂ!



ಸಂಪುಟ 12 | ಸಂಚಿಕೆ 26 | ಜೂನ್ 25–ಜುಲೈ01, 2018 | ಪುಟ 16 | ರೂ. 10/-

web: www.janashakthi.co.in e-mail : js_weekly@yahoo.com



ರೈತ ಕಾರ್ಮಿಕರಿಗೆ ಬುರೆ ದಿನ್





ಬಜೆಟ್ ಸಿಎಂಪಿ ಸಾಲ ಮನ್ನಾ ಮತ್ತು ಮೈತ್ರಿ ಸರ್ಕಾರ



ಗೌರಿ ಹತ್ಯೆಯ ಹಿಂದಿನ ಪಿತೂರಿ ಬಯಲಾದೀತೆ?





ಕಗ್ಗಲಿಪುರದಲ್ಲಿ ವಸತಿ ನಿವೇಶನ ರಹಿತರ ಹೋರಾಟ

ತೂತುಕುಡಿಯಲ್ಲಿ ತುರ್ತು ಪರಿಸ್ಥಿತಿ?

ಜಮ್ಮು ಮತ್ತು ಕಾಶ್ಮೀರದಲ್ಲಿ ಪಿಡಿಪಿ–ಬಿಜೆಪಿ ಮೈತ್ರಿ ಭಂಗ

ಬಿಜೆಪಿಯ ರಾಜಕೀಯ ವಿಫಲತೆಯ ಸಂಕೇತ: ಸಿಪಿಐ(ಎಂ) ಪೊಲಿಟ್‌ಬ್ಯುರೊ

ಜಮ್ಮು ಮತ್ತು ಕಾಶ್ಮೀರದಲ್ಲಿ ಪಿಡಿಪಿಯೊಂದಿಗಿನ ಮೈತ್ರಿ ಸರಕಾರದಿಂದ ಹೊರಬರುವ ಬಿಜೆಪಿಯ ನಿರ್ಧಾರ ಈ ರಾಜ್ಯದಲ್ಲಿ ಈಗಿನ ನಿರ್ದಿಷ್ಟ ಕ್ಷಣದಲ್ಲಿ ಹೆಚ್ಚಿನ ರಾಜಕೀಯ ಅಸ್ಥಿರತೆಯನ್ನು ಉಂಟು ಮಾಡುವ ಸಂಭವವಿದೆ. ಇದು ಜಮ್ಮು ಮತ್ತು ಕಾಶ್ಮೀರದಲ್ಲಿ ಬಿಜೆಪಿಯ ನಿಲುವಿನ ಸಂಪೂರ್ಣ ರಾಜಕೀಯ ವಿಫಲತೆಯನ್ನು ತೋರಿಸುತ್ತದೆ ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ಹೇಳಿದೆ.

ಆರಂಭದಿಂದಲೇ ಈ ಮೈತ್ರಿ ಅಸಂಗತವಾಗಿತ್ತು. ಇದು ಯಾವುದೇ ವಿಷಯದಲ್ಲಿ ಎಂದೂ ಒಂದೇ ರೀತಿಯ ನಿಲುವು ಹೊಂದಿರದ, ಕೇವಲ ಅಧಿಕಾರದ ಲಾಭಗಳನ್ನು ಹಂಚಿಕೊಳ್ಳಲು ಒಟ್ಟುಗೂಡಿದ ಶಕ್ತಿಗಳ ಒಂದು ಪಕ್ಕಾ ಸಮಯಸಾಧಕ ಕೃತ್ಯವಾಗಿತ್ತು.

ಬಿಜೆಪಿ ಕಳೆದ ಮೂರು ವರ್ಷಗಳಲ್ಲಿ ರಾಜ್ಯಸರಕಾರದ ಎಲ್ಲ ನಿರ್ಧಾರಗಳಲ್ಲಿ ಭಾಗಿಯಾಗಿತ್ತು. ಆದ್ದರಿಂದ ರಾಜ್ಯದಲ್ಲಿ ಪರಿಸ್ಥಿತಿ ಮತ್ತಷ್ಟು ಹದಗೆಡುವಲ್ಲಿ ಹಾಗೂ ಜನಗಳಲ್ಲಿ ಪರಕೀಯ ಭಾವ ಆಳಗೊಳ್ಳುವಲ್ಲಿ ತನ್ನ ಕೊಡುಗೆಯ ಹೊಣೆಗಾರಿಕೆಯಿಂದ ಅದು ತಪ್ಪಿಸಿಕೊಳ್ಳಲು ಸಾಧ್ಯವಿಲ್ಲ.

ರಾಜ್ಯ ಸರಕಾರದ ಒಂದು ಭಾಗವಾಗಿ ಮತ್ತು ಕೇಂದ್ರ ಸರಕಾರದಲ್ಲಿ ಅಧಿಕಾರದಲ್ಲಿದ್ದು ಬಿಜೆಪಿ 1)ವಿಶ್ವಾಸ ಕುದುರಿಸುವ ಕ್ರಮಗಳನ್ನು ಮತ್ತು 2)ಸಂಬಂಧಪಟ್ಟ ಎಲ್ಲರೊಂದಿಗೆ ಒಂದು ಸಮಗ್ರ ಸಂವಾದದ ಮುತುವರ್ಜಿ ವಹಿಸಿ ಒಂದು ರಾಜಕೀಯ ಪ್ರಕ್ರಿಯೆಯನ್ನು ಆರಂಭಿಸುವ ಭರವಸೆಯನ್ನು ಕಾಶ್ಮೀರದ ಜನತೆಗೆ ನೀಡಿತ್ತು. ಕೇಂದ್ರ ಗೃಹ ಮಂತ್ರಿಗಳು ಸಪ್ಟಂಬರ್ 2017ರಲ್ಲಿ ಕಣಿವೆಗೆ ಸರ್ವ ಪಕ್ಷ ನಿಯೋಗವೊಂದರ ಭೇಟಿಯ ನಂತರ ಸಾರ್ವಜನಿಕವಾಗಿ ಪ್ರಕಟಿಸಿದ ಈ ಎರಡು ಭರವಸೆಗಳಲ್ಲಿ ಯಾವುದನ್ನೂ ಈಡೇರಿಸಿಲ್ಲ. ಈ ಭರವಸೆಗಳ ಈಡೇರಿಕೆಗೆ ಪ್ರಾಮಾಣಿಕತೆಯಿಂದ ಮುಂದಾಗಿದ್ದರೆ ಪರಿಸ್ಥಿತಿಯನ್ನು ಉತ್ತಮಪಡಿಸಬಹುದಾಗಿತ್ತು ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ಅಭಿಪ್ರಾಯ ಪಟ್ಟಿದೆ.

ಬಿಜೆಪಿ ಕೇಂದ್ರ ಸರಕಾರ ಮೊದಲಿಗೆ ಏಕಪಕ್ಷೀಯವಾಗಿ ಕದನ ವಿರಾಮ ಪ್ರಕಟಿಸಿತು. ನಂತರ ಅದನ್ನು ಹಿಂತೆಗೆದುಕೊಂಡಿತು.

ಇಂತಹ ಸನ್ನಿವೇಶದಲ್ಲಿ, ರಾಜ್ಯವನ್ನು ಇನ್ನಷ್ಟು ಹೆಚ್ಚಿನ ಅನಿಶ್ಚಿತತೆಯತ್ತ ನೂಕುವುದು, ರಾಷ್ಟ್ರಪತಿ ಆಳ್ವಿಕೆಯನ್ನು ಹೇರುವುದು ಜನಗಳಲ್ಲಿ ಆಳಗೊಳ್ಳುತ್ತಿರುವ ಪರಕೀಯ ಭಾವದ ಪ್ರಶ್ನೆಯನ್ನು ಎದುರಿಸಲು ನೆರವಾಗುವುದಿಲ್ಲ ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ಹೇಳಿದೆ.

ನಗ್ನ ಸಮಯಸಾಧಕತನ ಮತ್ತು ಅಧಿಕಾರದಾಹ ಕಾರಣ–ಯೆಚುರಿ

ರಾಷ್ಟ್ರೀಯ ಹಿತದೃಷ್ಟಿಯಿಂದ ತಾನು ಮೈತ್ರಿಯಿಂದ ಹೊರಬಂದಿರುವುದಾಗಿ ಬಿಜೆಪಿ ಈಗ ಹೇಳಿಕೊಳ್ಳುತ್ತಿದೆ. ಆದರೆ ಈ ರಾಜ್ಯದಲ್ಲಿ ಕಳೆದ ಮೂರು ವರ್ಷಗಳಲ್ಲಿ ಪರಿಸ್ಥಿತಿ ಸಂಪೂರ್ಣವಾಗಿ ಹದಗೆಡಲು ಬಿಜೆಪಿ ಪ್ರದರ್ಶಿಸಿರುವ ನಗ್ನ ಸಮಯಸಾಧಕತನ ಮತ್ತು ಅಧಿಕಾರದಾಹ ಕಾರಣ, ಕೇಂದ್ರ ಮತ್ತು ರಾಜ್ಯದಲ್ಲೂ ಅಧಿಕಾರದಲ್ಲಿದ್ದ ಪಕ್ಷವಾಗಿ ಅದು ತನ್ನ ಕೃತ್ಯಗಳ ಹೊಣೆಯಿಂದ ಜಾರಿಕೊಳ್ಳುವುದು ಸಾಧ್ಯವಿಲ್ಲ ಎಂದು ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಹೇಳಿದ್ದಾರೆ.

ಜಮ್ಮು ಮತ್ತು ಕಾಶ್ಮೀರದ ಜನತೆ ಕೇಂದ್ರ ಮತ್ತು ರಾಜ್ಯದಲ್ಲಿನ ಗೊಂದಲಮಯ ಮತ್ತು ನಯ–ನಾಜೂಕಿಲ್ಲದ ಧೋರಣೆಗಳಿಂದ ಭಾರೀ ತೊಂದರೆಗಳನ್ನು ಅನುಭವಿಸುತ್ತಿದ್ದಾರೆ. ಇದು ಇಲ್ಲಿನ ಪರಿಸ್ಥಿತಿಯನ್ನು ಮೂರು ವರ್ಷಗಳ ಹಿಂದೆ ಊಹಿಸಲೂ ಆಗದಿರದಂತಹ ಮಟ್ಟಕ್ಕೆ ತಂದು ನಿಲ್ಲಿಸಿದೆ. ಮೋದಿಯವರು ಏನೇ ಹೇಳಿಕೊಂಡರೂ, ಸಮರ್ಥಿಸಿಕೊಂಡರೂ ಈ ಸಂಗತಿ ಬದಲಾಗುವುದಿಲ್ಲ ಎಂದು ಯೆಚುರಿ ಹೇಳಿದ್ದಾರೆ.

ಆಳವಾದ ಬಿಕ್ಕಟ್ಟನ್ನು ತಂದ ಮೇಲೆಯೇ ಕೊನೆಗೊಂಡಿರುವ ನೀತಿಬಾಹಿರ ಮೈತ್ರಿ–ತರಿಗಾಮಿ

ಜಮ್ಮು ಮತ್ತು ಕಾಶ್ಮೀರದ ಬೆಳವಣಿಗೆಗಳ ಬಗ್ಗೆ ಮಾತಾಡುತ್ತ ರಾಜ್ಯದ ಹಿರಿಯ ಸಿಪಿಐ(ಎಂ) ಮುಖಂಡ ಮತ್ತು ಶಾಸಕರೂ ಆದ ಮಹಮ್ಮದ್ ಯೂಸುಫ್ ತರಿಗಾಮಿ ಪಿಡಿಪಿ ಮತ್ತು ಬಿಜೆಪಿ ಈ ಎರಡೂ ಪಕ್ಷಗಳ ಮುಖಂಡತ್ವ ರಾಜ್ಯವನ್ನು ಆಳವಾದ ಬಿಕ್ಕಟ್ಟಿಗೆ ತಂದ ಮೇಲೆಯೇ ಕೊನೆಗೊಳಿಸಿರುವ ತಮ್ಮ ನೀತಿಬಾಹಿರ ಮೈತ್ರಿಯ ಬಗ್ಗೆ ರಾಜ್ಯದ ಜನತೆಗೆ ಮತ್ತು ದೇಶದ ಜನತೆಗೂ ಉತ್ತರ ಕೊಡಬೇಕಾಗಿದೆ ಎಂದಿದ್ದಾರೆ.

ಹಿಂದಿನ ದಿನದ ವರೆಗೂ ಇವರು ಪರಸ್ಪರ ಹೊಗಳಿಕೊಳ್ಳುತ್ತಿದ್ದರು. ಈಗ ಭಿನ್ನ ಸ್ವರಗಳು ಎರಡೂ ಕಡೆಗಳಿಂದ ಹೊರಡುತ್ತಿವೆ. ಇದ್ದಕ್ಕಿದ್ದಂತೆ ಏನಾಯಿತು ಎಂದು ಜನರು ತಿಳಿಯಬೇಕಾಗಿದೆ.

ಎರಡೂ ಪಕ್ಷಗಳ ಮುಖಂಡರು ಇದು ರಾಜ್ಯದ ಜನತೆಗೆ ಪರಿಹಾರವನ್ನು ಮತ್ತು ವಿವಿಧ ಪ್ರದೇಶಗಳ ಮತ್ತು ಸಮುದಾಯಗಳ ನಡುವಿನ ಸಂಬಂಧಗಳ ಬೆಸುಗೆಯನ್ನು ಗಟ್ಟಿಗೊಳಿಸುವ ಒಂದು ಅಭೂತಪೂರ್ವ ಮೈತ್ರಿಯೆಂದು ಬೆನ್ನು ತಟ್ಟಿಕೊಂಡಿದ್ದರು.

ಈ ಎರಡು ಪಕ್ಷಗಳ ನಡುವೆ ಸೈದ್ಧಾಂತಿಕವಾಗಿ ಅಥವ ರಾಜಕೀಯವಾಗಿ ಯಾವ ಸಾಮ್ಯತೆಯೂ ಇಲ್ಲ, ಆದ್ದರಿಂದ ಕೇವಲ ಅಧಿಕಾರವನ್ನು ಹಂಚಿಕೊಂಡು ಆನಂದಿಸಲು ಒಟ್ಟುಸೇರಿದ್ದಾರೆ ಎಂದು ನಾವು ಮೊದಲ ದಿನದಿಂದಲೇ ಹೇಳುತ್ತ ಬಂದಿದ್ದೇವೆ. ರಾಜ್ಯದಲ್ಲಿನ ಪರಿಸ್ಥಿತಿಯ ಬಗ್ಗೆ ಒಂದು ಸ್ಪಷ್ಟವಾದ ರಾಜಕೀಯ ನಿಲುಮೆ ಇರಬೇಕು, ಇದು ವಿಶ್ವಾಸ ಕುದುರಿಸುವ ನಿರ್ದಿಷ್ಟ ಕ್ರಮಗಳೊಂದಿಗೆ ಸಂವಾದದ ಒಂದು ವಿಶ್ವಾಸಾರ್ಹ ಪ್ರಕ್ರಿಯೆಯನ್ನು ಆರಂಭಿಸಲು ನೆರವಾಗುವಂತಿರಬೇಕು ಎಂದು ನಾವು ಮತ್ತೆ–ಮತ್ತೆ ಒತ್ತಿ ಹೇಳುತ್ತಿದ್ದೆವು, ಈಗಲೂ ಅದನ್ನೇ ಹೇಳುತ್ತೇವೆ. ಆದರೆ ಕೇಂದ್ರದ ಆಳ್ವಿಕೆ ಪ್ರಸಕ್ತ ಬಿಕ್ಕಟ್ಟನ್ನು ಮತ್ತಷ್ಟು ಹೆಚ್ಚಿಸುತ್ತದೆ ಎಂಬುದು ನಮ್ಮ ಆತಂಕ ಎಂದು ತರಿಗಾಮಿ ಹೇಳಿದ್ದಾರೆ.



ಸತ್ಯಸಾಧನ ಚಕ್ರವರ್ತಿ ನಿಧನ

ಪಶ್ಚಿಮ ಬಂಗಾಲದ ಎಡರಂಗ ಸರಕಾರದಲ್ಲಿ ಒಂದು ದಶಕಕ್ಕೂ ಹೆಚ್ಚು ಕಾಲ ಉನ್ನತ ಶಿಕ್ಷಣ ಮಂತ್ರಿಯಾಗಿ ಸೇವೆ ಸಲ್ಲಿಸಿದ್ ಸತ್ಯಸಾಧನ ಚಕ್ರವರ್ತಿ ಜೂನ್ 16 ರಂದು ನಿಧನರಾಗಿದ್ದಾರೆ. ಅವರಿಗೆ 85 ವರ್ಷವಾಗಿತ್ತು.

ಅವರು 1980 ರಲ್ಲಿ ಕೊಲ್ಕತ ದಕ್ಷಿಣ ಕ್ಷೇತ್ರದಿಂದ ಲೋಕಸಭೆಗೆ ಚುನಾಯಿತರಾಗಿದ್ದರು. 1991ರಲ್ಲಿ ವಿಧಾನಸಭಾ ಚುನಾವಣೆಗಳಲ್ಲಿಯೂ ಗೆದ್ದು ಎಡರಂಗ ಸರಕಾರದಲ್ಲಿ ಉನ್ನತ ಶಿಕ್ಷಣ ಮಂತ್ರಿಯಾದರು. 2006ರ ವರೆಗೂ ಅವರು ಆ ಹುದ್ದೆಯಲ್ಲಿದ್ದರು.

ಜುಲೈ2: ವಾಲ್‌ಮಾರ್ಟ್–ಫ್ಲಿಪ್‌ಕಾರ್ಟ್ ವ್ಯವಹಾರದ ವಿರುದ್ಧ ವ್ಯಾಪಾರಿಗಳ ಪ್ರತಿಭಟನೆ

ಅಮೆರಿಕನ್ ಚಿಲ್ಲರೆ ವ್ಯಾಪಾರ ದೈತ್ಯ ವಾಲ್‌ಮಾರ್ಟ್ ದೇಶದಲ್ಲಿ ಹುಟ್ಟಿ ಬೆಳೆದ ಫ್ಲಿಪ್‌ಕಾರ್ಟನ್ನು ವಹಿಸಿ ಕೊಂಡಿರುವ ವ್ಯವಹಾರವನ್ನು ಪ್ರತಿಭಟಿಸಿ ದೇಶದ 1000 ಸ್ಥಳಗಳಲ್ಲಿ ವ್ಯಾಪಾರಿಗಳು ಪ್ರತಿಭಟನೆ ನಡೆಸುತ್ತಾರೆ ಎಂದು ಅಖಿಲ ಭಾರತ ವ್ಯಾಪಾರಿಗಳ ಮಹಾಒಕ್ಕೂಟ(ಸಿಎಐಟಿ) ಹೇಳಿದೆ. ಇದು ಭಾರತ ಸರಕಾರದ ಎಫ್‌ಡಿಐ ಕುರಿತ ಪತ್ರಿಕಾ ಟಿಪ್ಪಣಿ–3ರ ಉಲ್ಲಂಘನೆಯಾಗಿದೆ, ಈ ವ್ಯವಹಾರವನ್ನು ತಿರಸ್ಕರಿಸಬೇಕು, ಒಂದು ಇ–ವಾಣಿಜ್ಯ ನೀತಿಯನ್ನು ರೂಪಿಸಬೇಕು ಮತ್ತು ಈ ವಲಯಕ್ಕೆ ಒಂದು ನಿಯಂತ್ರಣ ಪ್ರಾಧಿಕಾರವನ್ನು ರಚಿಸಬೇಕು ಎಂದು ಈ ಸಂಘಟನೆ ಆಗ್ರಹಿಸಿದೆ.

ಸರಕಾರದ ಕಾರ್ಮಿಕ–ವಿರೋಧಿ, ರೈತ–ವಿರೋಧಿ ಮತ್ತು ರಾಷ್ಟ್ರ–ವಿರೋಧಿ ಧೋರಣೆಗಳ ವಿರುದ್ಧ ಮಜ್ದೂರ್–ಕಿಸಾನ್ ಸಂಘರ್ಷ ರ್ಯಾಲಿ–ಸಪ್ಟಂಬರ್ 5, 2018



ಭಾರತೀಯ ಕಾರ್ಮಿಕ ಸಂಘಗಳ ಕೇಂದ್ರ (ಸಿಐಟಿಯು), ಅಖಿಲ ಭಾರತ ಕಿಸಾನ್ ಸಭಾ(ಎಐಕೆಎಸ್) ಮತ್ತು ಅಖಿಲ ಭಾರತ ಕೃಷಿ ಕಾರ್ಮಿಕರ ಸಂಘ(ಎಐಎಡಬ್ಲ್ಯುಯು) ಸರಕಾರದ ಕಾರ್ಮಿಕ–ವಿರೋಧಿ, ರೈತ–ವಿರೋಧಿ ಮತ್ತು ಜನ–ವಿರೋಧಿ ಧೋರಣೆಗಳ ವಿರುದ್ಧ ಸಂಸತ್ತಿನ ಎದುರು ಸಪ್ಟಂಬರ್ 5 ರಂದು ಒಂದು ಬೃಹತ್ 'ಮಜ್ದೂರ್–ಕಿಸಾನ್ ಸಂಘರ್ಷ ರ್ಯಾಲಿ' ಸಂಘಟಿಸಲು ನಿರ್ಧರಿಸಿವೆ. ದೇಶದೆಲ್ಲೆಡೆಗಳಿಂದ ಕಾರ್ಮಿಕರು, ನೌಕರರು, ರೈತರು ಮತ್ತು ಕೃಷಿಕಾರ್ಮಿಕರು ಈ ರ್ಯಾಲಿಯಲ್ಲಿ ಭಾಗವಹಿಸುತ್ತಾರೆ ಎಂದು ಅವು ಹೇಳಿವೆ.

ಕೇಂದ್ರದಲ್ಲಿನ ಸರಕಾರ ಅನುಸರಿಸುತ್ತಿರುವ ಧೋರಣೆಗಳಿಂದಾಗಿ ದೇಶದ ಬಹುಪಾಲು ಶ್ರಮಜೀವಿಗಳ ಜೀವನ ಪರಿಸ್ಥಿತಿಗಳು ಹದಗೆಡುತ್ತಿವೆ. ಕಾರ್ಮಿಕರು ಮತ್ತು ಜನಸಾಮಾನ್ಯರಿಗೆ ಬೆಲೆಯೇರಿಕೆಗಳಿಂದಾಗಿ, ಅದರಲ್ಲೂ ಆಹಾರ ಪದಾರ್ಥಗಳ ಬೆಲೆಯೇರಿಕೆಯಿಂದಾಗಿ ತಮ್ಮ ಅಲ್ಪ ಬಜೆಟ್‌ಗಳನ್ನು ಸರಿದೂಗಿಸುವುದು ಕಷ್ಟಕರವಾಗಿದ್ದರೆ, ರೈತರು ತಮ್ಮ ಉತ್ಪನ್ನಗಳಿಗೆ ಫಲದಾಯಕ ಬೆಲೆಗಳನ್ನು ಪಡೆಯುತ್ತಿಲ್ಲ. ಕೃಷಿ ಕಾರ್ಮಿಕರಿಗೆ ಹಳ್ಳಿಗಳಲ್ಲಿ ಉದ್ಯೋಗ ದೊರೆಯುತ್ತಿಲ್ಲ. ಉದ್ಯೋಗದ ಪರಿಸ್ಥಿತಿ ಇನ್ನಷ್ಟು ಕೆಡುತ್ತಿದೆ. ಸ್ವಲ್ಪವೇ ಹೊಸ ಉದ್ಯೋಗಗಳು ನಿರ್ಮಾಣವಾಗುತ್ತಿವೆ. ಈಗಿರುವ ಲಕ್ಷಾಂತರ ಉದ್ಯೋಗಗಳು ನಷ್ಟಗೊಳ್ಳುತ್ತಿವೆ ಎಂದು ಈ ಸಂದರ್ಭದಲ್ಲಿ ಈ ಮೂರು ಸಂಘಟನೆಗಳು ನೀಡಿರುವ ಹೇಳಿಕೆ ತಿಳಿಸುತ್ತದೆ.

ಸರಕಾರ ಖಾಸಗೀಕರಣದ ಧಾವಂತದಲ್ಲಿದೆ. ರಕ್ಷಣೆ, ವಿಮೆ ಮುಂತಾದ ಆಯಕಟ್ಟಿನ ವಲಯಗಳೂ ಸೇರಿದಂತೆ ಸಾರ್ವಜನಿಕ ವಲಯದ ಉದ್ದಿಮೆಗಳನ್ನಷ್ಟೇ ಅಲ್ಲ, ಆರೋಗ್ಯ, ಶಿಕ್ಷಣ, ಸಾರಿಗೆ ಮುಂತಾದ ಅಗತ್ಯ ಸೇವೆಗಳನ್ನೂ ಖಾಸಗೀಕರಿಸಲಾಗುತ್ತಿದೆ. ಶಿಕ್ಷಣ ಮತ್ತು ಆರೋಗ್ಯ ಹೆಚ್ಚುಹೆಚ್ಚಾಗಿ ಶ್ರೀಮಂತರ ಸೊತ್ತಾಗುತ್ತಿದೆ. ಸುಮಾರಾಗಿ ಎಲ್ಲ ಸೂಕ್ಷ್ಮ ವಲಯಗಳಲ್ಲೂ 100% ಎಫ್‌ಡಿಐಗೆ ಅವಕಾಶ ನೀಡಲಾಗುತ್ತಿದೆ ಎಂದಿರುವ ಈ ಜಂಟಿ ಹೇಳಿಕೆ ರಾಷ್ಟ್ರೀಯ ಹಿತಾಸಕ್ತಿಗಳನ್ನೂ ಬಹುರಾಷ್ಟ್ರೀಯ ಕಂಪನಿಗಳ ಪರವಾಗಿ ಬಲಿಗೊಡಲಾಗುತ್ತಿದೆ ಎಂದು ಖೇದ ವ್ಯಕ್ತಪಡಿಸಿದೆ.

ಭೂಮಿಯನ್ನು ರೈತರಿಂದ ಬಲವಂತದಿಂದ ಕಸಿದುಕೊಂಡು ಕಾರ್ಪೊರೇಟ್‌ಗಳಿಗೆ ಮತ್ತು ಭೂಮಾಫಿಯಾಗಳಿಗೆ ವಹಿಸಿಕೊಡಲಾಗುತ್ತಿದೆ. ಆದಿವಾಸಿಗಳನ್ನು ಸ್ಥಳಾಂತರಗೊಳಿಸಿ ಅರಣ್ಯಗಳಿಂದ ಹೊರಗೋಡಿಸಲಾಗುತ್ತಿದೆ. ರೈತರಿಗೆ, ಅದರಲ್ಲೂ ಬಡ ರೈತರಿಗೆ ಅಗ್ಗದ ಸಾಂಸ್ಥಿಕ ಸಾಲಗಳು ಲಭ್ಯವಾಗುತ್ತಿಲ್ಲ. ಇದರಿಂದಾಗಿ ಸಾವಿರಾರು ರೈತರು ಈಗಲೂ ಆತ್ಮಹತ್ಯೆಗಳನ್ನು ಮಾಡಿಕೊಳ್ಳುತ್ತಿದ್ದಾರೆ

ಅತ್ತ ಕಾರ್ಮಿಕರ ಮೇಲೆ 'ವ್ಯಾಪಾರ–ವ್ಯವಹಾರಗಳ ಸುಗಮತೆ'ಯನ್ನು ಉತ್ತಮ ಪಡಿಸುವ ಹೆಸರಿನಲ್ಲಿ ಕಾರ್ಮಿಕ ಕಾಯ್ದೆಗಳನ್ನು ತಿದ್ದುಪಡಿ ಮಾಡಿ ದಾಳಿಗಳನ್ನು ಮಾಡಲಾಗುತ್ತಿದೆ. ಎಲ್ಲ ಜನವಿಭಾಗಗಳ ಪ್ರಜಾಪ್ರಭುತ್ವ ಹಕ್ಕುಗಳ ಮೇಲೆ ದಾಳಿ ನಡೆಯುತ್ತಿದೆ. ದೇಶಾದ್ಯಂತ ದಲಿತರು, ಅಲ್ಪಸಂಖ್ಯಾತರು, ಮಹಿಳೆಯರು ಮತ್ತು ಮಕ್ಕಳ ಮೇಲೆ ದಾಳಿಗಳು ಹೆಚ್ಚುತ್ತಿವೆ. ಕೋಮುವಾದಿ ಶಕ್ತಿಗಳು ಜನಗಳ ನಡುವೆ ದ್ವೇಷವನ್ನು ಹರಡಿಸುತ್ತಿದ್ದಾರೆ. ಅವರು ಜನಗಳ ಬದುಕನ್ನು ನಿರ್ದೇಶಿಸಲು ಮತ್ತು ತಮ್ಮ ಹತೋಟಿಯಲ್ಲಿಡಲು, ಮತ್ತು ತಮ್ಮ ಯೋಜನಾ ವಿಧಾನವನ್ನು ಇಡೀ ದೇಶದ ಮೇಲೆ ಹೇರಲು ಪ್ರಯತ್ನಿಸುತ್ತಿದ್ದಾರೆ. ಜನಗಳ ಐಕ್ಯತೆಯನ್ನು ಮುರಿಯುವ,ಅವರನ್ನು ವಿಭಜಿಸುವ ಈ ಶಕ್ತಿಗಳನ್ನು ಹತೋಟಿಯಲ್ಲಿಡಲು ದೃಢ ಕ್ರಮಗಳನ್ನು ಕೈಗೊಳ್ಳುವ ಬದಲು ಸರಕಾರಗಳು ಸಕ್ರಿಯವಾಗಿ ಅವುಗಳಿಗೆ ಕೃಪಾಪೋಷಣೆಯನ್ನು ಒದಗಿಸುತ್ತಿವೆ.

ಸರಕಾರಗಳು ಕಾರ್ಮಿಕರು, ರೈತರು, ಜನಸಾಮಾನ್ಯರು ತಂತಮ್ಮ ಜಂಟಿ ವೇದಿಕೆಗಳಿಂದ ಮತ್ತೆ–ಮತ್ತೆ ಎತ್ತುತ್ತಿರುವ ಬೇಡಿಕೆಗಳನ್ನು ಸಂಪೂರ್ಣವಾಗಿ ಉಪೇಕ್ಷಿಸುತ್ತಿವೆ. ಒಟ್ಟಾರೆಯಾಗಿ, ಈ ಸರಕಾರದ ಧೋರಣೆಗಳು ಕಾರ್ಮಿಕರ, ರೈತರ, ಮತ್ತು ಎಲ್ಲ ಶ್ರಮಜೀವಿ ವಿಭಾಗಗಳ ಹಿತಾಸಕ್ತಿಗಳಿಗೆ, ರಾಷ್ಟ್ರೀಯ ಹಿತಾಸಕ್ತಿಗಳಿಗೂ ವಿರುದ್ಧವಾಗಿವೆ ಎಂದಿರುವ ಈ ಮೂರು ಸಂಘಟನೆಗಳು ಈ ಹಿನ್ನೆಲೆಯಲ್ಲಿ ಸಪ್ಟಂಬರ್ 5ರ 'ಮಜ್ದೂರ್–ಕಿಸಾನ್ ಸಂಘರ್ಷ ರ್ಯಾಲಿ'ಯನ್ನು ಕೆಲವೇ ದೊಡ್ಡ ದೇಶಿ–ವಿದೇಶಿ ಕಾರ್ಪೊರೇಟ್‌ಗಳಿಗೆ, ಭೂಮಾಲಕರಿಗೆ ಮತ್ತು ಗ್ರಾಮೀಣ ಶ್ರೀಮಂತರಿಗೆ ಮಾತ್ರ ಪ್ರಯೋಜನ ಒದಗಿಸುವ ಈ ಧೋರಣೆಗಳನ್ನು ಹಿಂತೆಗೆದುಕೊಳ್ಳುವಂತೆ ಆಗ್ರಹಿಸಲಿಕ್ಕಾಗಿ, ಪರ್ಯಾಯ ಜನಪರ ಧೋರಣೆಗಳನ್ನು ಜಾರಿಗೆ ತರಬೇಕೆಂದು ಒತ್ತಾಯಿಸಲಿಕ್ಕಾಗಿ ಈ ರ್ಯಾಲಿಯನ್ನು ಸಂಘಟಿಸಲಾಗುತ್ತಿದೆ ಎಂದಿವೆ.

ದೇಶದ ಜಿಡಿಪಿಯನ್ನು, ಸಂಪತ್ತನ್ನು ಸೃಷ್ಟಿಸುವ ಶ್ರಮಜೀವಿಗಳನ್ನು, ಕಾರ್ಮಿಕರು, ರೈತರು ಮತ್ತು ಕೃಷಿ ಕಾರ್ಮಿಕರನ್ನು, ಎಲ್ಲ ಶ್ರಮಜೀವಿ ಜನವಿಭಾಗಗಳ ಕಲ್ಯಾಣದ ಬಗ್ಗೆ ಕಾಳಜಿ ಇರುವ ನಿಜವಾದ ದೇಶಪ್ರೇಮಿ ಜನಗಳನ್ನು ಪ್ರತಿನಿಧಿಸುವ ತಾವು ಈ ಜನ–ವಿರೋಧಿ ಧೋರಣೆಗಳ ವಿರುದ್ಧ

ಪುಟ 7 ನೋಡಿ

ಸಂಪಾದಕೀಯ

ಬಜೆಟ್, ಸಿಎಂಪಿ, ಸಾಲಮನ್ನಾ ಮತ್ತು ಮೈತ್ರಿ ಸರಕಾರ

ಮೈತ್ರಿ ಸರಕಾರ ಇನ್ನೂ ಟೇಕ್ ಆಫ್ ಆಗಿಲ್ಲ ಎಂಬ ರಾಜ್ಯದ ಜನತೆಯ ಆತಂಕ ಮುಂದುವರೆದಿದೆ. ಮುಖ್ಯಮಂತ್ರಿ ಕುಮಾರಸ್ವಾಮಿ ಅವರು ಜುಲೈ ಮೊದಲ ವಾರದಲ್ಲಿ ಹೊಸ ಪೂರ್ಣಪ್ರಮಾಣದ ಬಜೆಟ್ ಮಂಡಿಸುವುದಾಗಿ ಘೋಷಿಸಿದ ಬೆನ್ನಲ್ಲಿ ಸಿದ್ದರಾಮಯ್ಯ ಪೂರ್ಣಪ್ರಮಾಣದ ಬಜೆಟ್ ಈಗಾಗಲೇ ಮಂಡಿಸಿರುವುದರಿಂದ ಪೂರಕ ಬಜೆಟ್ ಮಂಡಿಸಿದರೆ ಸಾಕು ಎಂದು ಹೇಳಿಕೆ ನೀಡಿದ್ದು ಸಾಕಷ್ಟು ಗೊಂದಲವುಂಟು ಮಾಡಿತ್ತು. ಈ ಬಗ್ಗೆ ಎರಡು ಪಕ್ಷಗಳ ಸಮನ್ವಯ ಸಮಿತಿಯಲ್ಲಿ ನಿರ್ಣಯವೂ ಆಗಿದೆ ಎಂದಿದ್ದು ಇನ್ನಷ್ಟು ಚರ್ಚೆಗೆ ಗ್ರಾಸವಾಗಿತ್ತು. ಕೊನೆಗೂ ಕುಮಾರಸ್ವಾಮಿ ಅವರು ರಾಹುಲ್ ಗಾಂಧಿ ಅವರ ಜತೆ ಚರ್ಚಿಸಿ ಹೊಸ ಪೂರ್ಣಪ್ರಮಾಣದ ಬಜೆಟಿಗೆ ಒಪ್ಪಿಗೆ ಪಡೆದರು. ಪ್ರಮುಖ ವಿಷಯಗಳ ಕುರಿತು ನಿರ್ಣಯಗಳಿಗೆ ಸಮನ್ವಯ ಸಮಿತಿ ಮತ್ತು ರಾಜ್ಯದ ಹಿರಿಯ ಕಾಂಗ್ರೆಸ್ ನಾಯಕರನ್ನು ನಿರ್ಲಕ್ಷಿಸಿ ಸೀದಾ ರಾಹುಲ್ ಗಾಂಧಿ ಅವರ ಬಳಿ ಹೋಗಿ ಚರ್ಚಿಸುತ್ತಾರೆ ಎಂಬ ಕಾಂಗ್ರೆಸಿನ ಹಿರಿಯ ನಾಯಕರ ಗೊಣಗಾಟಕ್ಕೆ ಇದು ಕಾರಣವಾಗಿತ್ತು.

ಇದೊಂದು ಅನಗತ್ಯ ವಿವಾದವಾಗಿತ್ತು. ಪ್ರಜಾಪ್ರಭುತ್ವ ನೀತಿಗಳ ಮತ್ತು ಸಂಪ್ರದಾಯಗಳ ಪ್ರಕಾರ ಹೊಸ ಸರಕಾರ ಪೂರ್ಣಪ್ರಮಾಣದ ಬಜೆಟನ್ನು ಮಂಡಿಸುವುದು ಸರಿಯಾಗಿಯೇ ಇತ್ತು. ಕೇವಲ ಮೂರು ತಿಂಗಳ ಆಡಳಿತದ ಅವಧಿ ಉಳಿದಿರುವಾಗ ಕಾಂಗ್ರೆಸ್ ಸರಕಾರ ಪೂರ್ಣ ಪ್ರಮಾಣದ ಬಜೆಟ್ ಮಂಡಿಸಿದ್ದೇ ನಿಜವಾಗಿಯೂ ಪ್ರಜಾಪ್ರಭುತ್ವ ನೀತಿಗಳಿಗೆ ವಿರುದ್ಧವಾಗಿತ್ತು. ಆ ಬಜೆಟ್ ಬರಿಯ ಚುನಾವಣಾ ಭಾಷಣದಂತೆ ಇತ್ತು. ಮಾತ್ರವಲ್ಲದೆ ಈಗ ಎರಡು ಪಕ್ಷಗಳ ಮೈತ್ರಿ ಸರಕಾರ ರಚನೆಯಾಗಿದ್ದು, ಜನಾದೇಶವನ್ನು ಗಮನದಲ್ಲಿಟ್ಟುಕೊಂಡು ಎರಡೂ ಪಕ್ಷಗಳ ಚುನಾವಣಾ ಪ್ರಣಾಳಿಕೆಗಳನ್ನು ಆಧರಿಸಿ ಹೊಸ ಪೂರ್ಣ ಪ್ರಮಾಣದ ಬಜೆಟ್ ತಯಾರಿಸಿ ಮಂಡಿಸುವುದು ಪ್ರಜಾಪ್ರಭುತ್ವ ನೀತಿಗಳಿಗೆ ಅನುಗುಣವಾಗಿಯೇ ಇತ್ತು. ಮುಖ್ಯಮಂತ್ರಿಗಳು ಘೋಷಿಸಿದ ಸಾಲಮನ್ನಾ ರಾಜ್ಯ ಸರಕಾರದ ಈಗಿನ ಸಂಪನ್ಮೂಲಗಳ ದೃಷ್ಟಿಯಿಂದ ಸಾಧ್ಯವಿಲ್ಲ ಎಂಬ ಕಾಂಗ್ರೆಸ್ ಅಭಿಪ್ರಾಯವೂ ಸಮನ್ವಯ ಸಮಿತಿಯ ಸಭೆಯಲ್ಲಿ ವ್ಯಕ್ತವಾಗಿ ಭಿನ್ನಾಭಿಪ್ರಾಯಗಳಿಗೆ ಕಾರಣವಾಗಿತ್ತು ಎಂದು ವರದಿಯಾಗಿದೆ.

ಮೈತ್ರಿ ಸರಕಾರ ರಚನೆಯಾಗಿ ಹಲವು ವಾರಗಳು ಕಳೆದರೂ ಒಪ್ಪಿತ ಕನಿಷ್ಠ ಸಾಮಾನ್ಯ ಕಾರ್ಯಕ್ರಮ (ಸಿ.ಎಂ.ಪಿ.)ವೊಂದು ಇಲ್ಲದಿರುವುದೇ ಇವೆಲ್ಲ ಸಮಸ್ಯೆಗಳ ನಿಜವಾದ ಮೂಲಕಾರಣ. ಸಿ.ಎಂ.ಪಿ. ರಚಿಸಲು ವೀರಪ್ಪ ಮೊಯ್ಲಿ ಅಧ್ಯಕ್ಷತೆಯಲ್ಲಿ ಉಭಯ ಪಕ್ಷಗಳ ಸಭೆಯೊಂದು ರಚಿತವಾಗಿದ್ದು ಅದು ಒಂದೆರಡು ಸಭೆ ನಡೆಸಿದೆಯಷ್ಟೇ. ಅಲ್ಲೂ ಸಾಲಮನ್ನಾ ಬಗ್ಗೆ ಭಿನ್ನಾಭಿಪ್ರಾಯಗಳು ಬಂದಿವೆ ಎನ್ನಲಾಗಿದೆ. ಆದರೆ ಈ ಪ್ರಕ್ರಿಯೆಗೆ ಎರಡೂ ಪಕ್ಷಗಳು ಆದ್ಯತೆ ನೀಡಿಲ್ಲ. ಎರಡೂ ಪ್ರಣಾಳಿಕೆಗಳಲ್ಲಿ ಹಲವು ಸಾಮಾನ್ಯ ಅಂಶಗಳಿದ್ದರೂ, ಹಲವು ವ್ಯತ್ಯಾಸಗಳೂ ಇವೆ. ಅವುಗಳನ್ನು ಕೂಲಂಕಷವಾಗಿ ಚರ್ಚಿಸಿ ಕನಿಷ್ಠ ಸಾಮಾನ್ಯ ಕಾರ್ಯಕ್ರಮವೊಂದನ್ನು ರೂಪಿಸಲು ಎರಡೂ ಪಕ್ಷಗಳೂ ಆದ್ಯತೆ ನೀಡಬೇಕಾಗಿದೆ. ಇಂತಹ ಒಂದು ಚೌಕಟ್ಟು ರಚಿಸದೆ ಬಜೆಟ್ ರಚನೆಯ ಪ್ರಕ್ರಿಯೆ ಆರಂಭಿಸಿದ್ದು, ಇದು ಮುಂದೆ ಇನ್ನಷ್ಟು ಭಿನ್ನಾಭಿಪ್ರಾಯಗಳು ಸಮಸ್ಯೆಗಳಿಗೆ ಎಡೆ ಮಾಡಿಕೊಡಬಹುದು.

ಈ ನಡುವೆ ಮುಖ್ಯಮಂತ್ರಿಗಳು ಸಾಲಮನ್ನಾಕ್ಕೆ ಕೇಂದ್ರ ಸಕಾರದ ನೆರವು ಕೇಳಿದ್ದು ಸರಕಾರದ ಒಳಗೂ ಹೊರಗೂ ಚರ್ಚೆಗೆ ಕಾರಣವಾಗಿದೆ. ಮುಖ್ಯಮಂತ್ರಿಗಳು ಕೇಂದ್ರಸರ್ಕಾರದಿಂದ ನೆರವು ಕೇಳುವುದು ತಪ್ಪೇನಲ್ಲ. ರಾಜ್ಯ ಸರ್ಕಾರವೇ ಸಂಪೂರ್ಣ ಸಾಲಮನ್ನಾ ಮಾಡಲಿಕ್ಕೆ ಆಗೋದಿಲ್ಲ. ರಾಜ್ಯ ಸರ್ಕಾರಕ್ಕೆ ರಾಷ್ಟ್ರೀಕೃತ ಬ್ಯಾಂಕ್‌ಗಳ ಸಾಲಮನ್ನಾ ಮಾಡುವ ಅಧಿಕಾರವಿಲ್ಲ. ಇಲ್ಲದಿದದಲ್ಲಿ ಸಂಪೂರ್ಣ ಸಾಲಮನ್ನಾದ ವೆಚ್ಚವನ್ನು ರಾಜ್ಯ ಸರಕಾರವೇ ಭರಿಸಬೇಕಾಗುತ್ತದೆ. ಇದು ಈ ಸಮಸ್ಯೆಯನ್ನು ನವ-ಉದಾರವಾದಿ ನೀತಿಗಳ ಮೂಲಕ ಸೃಷ್ಟಿಸಿದ ಕೇಂದ್ರ ಸರಕಾರದ ಜವಾಬ್ದಾರಿ ಕೂಡಾ.

ಸಾಲಮನ್ನಾದ ಉದ್ದೇಶ, ಪರಿಣಾಮಗಳು ಮತ್ತು ಅದಕ್ಕೆ ಬೇಕಾದ ಸಂಪನ್ಮೂಲಗಳ ಬಗೆಗೂ ಸರಕಾರಕ್ಕೆ ಸ್ಪಷ್ಟತೆ ಇರಬೇಕು. ಬಡರೈತರು ಮತ್ತು ಮಧ್ಯಮ ವರ್ಗದ ರೈತರ ಸಾಲಮನ್ನಾ ಆಗಬೇಕು. ಶ್ರೀಮಂತರ, ಕಂಪೆನಿಗಳ ಸಾಲಮನ್ನಾ ಮಾಡಬಾರದು. ಅದೇ ಸಮಯದಲ್ಲಿ ಸಾಲಮನ್ನಾವೊಂದೇ ರೈತರ ಸಮಸ್ಯೆಗಳಿಗೆ ಪರಿಹಾರವಲ್ಲ. ಸಾಲಮನ್ನಾದ ಜೊತೆಗೆ ಸ್ವಾಮಿನಾಥನ್ ವರದಿ ಜಾರಿಮಾಡಿ ರೈತರ ಬೆಳೆಗಳಿಗೆ ಕನಿಷ್ಠ ಬೆಂಬಲ ಬೆಲೆಯನ್ನು ನೀಡಬೇಕು ಎನ್ನುವುದರ ಬಗೆಗೂ ಸರಕಾರಕ್ಕೆ ಸ್ಪಷ್ಟತೆ ಇರಬೇಕು. ಬಹಳ ಮುಖ್ಯವಾಗಿ ಸ್ವಾಮಿನಾಥನ್ ವರದಿ ಶಿಫಾರಸುಗಳು ಕಾನೂನಾಗಿ ಮಾರ್ಪಡಾಗಬೇಕು. ಇದು ಕೇಂದ್ರದ ಜವಾಬ್ದಾರಿ. ಈ ಕಾನೂನು ಜಾರಿಮಾಡದೆ ಕೃಷಿ ಬಿಕ್ಕಟ್ಟು ನಿವಾರಣೆ ಮಾಡಲಿಕ್ಕೆ ಆಗೋದಿಲ್ಲ. ಈ ವರದಿಯು ರೈತರ ಬೆಳೆಗೆ ಒಟ್ಟು ಖರ್ಚಿನ ಒಂದುವರೆ ಪಟ್ಟು ಬೆಲೆಯನ್ನು ಒದಗಿಸಬೇಕು ಎಂದು ಶಿಫಾರಸು ಮಾಡುತ್ತದೆ.

ಬಜೆಟ್, ಸಿ.ಎಂ.ಪಿ., ಸಾಲಮನ್ನಾ ಅಲ್ಲದೆಯೂ ಮೈತ್ರಿ ಸರಕಾರದಿಂದ ಯಾವ ರೀತಿಯ ಗಂಭೀರವಾದ ಕೆಲಸಗಳಾಗಲಿ ತುರ್ತು ಕೆಲಸಗಳಾಗಲಿ ಪ್ರಾರಂಭವಾಗಿಲ್ಲ. ಸರಕಾರ ರಚನೆಯಾಗಿ ಹಲವು ವಾರಗಳಾದರೂ ಮಂತ್ರಿಮಂಡಲದ ಸಭೆ ಕರೆಯಲಾಗಿಲ್ಲ. ಎರಡು ಪಕ್ಷಗಳ ನಡುವೆ ಗೊಂದಲಗಳು ಇಲ್ಲಿಯವರೆಗೂ ಹಾಗೆ ಮುಂದುವರೆದುಕೊಂಡು ಬರುತ್ತಾ ಇರುವುದರಿಂದಾಗಿ ಗಂಭೀರವಾದ ಸಮಸ್ಯೆಗಳಿಗೆ ಸೂಕ್ತ ನಿರ್ಧಾರಗಳನ್ನು ತೆಗೆದು ಕೊಳ್ಳಲು ಸಾಧ್ಯವಾಗಿಲ್ಲ. ಜನಸಾಮಾನ್ಯರ ಸಮಸ್ಯೆಗಳಿಗೆ ಪರಿಹಾರ ನೀಡುವುದರಲ್ಲಿ ಸರಕಾರ ಸಂಪೂರ್ಣ ನಿಷ್ಕ್ರಿಯವಾಗಿದೆ. ಅಂತಿಮವಾಗಿ ಜನಸಾಮಾನ್ಯರು ಬಲಿಪಶುಗಳಾಗುತ್ತಿದ್ದಾರೆ. ಉದಾ: ರಾಜ್ಯದ ನಾನಾ ಕಡೆಗಳಲ್ಲಿ ಸುರಿದ ತೀವ್ರ ಮಳೆಯಿಂದಾಗಿ ಹಲವು ಕಡೆ ಸಾವು ನೋವು ಸಂಭವಿಸಿವೆ, ಸಿಡಿಲು ಬಡಿತದಿಂದ ಜನರು ಸತ್ತಿದ್ದಾರೆ. ಹಲವು ಕಡೆ ಆಸ್ತಿ-ಪಾಸ್ತಿಗಳಿಗೆ ಧಕ್ಕೆ ಉಂಟಾಗಿದೆ. ಇವುಗಳಿಗೆ ತಕ್ಷಣವೇ ಸಚಿವ ಸಂಪುಟ ಸೇರಿ ಅವರುಗಳಿಗೆ ಏನು ಪರಿಹಾರ ನೀಡಬೇಕು ಎನ್ನುವ ನಿರ್ಧಾರ ಆಗಲಿಲ್ಲ. ಈಗಲೂ ರೈತರ ಆತ್ಮಹತ್ಯೆಗಳು ನಡೆಯುತ್ತಿವೆ. ಯಾರೂ ಇದನ್ನೂ ಗಮನಿಸುತ್ತಿಲ್ಲ.

ಬಲಿಷ್ಠ ಕಾಂಗ್ರೆಸಿಗರು ಮುಖ್ಯಮಂತ್ರಿಗಳ ಮಾತಿಗೆ ಸೊಪ್ಪು ಹಾಕುತ್ತಿಲ್ಲ. ಮುಖ್ಯಮಂತ್ರಿಗಳು ಧೈರ್ಯ ತೋರುತ್ತಿಲ್ಲ. ಬದಲಾಗಿ ಸಮಸ್ಯೆಗಳು ಬಂದಾಗ ಎಲ್ಲ ತೀರ್ಮಾನಗಳಿಗಾಗಿ ದೆಹಲಿಗೆ ಹೋಗುತ್ತಿದ್ದಾರೆ. ಇವೆಲ್ಲ ಕಾರಣದಿಂದಾಗಿ ಸರಕಾರ ಸರಿಯಾಗಿ ಕೆಲಸ ಮಾಡಲು ಸಾಧ್ಯವಾಗುತ್ತಿಲ್ಲ. ಸಚಿವ ಸಂಪುಟದ ರಚನೆಯೂ ಪೂರ್ಣವಾಗಿಲ್ಲ. ಬದಲಾಗಿ ನಿಗಮ ಮಂಡಳಿಗಳ ಅಧ್ಯಕ್ಷರ ನೇಮಕವಾದ ಮೇಲೆ ಅದನ್ನು ಕೈಗೆತ್ತಿಕೊಳ್ಳಲು ನಿರ್ಧರಿಸಲಾಗಿದೆ. ಈಗ ಅದಕ್ಕೆ ಪೈಪೋಟಿ ಆರಂಭವಾಗಿದೆ. ಸಚಿವ ಆಕಾಂಕ್ಷಿಗಳ ಆಕ್ರೋಶಭರಿತ ಚಟುವಟಿಕೆಗಳು ಮುಂದುವರೆದಿವೆ. ಈಗಿನ ಸಚಿವರ ಖಾತೆ ಹಂಚಿಕೆ ಬಗ್ಗೆ ಅಸಮಾಧಾನ ಮುಂದುವರೆದಿದೆ. ಎರಡು ಪಕ್ಷಗಳ ನಡುವೆ ಮಾತ್ರವಲ್ಲ, ಒಂದೇ ಪಕ್ಷದ ಸಚಿವ ಸ್ಥಾನ ಸಿಕ್ಕಿದವರಿಗೂ ಸಿಗದವರಿಗೂ 'ಅರ್ಹತೆ' ಬಗ್ಗೆ ಬಹಿರಂಗ ಘರ್ಷಣೆ ಕಾಣಬರುತ್ತಿದೆ. ಜಮೀರ್ ಅಹ್ಮದ್ ಮತ್ತು ತನ್ವೀರ್ ಸೇಠ್ ನಡುವೆ ಹಾಗೂ ಜಯಮಾಲಾ ಮತ್ತು ಲಕ್ಷ್ಮಿ ಹೆಬ್ಬಾಳಕರ್ ನಡುವೆ ಬಹಿರಂಗ ಕಿತ್ತಾಟ ಅಸಹ್ಯ ಕೀಳುಮಟ್ಟ ಮುಟ್ಟಿದೆ.

ಇವೆಲ್ಲದರಿಂದ ಆತಂಕಕ್ಕೊಳಗಾದ ಕುಮಾರಸ್ವಾಮಿ ತಮ್ಮ ಸರಕಾರದ ಭದ್ರತೆ ಒಂದು ವರ್ಷ ಗ್ಯಾರಂಟಿ ಎಂದು ಹೇಳಿದ್ದು, ದೇವೆಗೌಡರು ಸಹ ಅದಕ್ಕೆ ದನಿಗೂಡಿಸಿದ್ದು, ಇದ್ದಕ್ಕೆ ಕಾಂಗ್ರೆಸಿಗರು ತೀವ್ರವಾಗಿ ಪ್ರತಿಕ್ರಿಯಿಸಿದರು. ಇವೆಲ್ಲದಕ್ಕೆ ಪರಿಹಾರ ಕಂಡುಕೊಳ್ಳದಿದ್ದರೆ ಈ ಸರಕಾರ ಐದುವರ್ಷ ಮುಂದುವರೆಯಲು ಬಹುಶಃ ಸಾಧ್ಯವಿಲ್ಲ. ಮುಂದಿನ ಲೋಕಸಭಾ ಚುನಾವಣೆಯ ವರೆಗೆ ಮಾತ್ರ ಗ್ಯಾರಂಟಿ ಕೊಡಬಹುದು. ಕುಮಾರಸ್ವಾಮಿ ಐದು ವರ್ಷ ಮುಖ್ಯಮಂತ್ರಿಯಾಗಿ ಮುಂದುವರಿದರೆ ಜೆ.ಡಿ.ಎಸ್ ಪಕ್ಷ ಬಲಗೊಳ್ಳಲಿದೆ. ಕಾಂಗ್ರೆಸ್ ಬಲಹೀನಗೊಳ್ಳಬಹುದು ಎಂಬ ಆತಂಕ ಕಾಂಗ್ರೆಸ್ ನಾಯಕರಲ್ಲಿದೆ. 2019ರಲ್ಲಿ ಕೇಂದ್ರದಲ್ಲಿ ಕಾಂಗ್ರೆಸಿಗೆ ಒಳ್ಳೆಯ ಫಲಿತಾಂಶಗಳು ಬಂದರೆ, ಕಾಂಗ್ರೆಸ್ ಮೈತ್ರಿಯನ್ನು ಮುಂದುವರೆಸದೆ ಹೋಗಬಹುದು ಎಂಬ ಆತಂಕ ಜೆಡಿ-ಎಸ್ ಗೂ ಇದೆ. ●

ಮೋದಿಯವರಿಗೆ ಯೋಗ ಮಾಡುವ ಅರ್ಹತೆ ಇದೆಯೇ? :

ಅವರಿಗೆ ಪತಂಜಲಿ ವಿವರಿಸಿದ ಯೋಗ ಎಂದರೇನು ಗೊತ್ತಿದೆಯೇ? ಅಹಿಂಸೆ, ಸತ್ಯ, ಅಪರಿಗ್ರಹ ಇದರ ಮೊದಲ ಹೆಜ್ಜೆ.

ಯೋಗ ಸೂತ್ರದ ಮೂಲಕ ಯೋಗವನ್ನು ಸಾಂಗವಾಗಿ ವಿವರಿಸಿದವನು ಪತಂಜಲಿ. ಆದ್ದರಿಂದ ಯೋಗಕ್ಕೆ ಪಾತಂಜಲ ದರ್ಶನವೆಂದು ಕರೆಯುತ್ತಾರೆ ಭಾರತದಲ್ಲಿ ಉದಿಸಿದ ಷಡ್ದರ್ಶನಗಳಲ್ಲಿ ಯೋಗವೂ ಒಂದು. ಪತಂಜಲಿಯು ಯೋಗ ಎಂಬುದು ಅಷ್ಟಾಂಗದಿಂದ ಕೂಡಿದೆ ಎಂದು ಹೇಳುತ್ತಾನೆ.ಇವು 8 ಹಂತಗಳು ಕೂಡ. 1 ಯಮ 2. ನಿಯಮ 3. ಆಸನ 4. ಪ್ರಾಣಾಯಾಮ 5.ಪ್ರತ್ಯಾಹಾರ 6.ಧಾರಣ 7. ಧ್ಯಾನ 8.ಸಮಾಧಿ.

ಆಸನ, ಪ್ರಾಣಾಯಾಮಗಳನ್ನು ಮಾಡುವುದಕ್ಕೆ ಮೊದಲೇ ಮೊದಲಿನ ಹಂತವಾದ ಯಮವನ್ನೂ ಸಾಧಿಸಬೇಕು. ನಂತರ ನಿಯಮ. ಅವುಗಳನ್ನು ಆಸನ ಮಾಡುವುದಕ್ಕೆ ಪೂರ್ವಾವಶ್ಯಕತೆ ಎಂದು ವಿಧಿಸಿದ್ದಾರೆ ಪತಂಜಲಿ. ಆದರೆ ಇದನ್ನು ಪೂರ್ತಿಯಾಗಿ ಅಲಕ್ಷಿಸಿ ಯೋಗವೆಂದರೆ ಕೇವಲ ಆಸನ ಮತ್ತು ಪ್ರಾಣಾಯಾಮಗಳಷ್ಟೇ ಎಂದು ಬಿಜೆಪಿ ಸರ್ಕಾರ ದೇಶದ ಮುಂದೆ ಬಿಂಬಿಸುತ್ತಿದೆ. ಇದು ಪತಂಜಲಿಯ ಯೋಗ ದರ್ಶನದ ವಿರೂಪವಲ್ಲದೆ ಮತ್ತೇನು?

ಈ ಎರಡು ಅಂಗಗಳನ್ನು ಏಕೆ ಕೈಬಿಡಲಾಗಿದೆ ? ಈ ಪ್ರಶ್ನೆಯನ್ನು ನಾವೆಲ್ಲ ಕೇಳಬೇಕಾಗಿದೆ. ಯಮ ಎಂಬುದರಲ್ಲಿ ಈ ಐದು ಅಂಶಗಳು ಸೇರಿವೆ. 1. ಅಹಿಂಸೆ 2. ಸತ್ಯ 3. ಅಸ್ತೇಯ(ತಮ್ಮದಲ್ಲದ ವಸ್ತುಗಳನ್ನು ಕದಿಯದಿರುವುದು, ಪಡೆಯದಿರುವುದು) 4. ಬ್ರಹ್ಮಚರ್ಯ 5. ಅಪರಿಗ್ರಹ (ಅಗತ್ಯಕ್ಕಿಂತ ಹೆಚ್ಚು ಸ್ವೀಕರಿಸದಿರುವುದು ಮತ್ತು ಸಂಗ್ರಹಿಸದಿರುವುದು)

ಇವು ಯೋಗ ದರ್ಶನ ಮನುಷ್ಯರಲ್ಲಿ ಬೆಳೆಸ ಬಯಸುವ ನೈತಿಕತೆ. ಇಂದು ದೇಶದ ಸಾಮಾಜಿಕ ಜೀವನದಲ್ಲಿ ಹಾಗೂ ರಾಜಕೀಯ ಜೀವನದಲ್ಲಿ ನೈತಿಕತೆ ಕುಸಿದಿರುವಾಗ ಈ ಮುಖ್ಯ ಅಂಗವನ್ನು ಏಕೆ ಕೈಬಿಡಲಾಗಿದೆ.? ಪೂರ್ವಾಶ್ಯಕತೆಯಾದ ಮೊದಲ ಹಂತವನನ್ನು ಎಗರಿಸಿ ಬಿಡಲಾಗಿದೆ? ಈ ಅಂಶಗಳನ್ನು ನೋಡಿದ ಕೂಡಲೇ ಅಲ್ಪ ಸ್ವಲ್ಪ ತಿಳುವಳಿಕೆಯುಳ್ಳವರಿಗೂ ಸ್ಪಷ್ಟವಾಗಿ ಬಿಡುತ್ತದೆ ಇವುಗಳನ್ನು ಏಕೆ ಕೈ ಬಿಡಲಾಗಿದೆಯೆಂದು.

ದಿನ ನಿತ್ಯವೂ ಹಿಂಸಾಕಾಂಡವನ್ನು – ಅಲ್ಪಸಂಖ್ಯಾತರ ಮೇಲೆ, ಬಹುಸಂಖ್ಯಾತ ಹಿಂದೂ ದರ್ಮದ ಕೆಳಜಾತಿಗಳ ಮೇಲೆ ಹೇರುತ್ತಿರುವ, ಮತ್ತಷ್ಟು ಉಲ್ಬಣಗೊಳಿಸ ಬಯಸುವ ಬಿಜೆಪಿಗೆ ದೇಶವೆಲ್ಲ ಅಹಿಂಸೆಯನ್ನು ಆಚರಿಸಿ ಎಂದು ಘೋಷಿಸುವುದು ಇಷ್ಟವಾಗುತ್ತದೆಯೇ?

ಇತಿಹಾಸದ ವಿಷಯದಲ್ಲಿ, ದೇಶದ ಆರ್ಥಿಕತೆಯ ವಿಷಯದಲ್ಲಿ ಜನರಿಗೆ ಭರವಸೆ ನೀಡುವುದರಲ್ಲಿ ದಿನ ನಿತ್ಯ ಸುಳ್ಳುಗಳ ಮಳೆಯನ್ನೇ ಸುರಿಸುವ ಬಿಜೆಪಿ ಪಕ್ಷ ಮತ್ತದರ ಅಪ್ರತಿಮ ಸುಳ್ಳುಗಾರ ನಾಯಕನಿಗೆ 'ಯಮ' ದ ಈ ಅಂಶ 'ಸತ್ಯ' ಮೆಚ್ಚಿಗೆಯಾಗಲುಂಟೇ?

ಇನ್ನು 3 ಮತ್ತು ಐದನೆಯ ಅಂಶಗಳು ಸದಾ ತನ್ನೊಡನೆ ಅದಾನಿ, ಅಂಬಾನಿ ಮೊದಲಾದವರನ್ನು ದೇಶ, ವಿದೇಶಗಳಿಗೆ ಕರೆದೊಯ್ಯುತ್ತಾ ಹತ್ತಾರು ಸಾವಿರ ಕೋಟಿ ಹಣವನ್ನು ಅವರ ಮೇಲೆ ಸುರಿಯುತ್ತಾ ಇರುವವರಿಗೆ, ಅದರಿಂದ ಹಿಂದಿನ ದಿನಗಳಲ್ಲಿ ಹಾಗೂ ಮುಂದಿನ ದಿನಗಳಲ್ಲಿ ತಕ್ಕ ಪ್ರತಿಫಲವನ್ನು ನಿರೀಕ್ಷಿಸುತ್ತಿರುವವರಿಗೆ, ದಶಲಕ್ಷ ಬೆಲೆ ಬಾಳುವ ದಿರಿಸು ಇತ್ಯಾದಿಗಳನ್ನು ಧರಿಸುವವರಿಗೆ ಮತ್ತೊಬ್ಬರ ವಸ್ತುವನ್ನು ಆಶಿಸಬಾರದು, ಕದಿಯಬಾರದು ಮತ್ತು ತಮಗೆ ಅಗತ್ಯವಾದಷ್ಟಲ್ಲದೆ ಹೆಚ್ಚು ಸಂಗ್ರಹಿಸಬಾರದು ಎಂಬುದನ್ನು ದೇಶಕ್ಕೆ ಹೇಳಲು ಬಾಯಿ ಬರುವುದುಂಟೇ?

ಇವೆಲ್ಲ ದೇಶ ಒಪ್ಪಿದ ಮೌಲ್ಯಗಳಾಗಿ ಬಿಟ್ಟರೆ ಬಿಜೆಪಿ ದರ್ಬಾರಿನ, ಅದನ್ನು ಪಟ್ಟಕ್ಕೇರಿಸಿದ ಕಾರ್ಪೋರೇಟ್ ದೊರೆಗಳ ಗತಿಯೇನು? ಲಲಿತ್ ಮೋದಿಗಳು ಏನಾಗಬೇಕು? ಕರ್ನಾಟಕ ಮತ್ತು ಇತರ ರಾಜ್ಯ ಮಟ್ಟದ ಬಿಜೆಪಿ ನಾಯಕರಿರಲಿ ಸ್ವತಃ ಆರೆಸ್ಸೆಸ್ ನ 'ಪ್ರಾಮಾಣಿಕ ' ನಾಯಕರ ಕಥೆಯೇನಾಗಬೇಡ?

ಹೀಗೆ ಮೊದಲ ಮೆಟ್ಟಿಲನ್ನೇ ಮರೆಮಾಚಿ, ದೇಶದ ಮುಂದಿಡಲು ನಾಚಿ ಮಾಡುವ ಯೋಗ ಕೇವಲ ಕೈ ಕಾಲು ತಿರುಗಿಸುವ ವ್ಯಾಯಾಮ ಮಾತ್ರವಲ್ಲದೆ ಯೋಗ ಎಂದೆನಿಸಿಕೊಳ್ಳಬಹುದೇ?

ಮನಸ್ಸಿನಲ್ಲಿ ಹಿಂಸೆ, ದುರಾಸೆ, ದುಷ್ಟ ಯೋಜನೆಗಳನ್ನು ತುಂಬಿಕೊಂಡು ಕೇವಲ ಆಸನ, ಧ್ಯಾನಗಳ ಆಚರಣೆಯಿಂದ ಆರೋಗ್ಯ ಸಾಧಿಸುವುದಿಲ್ಲ. ಯಮ, ನಿಯಮಗಳು ಕೇವಲ ವೈಯುಕ್ತಿಕ ಆರೋಗ್ಯವನ್ನು ಮಾತ್ರ ಅಲ್ಲದೆ ಸಾಮಾಜಿಕ ಆರೋಗ್ಯವನ್ನು ಪ್ರತಿಪಾದಿಸುತ್ತವೆ. ಸಾಮಾಜಿಕ ಸ್ವಾಸ್ಥ್ಯವಿಲ್ಲದೆ ವ್ಯಕ್ತಿಯ ಆರೋಗ್ಯ ಸಿದ್ಧಿಸುವುದಿಲ್ಲ

– ಜಿ.ಎನ್. ನಾಗರಾಜ್

ನಾಳಿನ ಕಾರ್ಯಕ್ರಮಗಳು

ಹಾಸ್ಟೆಲ್ ವಿದ್ಯಾರ್ಥಿ ನಿಲಯಗಳ ಹೊರಗುತ್ತಿಗೆ ನೌಕರರನ್ನು ಕೆಲಸದಿಂದ ತೆಗೆದು ಹಾಕುತ್ತಿರುವುದನ್ನು ಪ್ರತಿಭಟಿಸಿ **27-06-2018 ರಿಂದ ಸ್ವಾತಂತ್ರ್ಯ ಉದ್ಯಾನದಲ್ಲಿ ಸಾಮೂಹಿಕ ಧರಣಿ**

ಸಿಐಟಿಯು ಜಿಲ್ಲಾ ಜಾಥಾಗಳು (ಜುಲೈ 2ನೇ ವಾರ – ಆಗಸ್ಟ್ 1ನೇ ವಾರ)

ರೈತರ ಜೈಲು ಭರೋ ಆಗಸ್ಟ್ 9

ದೇಶವ್ಯಾಪಿ, ರೈತ ಕೃಷಿಕೂಲಿಕಾರ ಸಂಘಟನೆಗಳು

ಅಹೋರಾತ್ರಿ ಸಾಮೂಹಿಕ ಜಾಗರಣೆ ಆಗಸ್ಟ್ 14

ಸಿಐಟಿಯು, ತಾಲೂಕು ಕೇಂದ್ರಗಳಲ್ಲಿ

ಮಜ್ದೂರ್ ಕಿಸಾನ್ ಸಂಘರ್ಷ ರ್‍ಯಾಲಿ ಸೆಪ್ಟೆಂಬರ್ 5

ನವದೆಹಲಿಗೆ ಪಾರ್ಲಿಮೆಂಟ್ ಚಲೋ, ಕಾರ್ಮಿಕ ರೈತ ಕೃಷಿಕೂಲಿ ಸಂಘಟನೆಗಳಿಂದ ಜಂಟಿ ಕರೆ

ರಾಯಗಾಲುವೆ ಕಾಮಗಾರಿ ಸಮಸ್ಯೆಯ ಇತ್ಯರ್ಥಕ್ಕೆ ತುಮಕೂರು ಜಿಲ್ಲಾಡಳಿತಕ್ಕೆ ಒತ್ತಾಯ

ನಗರದ ಹೃದಯಭಾಗದಲ್ಲಿ ಹಾಗೂ ಸರ್ಕಾರಿ ಕಛೇರಿಗೆ ಅತಿ ಸಮೀಪವಿರುವ ಚಿಕ್ಕಪೇಟೆಯ ಗಾರ್ಡನ್‌ರಸ್ತೆಯಲ್ಲಿ ಹಲವು ಸಮಸ್ಯೆಗಳ ಆಗರವಾಗಿದೆ. ಶನಿಮಹಾತ್ಮ ದೇವಾಲಯದ ಸುತ್ತಮುತ್ತಲಿನ ನಿವಾಸಿಗಳೆಲ್ಲ ಮಳೆಗಾಲದಲ್ಲಿ ಕಲುಷಿತ ನೀರು ಸಂಗ್ರಹದಿಂದಾಗಿ ಶೋಚನೀಯ ಸ್ಥಿತಿಯನ್ನು ಅನುಭವಿಸುತ್ತಿದ್ದಾರೆ. ಈ ಸಮಸ್ಯೆಗಳಿಗೆ ಹಲವು ಬಾರಿ ಮನವಿಯನ್ನು ಸಲ್ಲಿಸಿದರೂ ಸಮಸ್ಯೆಗಳು ಹಾಗೆ ಮುಂದುವರೆದಿವೆ.

ತುಮಕೂರು ಅಮಾನಿಕೆರೆಯಿಂದ ಪ್ರಾರಂಭವಾಗುವ (ರಾಯಗಾಲುವೆ) ದೊಡ್ಡಚರಂಡಿಯು ಬಾವಿಕಟ್ಟೆ ಕಲ್ಯಾಣ ಮಂಟಪದ ಹಿಂಭಾಗದಲ್ಲಿ ಅರ್ಧಕ್ಕೆ ನಿಂತು ಸುಮಾರು ವರ್ಷಗಳೇ ಕಳೆದಿವೆ. ಇದು ಭೀಮಸಂದ್ರದ ಸಂಪರ್ಕ ಹೊಂದುತ್ತದೆ. ಚರಂಡಿಯು ಅರ್ದಕ್ಕೆ ನಿಂತು ಹಲವು ವರ್ಷಗಳೇ ಕಳೆದರೂ ಸಹ ಇದುವರೆಗೂ ಸಂಬಂಧಪಟ್ಟ ಇಲಾಖೆಯಾಗಲಿ, ಕಾಮಗಾರಿಯನ್ನು ಮುಂದುವರೆಸಿಲ್ಲ.

ಮಳೆನೀರು ಕೊಳಚೆ, ಪ್ಲಾಸ್ಟಿಕ್, ಕಸಕಡ್ಡಿ ಕಲುಷಿತ ತ್ಯಾಜ್ಯವನೆಲ್ಲ ಪಕ್ಕದ ಹೋಲಗದ್ದೆಗಳಿಗೆ ಸಾಗಿಸುತ್ತದೆ. ಇದರಿಂದ ರೈತರು ಸಂಕಷ್ಟದಲ್ಲಿ ಸಿಲುಕ್ಕಿದ್ದಾರೆ, ವ್ಯವಸಾಯ ಭೂಮಿ ತ್ಯಾಜ್ಯದಿಂದ ಹಾಳಾಗುತ್ತಿದೆ, ಇಲ್ಲೇಯೇ ಜನರು ಶವಸಂಸ್ಕಾರ ಮಾಡುವುದರಿಂದ ಆ ಜಾಗವೆಲ್ಲ ತ್ಯಾಜ್ಯದಿಂದ ತುಂಬಿ ತೊಂದರೆಯನ್ನು ಉಂಟುಮಾಡಿದೆ. ಶನಿ ಮಹಾತ್ಮ ಮತ್ತು ಶ್ರೀರಾಮ ದೇವಸ್ಥಾನಗಳಿಗೆ ಬರುವ ಜನರು ಮೂಗು ಮುಚ್ಚಿಕೊಂಡು ಓಡಾಡುವಂತಾಗಿದೆ. ಇರುವ ಒಂದು ರಸ್ತೆಯನ್ನು ಮುಚ್ಚಿರುವುದರಿಂದ ಸಂಚಾರಕ್ಕೆ ತೊಂದರೆಯಾಗಿದೆ.



ಅಮೃತ್ ಯೋಜನೆಯಡಿಯಲ್ಲಿ ಕೆಲಸ ಆರಂಬಿಸುವುದಾಗಿ ಹೇಳಿ ಇದುವರೆಗೂ ಆರಂಭಿಸಿಲ್ಲ. ಇಲ್ಲಿನ ನಿವಾಸಿಗಳಿಗೆ ಬರಿ ಆಶ್ವಾಸನೆಗಳನ್ನು ನೀಡುತ್ತಿದ್ದು ಜಿಲ್ಲಾಡಳಿತ ಮತ್ತು ಸಂಬಂಧಿಸಿದ ಅಧಿಕಾರಿಗಳು ಇತ್ತ ಗಮನಹರಿಸಿ ಇಲ್ಲಿನ ಸಮಸ್ಯೆಯ ಇತ್ಯರ್ಥಕ್ಕೆ ಮುಂದಾಗಬೇಕೆಂದು ರೈತ–ನಾಗರೀಕರ ಹೋರಾಟ ಸಮಿತಿ ಹಾಗೂ ಭಾರತ ಕಮ್ಯೂನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಒತ್ತಾಯಿಸಿವೆ. ●

ಗ್ರಾಮ ಪಂಚಾಯಿತಿ ನೌಕರರಿಗೆ ಸರ್ಕಾರದ ಆದೇಶದಂತೆ ವೇತನ ನೀಡಲು ಒತ್ತಾಯಿಸಿ ತಾಲ್ಲೂಕು ಪಂಚಾಯಿತಿಗೆ ಮುತ್ತಿಗೆ



ದಿನಾಂಕ: 22–6–2018 ರಂದು ಕರ್ನಾಟಕ ರಾಜ್ಯ ಗ್ರಾಮ ಪಂಚಾಯತಿ ನೌಕರರ ಸಂಘ(ಸಿಐಟಿಯು) ಮಳವಳ್ಳಿಯ ಗ್ರಾಮ ಪಂಚಾಯಿತಿ ನೌಕರರ ಸಂಘದ ಕಛೇರಿಯಿಂದ ಮೆರವಣಿಗೆ ಹೊರಟು ಕಾರ್ಯನಿರ್ವಾಹಕ ಅಧಿಕಾರಿ ಮಳವಳ್ಳಿ ತಾ.ಪಂ.ರವರ ಮುಖಾಂತರ ಮಾನ್ಯ ಪ್ರಧಾನ ಕಾರ್ಯದರ್ಶಿಗಳು ಗ್ರಾಮಿಣಾಭಿವೃದ್ದಿ ಮತ್ತು ಪಂಚಾಯತ್ ರಾಜ್ ಇಲಾಖೆ, ಕರ್ನಾಟಕ ಸರ್ಕಾರ, ಬೆಂಗಳೂರು ರವರಿಗೆ ಮನವಿ ಸಲ್ಲಿಸಲಾಯಿತು. ಈ ಪ್ರತಿಭಟನೆ ಉದ್ದೇಶಿಸಿ ಜಿಲ್ಲಾಧ್ಯಕ್ಷರಾದ ಜಿ. ರಾಮಕೃಷ್ಣರವರು ಮಾತನಾಡಿದರು.

ಬೇಡಿಕೆಗಳು:–


1) ಸರ್ಕಾರದ ಆದೇಶದಂತೆ 51,114 ನೌಕರರಿಗೆ ಸರ್ಕಾರದಿಂದ EFMS ಮೂಲಕ ವೇತನ ಸಿಗುಮಂತೆ ಕ್ರಮವಹಿಸುವುದು. ದಿನಾಂಕ 5–6–2018 ರಂದು ವಿಡಿಯೋ ಸಂವಾದ (VC) ನಿರ್ದೇಶನದಿಂದ ಗೊಂದಲವುಂಟಾಗಿದ್ದು ಸ್ವಚ್ಛಗಾರರಿಗೆ, 2ನೇ ಬಿಲ್ ಕಲೆಕ್ಟರ್ ಗಳಿಗೆ ಕ್ಲರ್ಕ್, ಕ್ಲರ್ಕ್–ಕಂ–ಡಾಟಾ ಎಂಟ್ರಿ ಆಪರೇಟಗಳಿಗೆ ಆಗಿರುವ ತೊಂದರೆಗಳನ್ನು ನಿವಾರಿಸಬೇಕು.
2) SSLC ಪಾಸದ 10 ವರ್ಷ ಸೇವೆ ಸಲ್ಲಿಸಿದ ಬಿಲ್ ಕಲೆಕ್ಟರ್ ಗಳಿಗೆ ಸಿಗುತ್ತಿದ್ದ ಗ್ರೇಡ್ –2, ಕಾರ್ಯದರ್ಶಿ ಬಡ್ತಿಯನ್ನು ಪುನಃ ಸಿಗುವಂತೆ ಸೂಕ್ತ ಆದೇಶ ಹೊರಡಿಸಬೇಕು.
3) ಗ್ರಾಮ ಪಂಚಾಯತ್ ನೌಕರರಿಗೆ ಪಿಂಚಣಿ, ವೈದ್ಯಕೀಯ ವೆಚ್ಚ, ಗ್ರಾಚ್ಯುಟಗಳು ಸಿಗುವಂತೆ ಕ್ರಮ ವಹಿಸಿ ಸೂಕ್ತ ಆದೇಶ ನೀಡಬೇಕು.
4) ನಗರಾಬಿವೃದ್ದಿ ಇಲಾಖೆಯಲ್ಲಿರುವಂತೆ ಗ್ರಾಮ ಪಂಚಾಯತ್ ನೌಕರರಿಗೆ ಸೇವಾ ನಿಯಮಾವಳಿ ರಚಿಸುವುದು ಪ್ರಗತಿಯಲ್ಲಿದೆ, ಇದಕ್ಕೆ ಸೂಕ್ತ ಆದೇಶ ಹೊರಡಿಸಬೇಕು.
5) 2011ರ ಜನಗಣತಿ ಆಧಾರದ ಮೇಲೆ ಗ್ರಾಮ ಪಂಚಾಯತ್ ಗಳನ್ನು ಗ್ರೇಡ್–2 ನಿಂದ ಗ್ರೇಡ್ 1ಆಗಿ ಮೇಲ್ದರ್ಜೆಗೇರಿಸಬೇಕು.
6) ಅಪರ ಕಾರ್ಯದರ್ಶಿಗಳಾಗಿದ್ದ ಎಂ.ಎಸ್. ಸ್ವಾಮಿಯವರ ವರದಿಯ ಶಿಫಾರಸ್ಸಿನಂತೆ ಜನಸಂಖ್ಯೆಗೆ ಅನುಗುಣವಾಗಿ ಗ್ರಾಮ ಪಂಚಾಯಿತಿಗಳ ಅವಶ್ಯಕತೆಗಳಿಗನುಗುಣವಾಗಿ ವಿವಿಧ ಹುದ್ದೆಗಳನ್ನು ಸೃಷ್ಟಿಸಬೇಕು. ●

ಸಂಬಳ ವಿಳಂಬ ವಿರೋಧಿಸಿ ತುಮಕೂರು ಗುತ್ತಿಗೆ ಪೌರಕಾರ್ಮಿಕರ ಧರಣಿ

ತುಮಕೂರು ಮಹಾ ನಗರ ಪಾಲಿಕೆಯ ಗುತ್ತಿಗೆ ಪೌರ ಕಾರ್ಮಿಕರಿಗೆ ಏಪ್ರಿಲ್, ಮೇ ತಿಂಗಳ ಸಂಬಳವನ್ನು ನೀಡದೆ ಇರುವುದನ್ನು ಖಂಡಿಸಿ, ಮಹಾನಗರ ಪಾಲಿಕೆಯ ಮುಂದೆ ಜಮಾಯಿಸಿದ ಪೌರಕಾರ್ಮಿಕರು ಧರಣಿ ನಡೆಸಿದರು. ಪೌರಕಾರ್ಮಿಕರ ಮಕ್ಕಳ ಶಾಲಾ–ಕಾಲೇಜುಗಳ ಸೇರ್ಪಡೆಗೆ ಫೀ, ಪುಸ್ತಕ, ನೋಟ್ಸ್, ಸಮವಸ್ತ್ರ, ಮನೆ ಬಾಡಿಗೆ, ಕರೆಂಟ್ ಬಿಲ್ ಪಾವತಿಸಲು ತೊಂದರೆಯಾಗಿದೆ. ಪೌರಕಾರ್ಮಿಕರಿಗೆ ನೀಡುತ್ತಿದ್ದ ತಿಂಡಿ ನಿಲ್ಲಿಸಲಾಗಿದೆ. ನೇರ ಪಾವತಿ ಪಟ್ಟಿ ಯಲ್ಲಿ ಪೌರ ಕಾರ್ಮಿಕರ ವಯಸ್ಸನ್ನು ಸರಿಯಾಗಿ ದಾಖಲಿಸಿಲ್ಲ. 20–25 ವರ್ಷಗಳ ಕಾಲ ಊರ ಕಸ ಗುಡಿಸಿ, ಮಲ ವಿಸರ್ಜನೆ ಹೆಮ್ಮಣು ಬಾಚಿದ ನಾಲ್ಕು ಜನ ಪೌರ ಕಾರ್ಮಿಕರಿಗೆ ಏನು ಕಾರಣ ನೀಡದೆ ಕೆಲಸದಿಂದ ವಜಾಗೊಳಿಸಲಾಗಿದೆ ಎಂದು ಅವರು ದೂರಿದರು.

ಧರಣಿ ನಿರತರೊಂದಿಗೆ ಮಾತನಾಡಿದ ಆರೋಗ್ಯ ಸ್ಥಾಯಿ ಸಮಿತಿ ಅಧ್ಯಕ್ಷರಾದ ರಾಮಕೃಷ್ಣಪ್ಪ ಹಾಗು ಆರೋಗ್ಯ ಅಧಿಕಾರಿ, ಆರೋಗ್ಯ ನಿರಿಕ್ಷಕರಾದ ಸತ್ಯವೇಲು ಸಮಸ್ಯೆಗಳನ್ನು ಬಗೆಹರಿಸುತ್ತೆವೆ ಮುಷ್ಕರವನ್ನು ಹಿಂಪಡೆಯುವಂತೆ ಮನವಿ ಮಾಡಿದರು.

ಎರಡು ತಿಂಗಳ ಸಂಬಳವನ್ನು ಶನಿವಾರದ ಒಳಗೆ ಪಾವತಿಸುವುದಾಗಿ, ತಿಂಡಿಯ ಹಣವನ್ನು ಸಹ ತಿಂಗಳ ಸಂಬಳದ ಜೊತೆಯಲ್ಲಿ ಪೌರ ಕಾರ್ಮಿಕರ ಖಾತೆಗೆ ಜಮಾ ಮಾಡಲಾಗುವುದು, ವಯಸ್ಸಿನ ಸಂಬಂಧಿಸಿದ ಸಮಸ್ಯೆಗಳಿಗೆ ಸೂಕ್ತ ದಾಖಲೆಗಳನ್ನು ಒದಗಿಸಿ ಪರಿಶೀಲಿಸಿ ಸರಿ ಪಡಿಸುವ ಭರವಸೆ ನೀಡಿದ ನಂತರ ಪೌರ ಕಾರ್ಮಿಕರು ಪ್ರತಿಭಟನೆ ಹಿಂಪಡೆದರು. ●



ಸತ್ಯಂ ಕಾಲೇಜಿನಲ್ಲಿ ಅಕ್ರಮ ಪ್ರವೇಶಾತಿ: ಎಸ್.ಎಫ್.ಐ ಆರೋಪ

ಬಳ್ಳಾರಿಯ ಕಪ್ಪಗಲ್ ರೋಡ್‌ನಲ್ಲಿರುವ ಖಾಸಗಿ ಒಡೆತನದ ಸತ್ಯಂ ಇಂಟರ್‌ನ್ಯಾಷನಲ್ ಪಿ.ಯು ಕಾಲೇಜ್, ಅನರ್ಹ ವಿಧ್ಯಾರ್ಥಿಗಳಿಗೆ ಪ್ರವೇಶಾತಿ ನೀಡಿರುವುದನ್ನು ವಿರೋಧಿಸಿ ಎಸ್.ಎಫ್.ಐ. ನಿಂದ ಪ್ರತಿಭಟನೆ ಮಾಡಲಾಯಿತು. ಇದೇ ಸಂದರ್ಭದಲ್ಲಿ ಮಾತನಾಡಿದ ಜಿಲ್ಲಾ ಕಾರ್ಯದರ್ಶಿ ಬಸವರಾಜ್ ಗುಳೆದಾಳ್ ಎಸ್.ಎಸ್.ಎಲ್.ಸಿ ಯಲ್ಲಿ ಅನುತೀರ್ಣರಾದ ವಿದ್ಯಾರ್ಥಿಗಳಿಗೆ ಪಿ.ಯು.ಸಿ ಯಲ್ಲಿ ಪ್ರವಾಶಾತಿ ನೀಡಲಾಗುತ್ತಿದೆ ಮತ್ತು ಪ್ರಥಮ ಪಿ.ಯು.ಸಿ ಯಲ್ಲಿ ಅನುತೀರ್ಣರಾದ ವಿಧ್ಯಾರ್ಥಿಗಳಿಗೆ ದ್ವಿತೀಯ ಪಿ.ಯು.ಸಿ ಯಲ್ಲಿ ಪ್ರವೇಶಾತಿಯನ್ನು ನೀಡಲಾಗುತ್ತಿದ್ದು. ಪದವಿ ಪೂರ್ವ ಶಿಕ್ಷಣ ಇಲಾಖೆಯ ನಿಯಮಾವಳಿಗಳನ್ನು ಉಲ್ಲಂಘಿಸಲಾಗಿದೆ ಎಂದು ಆರೋಪಿಸಿದರು. ವಿಧ್ಯಾರ್ಥಿ ಪೋಷಕರಿಗೆ ತಪ್ಪು ಮಾಹಿತಿ ನೀಡಲಾಗುತ್ತಿದ್ದು 35,000 ದಿಂದ 45,000 ರೂ ಒಬ್ಬ ವಿಧ್ಯಾರ್ಥಿಯಿಂದ ಪಡೆಯಲಾಗುತ್ತಿದೆ ಎಂದರು. ಈ ವಿಚಾರವಾಗಿ ಜಿಲ್ಲಾಧಿಕಾರಿಗಳಿಗೆ ಗಮನಕ್ಕೆ ತರಲಾಯಿತು ನಂತರ ಜಿಲ್ಲಾಧಿಕಾರಿಗಳು ಡಿ.ಡಿ.ಪಿ.ಯು ಗೆ ಪರಿಶೀಲಿಸಿ ವರದಿ ನೀಡುವಂತೆ ಆದೇಶವನ್ನು ನೀಡಲಾಗಿತ್ತು. ಸಿ.ಡಿ.ಪಿ.ಯು ಇಲ್ಲಿ ಅನುತೀರ್ಣವಾದ ವಿಧ್ಯಾರ್ಥಿಗಳು ದಾಖಲಾಗಿಲ್ಲ ಎಂದು ಸುಳ್ಳು ವರದಿ ನೀಡಿದ್ದಾರೆ. ಇದರ ಸಮಗ್ರ ತನಿಖೆಯಾಗಬೇಕು ಎಂದು ಆಗ್ರಹಿಸಿದರು. ಈ ಹಿಂದೆ ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯವು ನಕಲಿ ಅಂಕಪಟ್ಟಿ ವಿತರಿಸಿರುವ ಕಾಲೇಜುಗಳ ಪಟ್ಟಿಯನ್ನು ಬಿಡುಗಡೆ ಮಾಡಿತ್ತು, ಈ ಸತ್ಯಂ ಕಾಲೇಜು ಕೂಡ ಆ ಪಟ್ಟಿಯಲ್ಲಿ ಸೇರಿತ್ತು, 850 ವಿದ್ಯಾರ್ಥಿಗಳಿಗೆ ನಕಲಿ ಅಂಕಪಟ್ಟಿ ನೀಡಲಾಗಿತ್ತು. ಎಂದು ಬಸವಾಜ್ ಗುಳೇದಾಳ್ ನೆನಪಿಸಿದರು. ಈ ಪ್ರತಿಭಟನಾ ರ್‍ಯಾಲಿಯಲ್ಲಿ ಪವನ್, ಶಿವಕುಮಾರ್ ಸೇರಿದಂತೆ ನೂರಾರು ವಿಧ್ಯಾರ್ಥಿಗಳು ಭಾಗವಹಿಸಿದ್ದರು. ●





ಕಗ್ಗಲಿಪುರದಲ್ಲಿ ನಿವೇಶನ ರಹಿತರ ಹೋರಾಟ

ಬೆಂಗಳೂರು ನಗರ ಜಿಲ್ಲೆಯ ಕಗ್ಗಲಿಪುರ ಪಕ್ಕದಲ್ಲಿರುವ ಮುಪ್ಪತ್ ಕಾವತ್ ಸರ್ಕಾರಿ ಗೋಮಾಳದ ಅಂದಾಜು 234 ಎಕ್ಕರೆ ಖಾಲಿ ಇರುವ ಜಾಗವನ್ನು ಸುತ್ತಮುತ್ತಲಿರುವ ನಿವೇಶನ ರಹಿತರಿಗೆ ನೀಡಬೇಕೆಂದು ಒತ್ತಾಯಿಸಿ ಕರ್ನಾಟಕ ಪ್ರಾಂತ ರೈತ ಸಂಘ ನೇತೃತ್ವದಲ್ಲಿ 3000 ಕ್ಕೂ ಹೆಚ್ಚು ಜನರು ಸೇರಿ ಜೂನ್ 19ರಂದು ಬೃಹತ್ ಪ್ರತಿಭಟನೆ ನಡೆಸಿದರು. ಈ ಪ್ರದೇಶವು ಅರಣ್ಯ ಇಲಾಖೆ ಅಧೀನಕ್ಕೆ ಒಳಪಡುವುದರಿಂದ ಇಲ್ಲಿ ಬರುತ್ತದೆ ಎನ್ನುವುದನ್ನು ಸಾಕ್ಷಿ ಸಮೇತ ಮನವರಿಕೆ ಮಾಡುವಂತೆ ಅರಣ್ಯಾಧಿಕಾರಿಗಳು ಸೂಚಿಸಿರುವುದರಿಂದ ಪ್ರತಿಭಟನಾಕಾರರು ಈ ಹೋರಾಟವನ್ನು ಜುಲೈ 26,27,28 ರಂದು ಬೆಂಗಳೂರು ನಗರ ಜಿಲ್ಲಾಧಿಕಾರಿ ಕಛೇರಿಯ ಮುಂದೆ ದೊಡ್ಡ ರೀತಿಯ ಸಾಮೂಹಿಕ ಧರಣಿ ನಡೆಸಲು ನಿರ್ಧರಿಸಿದ್ದಾರೆ. ಜಿಲ್ಲಾಧಿಕಾರಿಗಳು ಈ ವಿಷಯ ಕುರಿತು ಮುಖ್ಯಮಂತ್ರಿಗಳ ಜೊತೆ ಒತ್ತಾಯಿಸಲಿದ್ದೇವೆ ಎಂದು ಪ್ರಾಂತ ರೈತ ಸಂಘದ ಮಾತನಾಡಿ ನಿವೇಶನ ರಹಿತರಿಗೆ ಹಂಚುವರತೆ ನಾಯಕರು ಜನಶಕ್ತಿಗೆ ತಿಳಿಸಿದ್ದಾರೆ.



ಎಲ್ಲಾ ವಿದ್ಯಾರ್ಥಿಗಳಿಗೆ ಉಚಿತ ಬಸ್ ಪಾಸ್‌ಗೆ ಒತ್ತಾಯಿಸಿ ಮಳವಳ್ಳಿಯಲ್ಲಿ ಪ್ರತಿಭಟನೆ

ಚುನಾವಣಾ ಮುನ್ನ ಘೋಷಣೆ ಮಾಡಿದಂತೆ ಎಲ್ಲಾ ವಿದ್ಯಾರ್ಥಿಗಳಿಗೆ ಉಚಿತ ಬಸ್ ಪಾಸ್ ನೀಡಬೇಕು ಎಂದು ಒತ್ತಾಯಿಸಿ ಎಸ್.ಎಫ್.ಐ. ನಿಂದ ಮಳವಳ್ಳಿ ಯಲ್ಲಿ ಪ್ರತಿಭಟನೆ ನಡೆಸಲಾಯಿತು.

ಪಟ್ಟಣದಲ್ಲಿ ಸಾವಿರಾರು ವಿದ್ಯಾರ್ಥಿಗಳು ಬಸ್ ಪಾಸ್ ನೀಡಬೇಕೆಂದು ದಾರಿ ಉದ್ದಕ್ಕೂ ಘೋಷಣೆ ಕೂಗುತ್ತಿದ್ದರು. ಗ್ರಾಮೀಣ ಭಾಗದ ಜನರು ಬಡತನದ ಬೇಗೆಯಲ್ಲಿ ನರಳುತ್ತಿದ್ದಾರೆ. ಅವರ ಮಕ್ಕಳಿಗೆ ಶುಲ್ಕ ನೀಡಿ ವಿದ್ಯಾಭ್ಯಾಸ ಕೊಡಿಸುವುದು ಬಹಳ ಕಷ್ಟಕರವಾಗಿರುವಾಗ ಬಸ್ ಪಾಸ್‌ಗೆ ಹಣ ನೀಡುವುದು ಮತ್ತಷ್ಟು ಕಷ್ಟಕರವಾದ ಕೆಲಸವಾಗಿದೆ.

ಈ ಕಾರಣಗಳಿಂದ ಮಕ್ಕಳು ಶಿಕ್ಷಣದಿಂದ ವಂಚಿತರಾಗದಂತೆ ತಡೆಯುವ ಉದ್ದೇಶದಿಂದ ಉಚಿತ ಬಸ್ ಪಾಸ್ ನೀಡಬೇಕೆಂದು ಒತ್ತಾಯಿಸಿ ಮಳವಳ್ಳಿಯ ಎ. ಸರ್ಕಲ್ ನಲ್ಲಿ ಪ್ರತಿಭಟನೆ ನಡೆಸಲಾಯಿತು ಎಸ್.ಎಫ್.ಐ. ಮುಖಂಡರಾದ ಕೆ.ಜಿ ನಿವೇದಿತಾ. ಟಿ ಎನ್.ಸಂದೀಪ್ ಕುಮಾರ್, ಹೆಚ್.ಎ.ಚಿನ್ಮಯಿ, ನಿಸಗ, ಸ್ನೇಹ ಮುಂತಾದವರು ಭಾಗವಹಿಸಿದ್ದರು.

ಸಾಲಮನ್ನಾಕ್ಕೆ ಒತ್ತಾಯಿಸಿ ಡಿ.ಸಿ.ಸಿ. ಬ್ಯಾಂಕಿನ ಮುಂದೆ ಧರಣಿ

ರೈತರ ಸಂಪೂರ್ಣ ಸಾಲಮನ್ನಾ ಮಾಡಲು ಒತ್ತಾಯಿಸಿ ಕರ್ನಾಟಕ ಪ್ರಾಂತ ರೈತ ಸಂಘ ಜಿಲ್ಲಾ ಸಮಿತಿ ನೇತೃತ್ವದಲ್ಲಿ ಕಲಬುರ್ಗಿ ವಿ.ಎಸ್.ಎಸ್.ಎನ್. ಬ್ಯಾಂಕಿನ ಸಾಲ ಮನ್ನಾದ ಹಣ ಬಿಡುಗಡೆಗಾಗಿ DCC ಡಿ.ಸಿ.ಸಿ. ಬ್ಯಾಂಕಿನ ಮುಂದೆ ಧರಣಿ ಸತ್ಯಾಗ್ರಹ ನಡೆಸಿದರು.



ಕೇಳಿಸಿದ್ದು

ಸಾಯ ಹೊಡೆಯುವ ‘ಸಾಮೂಹಿಕ ಮನರಂಜನೆ’

ಗಮನಿಸಿ. ಜನ ಗುಂಪು ಸೇರಿ ಯಾರನ್ನಾದರೂ ಯಾವುದೋ ಆಪಾದನೆ ಹೊರಿಸಿ ಸಾರ್ವಜನಿಕವಾಗಿ ಬಡಿದು ಕೊಲ್ಲುವುದು ದೇಶದಲ್ಲಿ ಹೊಸ ಸಾಮೂಹಿಕ ಮನರಂಜನೆಯಾಗುತ್ತಿದೆ. ಅಲ್ಲೊಂದು ಇಲ್ಲೊಂದು ಎಂಬಂತೆ ನಡೆಯುತ್ತಿದ್ದ ಇಂತಹ ಘಟನೆಗಳು ಈಗ ದಿನಕ್ಕೆ ಒಂದೆರಡು ಎಂಬಂತೆ ವರದಿಯಾಗುತ್ತಿವೆ. ಜನರ ಮಿದುಳು ಮತ್ತು ಹೃದಯವನ್ನು ಏಕಕಾಲದಲ್ಲಿ ಕೆಡಿಸಿರುವ ಈ ಸಾಮಾಜಿಕ ವೈರಸ್ಸಿನ ಮುಂದೆ ನಿಫಾ–ಗಿಫಾ ಎಲ್ಲಾ ಏನೂ ಅಲ್ಲ. ಮೊದಮೊದಲು ಕೆಲ ವಿಲಕ್ಷಣ ಸನ್ನಿವೇಶದಲ್ಲಿ ಯಾವುದೋ ಸಂಶಯದಿಂದ ಜನ ಹೀಗೆ ಮಾಡುತ್ತಿದ್ದರು. ಆಗಲೇ ಇಡೀ ಸಮಾಜ, ಇಡೀ ಪೊಲೀಸ್ ವ್ಯವಸ್ಥೆ, ಇಡೀ ರಾಜಕೀಯ ನಾಯಕತ್ವ ಎಚ್ಚೆತ್ತು ಅಪಾಯದ ಮುನ್ಸೂಚನೆಗಳನ್ನು ಅರಿತು ಈ ಪಿಡುಗಿಗೆ ಮದ್ದರೆಯಬೇಕಿತ್ತು. ಯಾರೂ ಅದಕ್ಕೆ ಮುಂದಾಗಲಿಲ್ಲ. ಯಾಕೆ ಮುಂದಾಗಲಿಲ್ಲ ಎಂದರೆ ಇಂತಹ ಸಾಮೂಹಿಕ ಉನ್ಮಾದಕ್ಕೆ ಬಲಿಯಾಗುತ್ತಿದ್ದವರು ಬಡವರು, ಭಿಕ್ಷುಕರು, ಚಿಂದಿ ಆಯುವವರು, ಮನೋರೋಗಿಗಳು ಆಗಿರುತ್ತಿದ್ದರು. ಈಗ ಪರಿಸ್ಥಿತಿ ಸಂಪೂರ್ಣ ಕೈಮೀರಿದ ಲಕ್ಷಣಗಳು ಕಾಣಿಸುತ್ತಿವೆ.

.. .. ..

ಪ್ರತೀ ಬಾರಿ ಜನ ಗುಂಪು ಸೇರಿ ಉನ್ಮತ್ತರಾಗಿ ಯಾವುದೋ ವ್ಯಕ್ತಿಯನ್ನು ಥಳಿಸಿ– ತುಳಿದು ಕೊಲೆಗೈದಾಗ ಅಲ್ಲಿ ಸಾಯುವುದು ಒಂದು ವ್ಯಕ್ತಿಯಲ್ಲ. ಸಾಯುವುದು ಇಡೀ ದೇಶದ ಅಪರಾಧ–ಕಾನೂನು ಪಾಲನಾ ವ್ಯವಸ್ಥೆ (criminal justice system). ಹಲ್ಲೆ ಅಥವಾ ಕೊಲೆಗೆ ಒಳಗಾದ ವ್ಯಕ್ತಿ ಅಪಾದಿತನೋ, ಅಮಾಯಕನೋ ಎನ್ನುವ ವಿಚಾರ ಇಲ್ಲಿ ಪ್ರಸ್ತುತವೇ ಅಲ್ಲ. ಅದೆಂತಹಾ ಪಾತಕಿಯೇ ಆದರೂ ಬೀದಿಯಲ್ಲಿ ದಿಢೀರ್ ನ್ಯಾಯ ನಿರ್ಣಯ, ಶಿಕ್ಷೆ ಎಲ್ಲವೂ ಆಗುತ್ತದೆ ಎಂದಾಗ ಅಲ್ಲಿ ಖಾಕಿ ತೊಟ್ಟು ಪೊಲೀಸ್ ಕೆಲಸ ಮಾಡುವವರು, ಕರಿಕೋಟು ತೊಟ್ಟು ನ್ಯಾಯಾನ್ಯಾಯ ನಿರ್ಣಯಿಸುವ ನ್ಯಾಯಾಧೀಶರುಗಳು, ಕಾವಲುನಾಯಿಗಳು ಎಂದು ಕರೆಸಿಕೊಳ್ಳುವ ಮಾಧ್ಯಮಗಳು ಮತ್ತು ಅಧಿಕಾರ ಚಲಾಯಿಸುವ ರಾಜಕೀಯ ನಾಯಕತ್ವ ಜೀವಚ್ಛವವಾಗಿವೆ ಎಂದು ಲೆಕ್ಕ.

.. .. ..

ಬೆಂಗಳೂರಿನಲ್ಲಿ ಮಕ್ಕಳ ಕಳ್ಳ ಎಂಬ ಗುಮಾನಿಯಿಂದ ಜನ ಸಾಯಹೊಡೆದದ್ದು ದೂರದ ರಾಜಸ್ಥಾನದಿಂದ ಕೆಲಸ ಅರಸಿಕೊಂಡು ಬಂದಿದ್ದ ಅನಾಥ ಅಮಾಯಕ ಯುವಕನನ್ನು. ಘಟನೆಯ ನಂತರ ಆ ಪ್ರದೇಶದ ಪೊಲೀಸ್ ಮುಖ್ಯಸ್ಥರಿಂದ ಹಿಡಿದು ಹೊಸದಾಗಿ ಅಧಿಕಾರ ವಹಿಸಿಕೊಂಡ ಮುಖ್ಯಮಂತ್ರಿಯ ತನಕ ಎಲ್ಲರೂ ಹೇಳಿದ್ದು ‘ಮಕ್ಕಳ ಕಳ್ಳರಿದ್ದಾರೆ ಅಂತ ಸುಳ್ಳು ಸುದ್ದಿ ಹಬ್ಬಿಸಿದರೆ ಜೋಕೆ’ ಅಂತ. ‘ಸುಳ್ಳು ಸುದ್ದಿ ನಂಬಿ ಅಮಾಯಕರನ್ನು ಹಿಂಸಿಸಿದರೆ ಎಚ್ಚರ’ ಅಂತ. ಅಂದರೆ ಸುದ್ದಿ ಸತ್ಯವಾಗಿದ್ದರೆ, ಅಮಾಯಕನ ಸ್ಥಾನದಲ್ಲಿ ಆಪಾದಿತನಿದ್ದರೆ ಜನ ಸೇರಿ ಹೊಡೆಯಬಹುದು ಎಂದೇ?

.. ..

ಮೊನ್ನೆ ಅಸ್ಸಾಂನಲ್ಲೂ ಕಂಡದ್ದು ಇದನ್ನೇ. ಎಲ್ಲರೂ ನಿಯಂತ್ರಿಸಲು ಹೊರಟಿದ್ದು ಗಾಳಿಸುದ್ದಿಯನ್ನು. ದಿನೇ ದಿನೇ ಜನ ಸೇರಿ ಯಾರನ್ನೋ ಯಾವುದೋ ಸಂಶಯದಿಂದ ಸಾಯಹೊಡೆಯುವ ಪ್ರವೃತ್ತಿಯ ಬಗ್ಗೆ ಎಚ್ಚರಿಸುವ, ಅದರ ಬಗ್ಗೆ ಜಾಗೃತಿ ಮೂಡಿಸುವ ಕೆಲಸ ಅಲ್ಲಿಯೂ ನಡೆಯಲಿಲ್ಲ.

ಗೋರಕ್ಷಣೆಯ ವಿಚಾರದಲ್ಲಿ ಕೆಲ ಸಂಘಟನೆಗಳು ಆಪಾದಿತರನ್ನೋ ಅಮಾಯಕರನ್ನೋ ಹಿಡಿದು ಕೊಂದು ಹಾಕಿದ ಘಟನೆಗಳು ಮತ್ತೆ ಮತ್ತೆ ನಡೆದಾಗಲೂ ಈ ದೇಶದ ಯಾವುದೇ ಮೂಲೆಯಿಂದ ಪೊಲೀಸರಿಂದ ಆಗಲೀ, ರಾಜಕೀಯ ನಾಯಕರಿಂದ ಆಗಲೀ ಒಂದು ಕಟುವಾದ ಎಚ್ಚರಿಕೆ ಬಂದಿರಲಿಲ್ಲ. ವಿಚಿತ್ರವೆಂದರೆ ಇಂತಹ ಘಟನೆಗಳನ್ನು ಕೆಲ ನಾಯಕರು ಬೇರೆ ರೀತಿಯಲ್ಲಿ ಸಮರ್ಥಿಸಿಕೊಂಡರು. ಆಪಾದಿತರನ್ನು ರಕ್ಷಣೆ ಮಾಡಲು ಕೆಲವರು ಮುಂದಾದರು. ಗೋರಕ್ಷಣೆಯ ಹೆಸರಿನಲ್ಲಿ ನಡೆಯುವ ಪ್ರಾಣಾಂತಿಕ ಆಕ್ರಮಣಗಳು ಒಂದು ನಿರ್ದಿಷ್ಟ ಸಂಘಟನೆಗಳಿಗೆ ಸೇರಿದ ವ್ಯಕ್ತಿಗಳಿಂದ, ನಿರ್ದಿಷ್ಟ ಉದ್ದೇಶಕ್ಕಾಗಿ ನಡೆಯುತ್ತವೆ. ವಿವಿಧ ರೀತಿಯ ಕಳ್ಳತನದ ಗುಮಾನಿಯಲ್ಲಿ ಸಂಶಯಿತರನ್ನು ಕೊಂದು ಹಾಕುವುದರ ಹಿಂದೆ ಅನಿರ್ವಚನೀಯ ಮನಸ್ಥಿತಿಯ ಜನಸಮೂಹ ಇರುತ್ತದೆ. ಎರಡರ ಪರಿಣಾಮವೂ ಒಂದೇ. ಅವು ಅರಾಜಕತೆಯ ಲಕ್ಷಣಗಳು. ಮಾತ್ರವಲ್ಲ, ಮತ್ತಷ್ಟು ಅರಾಜಕತೆಯನ್ನು ಸೃಷ್ಟಿಸುವುದಕ್ಕೆ ಮೂಲವಾಗುವ ಬೆಳವಣಿಗೆಗಳು.

ಆದರೂ ಈ ಪ್ರವೃತ್ತಿಯ (ಇಂಗ್ಲಿಷ್ ನಲ್ಲಿ ಇದನ್ನು ಲಿಂಚಿಂಗ್ ಪ್ರವೃತ್ತಿ ಎನ್ನುತ್ತಾರೆ) ಬಗ್ಗೆ ಕನಿಷ್ಠ ಪೊಲೀಸರಾದರೂ ಯಾಕೆ ಒಂದು ಸ್ಪಷ್ಟವಾದ ಮತ್ತು ದಿಟ್ಟವಾದ ಸಂದೇಶ ರವಾನಿಸುತ್ತಿಲ್ಲ ಎನ್ನುವುದೇ ವಿಚಿತ್ರವಾದ ಸಂಗತಿ. ಮನಃಶಾಸ್ತ್ರೀಯವಾಗಿ ಹೇಳುವುದಾದರೆ ಈ ದೇಶದ ಪೊಲೀಸರಿಗೆ ಇದೊಂದು ಗಂಭೀರ ಸಮಸ್ಯೆ ಅಂತ ಅನಿಸುವುದೇ ಇಲ್ಲ. ಯಾಕೆಂದರೆ ಅವರು ಇದೇ ‘ಲಿಂಚಿಂಗ್ ಅಸ್ತ್ರ’ವನ್ನು ವ್ಯವಸ್ಥಿತವಾಗಿ ನಾಲ್ಕು ಗೋಡೆಗಳ ನಡುವೆ ಮಾಡಿ ತನಿಖೆ ನಡೆಸುವವರು. ಉನ್ಮತ್ತ ಜನಸಮೂಹಗಳ ಕೈಗೆ ಸಿಕ್ಕ ಸಂಶಯಿತರು ಪ್ರಾಣವನ್ನೇ ಕಳೆದುಕೊಳ್ಳುತ್ತಾರೆ, ಪೊಲೀಸರು ಸಂಶಯಿತರ ಪ್ರಾಣ ತೆಗೆಯುವುದು ವಿರಳ ಎನ್ನುವುದನ್ನು ಬಿಟ್ಟರೆ ಅವರೂ ತೋರುವುದು ಸಾಕ್ಷಾತ್ ‘ಲಿಂಚಿಂಗ್ ಪ್ರವೃತ್ತಿ’ಯನ್ನೇ. ಆದಕಾರಣ ಅವರಿಗಿದೆಲ್ಲಾ ಮಾಮೂಲು ಅನ್ನಿಸುತ್ತಿರಬೇಕು. ಹೀಗಲ್ಲದೆ ಬೇರೆ ಯಾವ ರೀತಿಯಲ್ಲೂ ಈ ಉದಾಸೀನ ಮನೋಭಾವವನ್ನು ಅರ್ಥ ಮಾಡಿಕೊಳ್ಳಲು ಸಾಧ್ಯವಿಲ್ಲ.

– ನಾರಾಯಣ ಎ, ‘ಪ್ರಜಾವಾಣಿ’ ಯಲ್ಲಿ



ಅತಿಥಿ ಅಂಕಣ



ಪ್ರೊ. ರಾಜೇಂದ್ರ ಚೆನ್ನಿ

ಕಾಶ್ಮೀರದ ಕೊಲೆಗಳು : ವಿವೇಕವೇ ದ್ರೋಹವಾಗಿ ಕಂಡಾಗ..

> ಕಾಶ್ಮೀರದ ಮುಸ್ಲಿಮರನ್ನು ಸೇನೆಯ ಮೂಲಕ ಬಗ್ಗುಬಡೆಯುವ ಅಂತಿಮ ಪರಿಹಾರವನ್ನು ನೆಚ್ಚಿಕೊಂಡಿರುವ ಬಲಪಂಥೀಯ ಸರಕಾರವು ವಿನಾಶವನ್ನು ಬಿಟ್ಟು ಇನ್ನೇನನ್ನೂ ತರಲಾರದು. ಇವರ ಇಲೆಕ್ಷನ್ ವೀರರಿಗೆ ಕಾಶ್ಮೀರದ ಜನಸಾಮಾನ್ಯರ ನಂಬುಗೆಯನ್ನು ಪಡೆಯುವ ಅವರೊಂದಿಗೆ ಮಾತನಾಡುವ ನೈತಿಕ ಸಾಮರ್ಥ್ಯವೇ ಇಲ್ಲ. ಸತ್ಯವು ಅತ್ಯಂತ ಆತಂಕಕಾರಿಯಾಗಿದೆ. ನಾವು ಕಾಶ್ಮೀರದ ಜನರನ್ನು ಕಳೆದುಕೊಂಡಿದ್ದೇವೆ. ಅವರ ನಂಬುಗೆಯನ್ನು ಕಳೆದುಕೊಂಡಿದ್ದೇವೆ. ಈಗೇನಿದ್ದರೂ ಆ ಭೂ ಪ್ರದೇಶವನ್ನು ಉಳಿಸಿಕೊಳ್ಳುವ ಪ್ರಯತ್ನ ಮಾತ್ರ ಮಾಡುವ ಹತಾಶ ಸ್ಥಿತಿಯಲ್ಲಿದ್ದೇವೆ. ಒಂದು ಕಡೆಗೆ ಯಾವ ವಿರೋಧವೂ, ಚರ್ಚೆಯೂ ಇರಬಾರದೆನ್ನುವ ಅಸಹಿಷ್ಣುತೆ; ಇನ್ನೊಂದು ಕಡೆಗೆ ತಮ್ಮ ಅಪರಾಧಗಳನ್ನು ವರದಿ ಮಾಡುವವರನ್ನು ಮುಗಿಸಬೇಕೆನ್ನುವ ಅನೇಕ ಮಾಫಿಯಾಗಳು. ಇದಕ್ಕೆಲ್ಲ ಕುಮ್ಮಕ್ಕು ಕೊಡುವಂಥ, ಕೊಲೆಗಾರರಿಗೆ ಶಿಕ್ಷೆಯೇ ಆಗದಂತೆ ನೋಡಿಕೊಳ್ಳುವ ನಮ್ಮ ಪೋಲೀಸ್ ಹಾಗೂ ಕಾನೂನು ವ್ಯವಸ್ಥೆಗಳು.

ಕಾಶ್ಮೀರದಲ್ಲಿ ಕೊಲೆಗಳು ನಡೆದರೆ ಅವು ಸುದ್ದಿಯೂ ಆಗದಿರುವಂಥ ಸ್ಥಿತಿಗೆ ದುರ್ದೈವವಶಾತ್ ಈ ನಾಡು ತಲುಪಿದೆ. ಆದರೆ "ರೈಸಿಂಗ್ ಕಾಶ್ಮೀರ್" ಪತ್ರಿಕೆಯ ಸಂಪಾದಕರಾಗಿದ್ದ ಶೂಜಾತ್ ಬುಖಾರಿ ಅವರ ಕೊಲೆಯು ಇಡೀ ದೇಶವನ್ನೇ ಆಳವಾಗಿ ಕದಡಿದ ಹಾಗೆ ತೋರುತ್ತದೆ. ಅರ್ಥವೇ ಆಗದಂತ ಹಿಂಸಾಚಾರಗಳ ಮಧ್ಯ ಶಾಂತಿಗಾಗಿ ಮುಡುಪಾಗಿದ್ದ ಒಂದು ವಿವೇಕದ ದನಿಯ ಹತ್ಯೆಯಾಗಿದೆ. ಕಾಶ್ಮೀರ ಸಮಸ್ಯೆಯು ಬಗೆಹರಿದರೆ ತಮ್ಮ ಅಸ್ತಿತ್ವವನ್ನೇ ಕಳೆದುಕೊಳ್ಳುವ ಉಗ್ರವಾದಿಗಳು, ಪ್ರತ್ಯೇಕತಾವಾದಿಗಳು ಹಾಗೂ ನೆರೆರಾಷ್ಟ್ರದ ಉಗ್ರರು– ಇವರೆಲ್ಲರಿಗೂ ದಿನನಿತ್ಯದ ಹಿಂಸೆಯೇ ಬೇಕಾಗಿದೆ. ನಮ್ಮ ಕೇಂದ್ರ ಸರ್ಕಾರವು ಸೇನೆಯ ಕೈಗೆ ಶಾಂತಿ ತರುವ ಜವಾಬ್ದಾರಿಯನ್ನು ಒಪ್ಪಿಸಿ ಕೈತೊಳೆದುಕೊಂಡಿದೆ. ಬಲಪಂಥೀಯ ಸಾಮಾಜಿಕ ತಾಣಗಳು ಹಾಗೂ ಮಾಧ್ಯಮಗಳು ಸೈನ್ಯದ ನಡವಳಿಕೆಯನ್ನು ಪ್ರಶ್ನಿಸಿದರೆ ಅದು ದೇಶದ್ರೋಹವೆಂದು ಪ್ರಚಾರ ಮಾಡುತ್ತ ಆ ಕುರಿತು ಚರ್ಚೆಯೇ ನಡೆಯದಂತೆ ಮಾಡಿಬಿಟ್ಟಿವೆ.

ಅದೇ ಹೊತ್ತಿಗೆ ಮೊನ್ನೆ ಬಿಡುಗಡೆಯಾದ ವಿಶ್ವಸಂಸ್ಥೆಯ ವರದಿಯೊಂದರ ಪ್ರಕಾರ ಕಾಶ್ಮೀರನಲ್ಲಿ ಮಾನವಹಕ್ಕುಗಳ ನಿರಂತರವಾದ ಉಲ್ಲಂಘನೆಯಾಗಿದೆ. ಈ ವರದಿಯನ್ನು ನಿರೀಕ್ಷೆಯಂತೆಯೆ ಭಾರತದ ಸರಕಾರ ತಿರಸ್ಕರಿಸಿದೆ. ವಿಶೇಷವೆಂದರೆ ತನ್ನ ಸ್ವಾರ್ಥ, ದುರಾಡಳಿತ ಹಾಗೂ ಅವಿವೇಕದಿಂದಾಗಿ ಕಾಶ್ಮೀರವನ್ನು ಈ ಸ್ಥಿತಿಗೆ ತಂದಿರುವ ಕಾಂಗ್ರೆಸ್ ಪಕ್ಷವೂ ಈ ವರದಿಯನ್ನು ವಿರೋಧಿಸಿದೆ. ನಿಜ ಹೇಳಬೇಕೆಂದರೆ ನಮ್ಮ ಯಾವ ರಾಜಕೀಯ ಪಕ್ಷಕ್ಕೂ ಕಾಶ್ಮೀರದ ಬಗ್ಗೆ ಕಳಕಳಿಯೇ ಇಲ್ಲ. ಪಾಕಿಸ್ತಾನವು ಕಾಶ್ಮೀರವನ್ನು ಆಕ್ರಮಿಸಿಕೊಳ್ಳಲು ಪ್ರಯತ್ನ ಮಾಡುತ್ತಿರುವುದರಿಂದ ಮಾತ್ರ ಈ ಪಕ್ಷಗಳು ಕಾಶ್ಮೀರದ ಬಗ್ಗೆ ಮಾತನಾಡುತ್ತವೆ. ಅಲ್ಲಿಯ ಜನರು, ಬಡತನ, ವಿಶಿಷ್ಟ ಸಂಸ್ಕೃತಿ ಇವುಗಳ ಬಗ್ಗೆ ಯಾವ ತಿಳುವಳಿಕೆಯೂ ಇವರಿಗಿಲ್ಲ. ದುರಂತವೆಂದರೆ ಎಲ್ಲ ಕಾಶ್ಮೀರಿಗಳು ಸೇನೆಯು ಬಗ್ಗುಬಡಿಯಬೇಕಾದ ದೇಶ ವಿರೋಧಿಗಳೇ ಆಗಿದ್ದಾರೆಂದು ಭಾರತದ ಬಹುಪಾಲು ಶಿಕ್ಷಿತ ಹಾಗೂ ಅಶಿಕ್ಷಿತ ನಾಗರೀಕರು ನಂಬಿದ್ದಾರೆ.

ಈ ಎಲ್ಲಾ ಅನರ್ಥಗಳ ನಡುವೆ ಶೂಜಾತ್ ಬುಖಾರಿಯಂಥ ಕೆಲವರು ಅಪ್ರತಿಮ ಧೈರ್ಯ ಹಾಗೂ ವಿವೇಕಗಳಿಂದ, ಕಾಶ್ಮೀರದ ಬಗೆಗಿನ ಆಳವಾದ ಪ್ರೀತಿಯಿಂದ ಬರೆಯುತ್ತ ಬಂದಿದ್ದಾರೆ. ಆದರೆ ತನ್ನ ಸಾವಿರಾರು ವರ್ಷಗಳ ಚರಿತ್ರೆಯಲ್ಲಿಯೇ ಎಂದೂ ಕಂಡಿರದಂಥ ಅಧೋಗತಿಗೆ ತಲುಪಿರುವ, ಈಗ ಅಮಾನವೀಯವಾದ ಹಿಂಸಾಪರ್ವವನ್ನು ಪ್ರವೇಶಿಸಿರುವ ಭಾರತದಲ್ಲಿ ವಿವೇಕವೇ ದ್ರೋಹವಾಗಿ ಕಾಣುತ್ತದೆ. ಕಾಶ್ಮೀರದ ಮುಸ್ಲಿಮರನ್ನು ಸೇನೆಯ ಮೂಲಕ ಬಗ್ಗುಬಡೆಯುವ ಅಂತಿಮ ಪರಿಹಾರವನ್ನು ನೆಚ್ಚಿಕೊಂಡಿರುವ ಬಲಪಂಥೀಯ ಸರಕಾರವು ವಿನಾಶವನ್ನು ಬಿಟ್ಟು ಇನ್ನೇನನ್ನೂ ತರಲಾರದು. ಇವರ ಇಲೆಕ್ಷನ್ ವೀರರಿಗೆ ಕಾಶ್ಮೀರದ ಜನಸಾಮಾನ್ಯರ ನಂಬುಗೆಯನ್ನು ಪಡೆಯುವ ಅವರೊಂದಿಗೆ ಮಾತನಾಡುವ ನೈತಿಕ ಸಾಮರ್ಥ್ಯವೇ ಇಲ್ಲ. ಸತ್ಯವು ಅತ್ಯಂತ ಆತಂಕಕಾರಿಯಾಗಿದೆ. ನಾವು ಕಾಶ್ಮೀರದ ಜನರನ್ನು ಕಳೆದುಕೊಂಡಿದ್ದೇವೆ. ಅವರ ನಂಬುಗೆಯನ್ನು ಕಳೆದುಕೊಂಡಿದ್ದೇವೆ. ಈಗೇನಿದ್ದರೂ ಆ ಭೂ ಪ್ರದೇಶವನ್ನು ಉಳಿಸಿಕೊಳ್ಳುವ ಪ್ರಯತ್ನ ಮಾತ್ರ ಮಾಡುವ ಹತಾಶ ಸ್ಥಿತಿಯಲ್ಲಿದ್ದೇವೆ. ಸರಕಾರವು ತಿರಸ್ಕರಿಸುವ ವಿಶ್ವಸಂಸ್ಥೆಯ ವರದಿಯ ಪ್ರಕಾರ ಶಿಕ್ಷಿತ ಮಧ್ಯಮ ವರ್ಗದ ಯುವಕರು, ಮಹಿಳೆಯರು, ಉಗ್ರವಾದಿ, ಪ್ರತ್ಯೇಕತಾವಾದಿ ಗುಂಪುಗಳಿಗೆ ಸೇರುತ್ತಿದ್ದಾರೆ. ಶೂಜಾತ್ ಬುಖಾರಿಯವರಂಥವರ ಕೊಲೆಯಿಂದಾಗಿ ಕಾಶ್ಮೀರದ ಜೊತೆಗೆ ಇರುವ ಕೆಲವೇ ಕೊಂಡಿಗಳು ಕಳಚಿ ಹೋಗುತ್ತಿವೆ.

ವಿಶ್ವದ ಅನೇಕ ಸಂಸ್ಥೆಗಳ ವರದಿಗಳ ಪ್ರಕಾರ ಭಾರತವು ಪತ್ರಿಕೋದ್ಯಮಿಗಳಿಗೆ ಅತ್ಯಂತ ಅಸುರಕ್ಷಿತ ಜಾಗಗಳಲ್ಲಿ ಒಂದಾಗಿದೆ. ಸತತವಾಗಿ ಪತ್ರಿಕೋದ್ಯಮಿಗಳ ಹತ್ಯೆಗಳು ನಡೆಯುತ್ತಲೇ ಇವೆ. ಒಂದು ಕಡೆಗೆ ಯಾವ ವಿರೋಧವೂ, ಚರ್ಚೆಯೂ ಇರಬಾರದೆನ್ನುವ ಅಸಹಿಷ್ಣುತೆ; ಇನ್ನೊಂದು ಕಡೆಗೆ ತಮ್ಮ ಅಪರಾಧಗಳನ್ನು ವರದಿ ಮಾಡುವವರನ್ನು ಮುಗಿಸಬೇಕೆನ್ನುವ ಅನೇಕ ಮಾಫಿಯಾಗಳು. ಇದಕ್ಕೆಲ್ಲ ಕುಮ್ಮಕ್ಕು ಕೊಡುವಂಥ, ಕೊಲೆಗಾರರಿಗೆ ಶಿಕ್ಷೆಯೇ ಆಗದಂತೆ ನೋಡಿಕೊಳ್ಳುವ ನಮ್ಮ ಪೋಲೀಸ್ ಹಾಗೂ ಕಾನೂನು ವ್ಯವಸ್ಥೆಗಳು. ಅಷ್ಟು ಮಾತ್ರವಲ್ಲ, ಗೌರೀ ಲಂಕೇಶ್‌ರ ಶಂಕಿತ ಕೊಲೆಗಾರನ ಪರವಾಗಿ ಸಾಮಾಜಿಕ ತಾಣಗಳಲ್ಲಿ ಸಂದೇಶ ನೀಡಿ ಅವನ ಕುಟುಂಬಕ್ಕಾಗಿ ಸಹಾಯನಿಧಿ ಸಂಗ್ರಹ ಮಾಡಲಾಗುತ್ತಿದ್ದರೂ ಈ ಬಗ್ಗೆ ಈ ವ್ಯವಸ್ಥೆಗಳೂ ಏನೂ ಮಾಡುವುದಿಲ್ಲ. ಅದೇ ಯಾವುದೋ ರಾಜಕಾರಣಿಯ ಬಗ್ಗೆ ಸಣ್ಣ ಟೀಕೆಯನ್ನು ಸಾಮಾಜಿಕ ತಾಣದಲ್ಲಿ ಬರೆದವರನ್ನು ಬಂಧಿಸುವ ಪೋಲೀಸರು ಕೊಲೆಗಾರರ ಪರವಾಗಿ ಬರೆಯುವವರನ್ನು ವಿಚಾರಿಸುವುದೂ ಇಲ್ಲ.

ಇವೆಲ್ಲವೂ ಇಂದಿನ ಭಾರತದ ಒಡಲನ್ನೇ ಹೊಕ್ಕು ಬೆಳೆಯುತ್ತಿರುವ ಕ್ಯಾನ್ಸರ್‌ವೊಂದರ ಹೊರಲಕ್ಷಣಗಳಾಗಿವೆ. ಒಂದೊಂದಾಗಿ ಪ್ರಜಾಪ್ರಭುತ್ವದ ಸಂಸ್ಥೆಗಳನ್ನು ನಾಶಮಾಡಲಾಗುತ್ತಿದೆ. ಒಬ್ಬ ವ್ಯಕ್ತಿ ಹಾಗೂ ಒಂದು ಸಿದ್ಧಾಂತದ ಸರ್ವಾಧಿಕಾರದತ್ತ ದೇಶದ ರಾಜಕೀಯವು ಹೆಜ್ಜೆ ಇಡುತ್ತಿದೆ. ಶೂಜಾತ್ ಬುಕಾರಿಯವರ ಹತ್ಯೆಯು ನಮ್ಮ ಸಾಮುದಾಯಿಕ ಅನಾರೋಗ್ಯದ ಸ್ಥಿತಿಯ ಬಗ್ಗೆ ಚಿಂತಿಸುವಂತೆ ಮಾಡುವಂತಾಗಲಿ. ●

ಖಾಸಗಿ ಕಂಪನಿಗೆ ರೂ. 4 ಕೋಟಿ ದಂಡ ಮತ್ತು ಬಿಬಿಎಂಪಿಯ ಇತರ ಅಧ್ವಾನಗಳು

ಘನತ್ಯಾಜ್ಯ ಸಂಸ್ಕರಣೆ ಒಪ್ಪಂದ ಉಲ್ಲಂಘಿಸಿದ ಕಾರಣಕ್ಕೆ ಬಿಬಿಎಂಪಿ 'ರ್‍ಯಾಮ್ಕಿ ಎನರ್ಜಿ ಆ್ಯಂಡ್ ಎನ್ವಿರಾನ್ಮೆಂಟ್ ಲಿಮಿಟೆಡ್' ಕಂಪನಿಗೆ 4 ಕೋಟಿ ರೂ. ದಂಡ ಪಾವತಿಸಬೇಕಾಗಿದೆಯಂತೆ.

ಮಾವಳ್ಳಿಪುರದಲ್ಲಿ ಘನತ್ಯಾಜ್ಯ ಸಂಸ್ಕರಣೆ ಘಟಕ ಸ್ಥಾಪಿಸಲು ಈ ಕಂಪನಿ ಜತೆ ಬಿಬಿಎಂಪಿ 2004ರಲ್ಲಿ ಒಪ್ಪಂದ ಮಾಡಿಕೊಂಡಿತ್ತು. ಘಟಕ ಸ್ಥಾಪನೆಗೆ 100 ಎಕರೆ ಜಮೀನು ನೀಡುವುದಾಗಿ ಬಿಬಿಎಂಪಿ ಹೇಳಿತ್ತು. ಯಲಹಂಕ ಸುತ್ತಮುತ್ತಲಿನ ಘನತ್ಯಾಜ್ಯವನ್ನು ಪೂರೈಸುವುದಾಗಿಯೂ ಹೇಳಿತ್ತು. ಕಂಪನಿ ಈ ತ್ಯಾಜ್ಯವನ್ನು ಸಂಸ್ಕರಿಸಿ, ಜೈವಿಕ ಗೊಬ್ಬರವನ್ನಾಗಿ ಮಾರಾಟ ಮಾಡಬಹುದು ಎಂದು ಒಪ್ಪಂದದಲ್ಲಿ ಹೇಳಲಾಗಿತ್ತು.

100 ಎಕರೆ ಜಮೀನು ಕೊಡುವುದಾಗಿ ಹೇಳಿದ ಪಾಲಿಕೆ ಕೇವಲ 44 ಎಕರೆ ಕೊಟ್ಟಿತ್ತು. ಈ ಪ್ರದೇಶದಲ್ಲಿ ಹೈಟೆನ್ಷನ್ ತಂತಿಗಳು ಹಾದು ಹೋಗಿರುವುದು, ಸಂಸ್ಕರಣ ಘಟಕಕ್ಕೆ ಸ್ಥಳೀಯರ ವಿರೋಧ ಇತ್ಯಾದಿ ಕಾರಣದಿಂದಾಗಿ ಒಪ್ಪಿತ ಪ್ರಮಾಣದ ಜಮೀನನ್ನು ಕೊಡಲು ಆಗಿರಲಿಲ್ಲ.

ಪ್ರತಿದಿನ ಬಿಬಿಎಂಪಿ 600 ಟನ್ನಿನಷ್ಟು ತ್ಯಾಜ್ಯ ಸುರಿಯುತ್ತಿತ್ತು. ಇದು ಒಪ್ಪಿತ ಪ್ರಮಾಣಕ್ಕಿಂತ ಹೆಚ್ಚು ಇತ್ತು. ಅದನ್ನು ನಿಭಾಯಿಸಲು ಕಂಪನಿಗೆ ಅಸಾಧ್ಯವಾಗಿತ್ತು. ಮಿತಿಮೀರಿ ತ್ಯಾಜ್ಯ ಸುರಿಯದಂತೆ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯು ಹೈಕೋರ್ಟ್ ಆದೇಶದ ಮೇರೆಗೆ ಸೂಚಿಸಿತ್ತು.

'ಕಂಪನಿಯೂ ನಾವು ಹೇಳಿದಂತೆ ಕಾರ್ಯ ನಿರ್ವಹಿಸುತ್ತಿರಲಿಲ್ಲ. 120 ಕಾರ್ಮಿಕರು ಇರಬೇಕಾದಲ್ಲಿ ಕೇವಲ 100 ಜನ ಇದ್ದರು. ಘಟಕದಲ್ಲಿ ಯಾವುದೇ ಸುಧಾರಣೆ ಕಂಡುಬರಲಿಲ್ಲ. ನಾವು ಅವರಿಗೆ ಕಸ ಎತ್ತುವಿಕೆ ವೆಚ್ಚ (ಟಿಪ್ಪಿಂಗ್ ಫೀ) ಕೂಡ ಪಾವತಿಸುತ್ತಿದ್ದೆವು. ಇದರಿಂದ ಕಂಪನಿಗೆ ಶೇ. 20ರಷ್ಟು ಆದಾಯ ಬರುತ್ತಿತ್ತು. ಹಾಗಿದ್ದೂ ಸರಿಯಾಗಿ ಕಾರ್ಯ ನಿರ್ವಹಿಸದ ಪ್ರಯುಕ್ತ ನಾವು ಒಪ್ಪಂದವನ್ನು ರದ್ದುಗೊಳಿಸಬೇಕಾಯಿತು. ವಾಸ್ತವವಾಗಿ 20 ವರ್ಷಗಳಿಗೆ ಈ ಒಪ್ಪಂದ ಮಾಡಿಕೊಳ್ಳಲಾಗಿತ್ತು. ಆದರೆ 2016ರಲ್ಲಿ ಅದನ್ನು ರದ್ದುಗೊಳಿಸಲಾಯಿತು ಎಂದು ಬಿಬಿಎಂಪಿ ಅಧಿಕಾರಿಯೊಬ್ಬರು ಹೇಳಿದರು.

'ಬಿಬಿಎಂಪಿ ಇದುವರೆಗೆ 11.54 ಕೋಟಿ ರೂ. ಟಿಪ್ಪಿಂಗ್ ಶುಲ್ಕ ಪಾವತಿಸಿದೆ. ಅದರಲ್ಲಿ ಹೆಚ್ಚುವರಿ ಮೊತ್ತ 8.91 ರೂ. ಕೋಟಿಯನ್ನು ಹಿಂದಿರುಗಿಸಬೇಕು' ಎಂದು ಕೋರಿದ್ದೇವೆ ಎಂದು ಅಧಿಕಾರಿ ವಿವರಿಸಿದರು. 'ಆದರೆ, ಬಿಬಿಎಂಪಿ ತಾನು ಹೇಳಿದಂತೆ 100 ಎಕರೆ ಜಮೀನು ಕೊಟ್ಟಿಲ್ಲ. ಮಾತ್ರವಲ್ಲ ಮಿತಿಮೀರಿ ತ್ಯಾಜ್ಯ ಸುರಿದು ನಾವು ಕಾರ್ಯ ನಿರ್ವಹಿಸದಂತೆ ಮಾಡಿದೆ. ಅವಧಿಗೂ ಮುನ್ನ ಒಪ್ಪಂದ ರದ್ದು ಮಾಡಿದೆ. ಹೀಗಾಗಿ ನಮಗೆ ದಂಡ ಪಾವತಿಸಬೇಕು' ಎಂದು ಕಂಪನಿ ವಾದಿಸಿದೆ. ಈಗ ವಿಧಿಸಲಾದ ದಂಡದ ಮೊತ್ತವನ್ನು ಅರ್ಧಕ್ಕಿಳಿಸಲು ಕಂಪನಿಯನ್ನು ಕೋರುವುದಾಗಿ ಅಧಿಕಾರಿಗಳು ಹೇಳಿದರು

ಕಳಪೆ ಕಾಮಗಾರಿ

ರಸ್ತೆಗಳಲ್ಲಿ ಗುಂಡಿ ಬೀಳುವುದನ್ನು ತಪ್ಪಿಸುವ ಉದ್ದೇಶದಿಂದ ಹೊಸೂರು ರಸ್ತೆಯ ಮಡಿವಾಳ ಕೆಳಸೇತುವೆಯಲ್ಲಿ ಹಾಕಿದ್ದ ಟಿಕಿ ಡಾಂಬರು ಶೀಟುಗಳು ಆರು ತಿಂಗಳಲ್ಲೇ ಕಿತ್ತು ಹೋಗಿವೆ.

ಕೆಳಸೇತುವೆಯ ಡಾಂಬರು ಪದರವನ್ನು ತೆಗೆದು, ಅಲ್ಲಿಗೆ ಟಿಕಿ ಡಾಂಬರು ಶೀಟು ಹೊದಿಸಲಾಗಿತ್ತು. ಅದರ ಮೇಲೆ 40 ಎಂ.ಎಂ.ನಷ್ಟು ದಪ್ಪದಲ್ಲಿ ಡಾಂಬರು (ಬಿಟುಮಿನ್ ಕಾಂಕ್ರೀಟ್) ಹಾಕಲಾಗಿತ್ತು. ಈ ಶೀಟು ಬಳಕೆಯಿಂದ ಡಾಂಬರು ಸಡಿಲಗೊಳ್ಳುವುದು, ನೀರು ಇಂಗುವುದನ್ನು ತಡೆಯಬಹುದು ಎಂದು ಅಧಿಕಾರಿಗಳು ಹೇಳಿದ್ದರು.

'ಈ ಕಾಮಗಾರಿಯಿಂದಾಗಿ ರಸ್ತೆಯಲ್ಲಿ ಗುಂಡಿಗಳು ಬೀಳುವುದು ಕಡಿಮೆ ಆಗುತ್ತದೆ. ರಸ್ತೆ ನಯವಾಗುತ್ತದೆ. ರಸ್ತೆ 5 ವರ್ಷಗಳವರೆಗೆ ಬಾಳಿಕೆ ಬರುತ್ತದೆ' ಎಂದು ಬಿಬಿಎಂಪಿ ಮುಖ್ಯ ಎಂಜಿನಿಯರ್ ಆಗಿದ್ದ (ಮುಖ್ಯರಸ್ತೆ) ಬಿ.ಎಸ್.ಪ್ರಹ್ಲಾದ್ ಅವರು 2017ರ ಡಿಸೆಂಬರ್ 25ರಂದು 'ಪ್ರಜಾವಾಣಿ'ಗೆ ತಿಳಿಸಿದ್ದರು. ಆದರೆ, ಈ ಶೀಟುಗಳು ಕಿತ್ತು ಹೋಗಿ ವಾಹನ ಸವಾರರಿಗೆ ತೊಂದರೆ ಉಂಟು ಮಾಡುತ್ತಿವೆ. ಈ ಕಾಮಗಾರಿಗೆ ಪಾಲಿಕೆ 1.10 ಕೋಟಿ ರೂ. ವೆಚ್ಚ ಮಾಡಿದೆ. ●

ನೇರ ಪ್ರವೇಶ: ನಾಗರಿಕ ಸೇವೆಯನ್ನು ಬುಡಮೇಲು ಮಾಡುವ ಹುನ್ನಾರ





ಈ ನೇರ ಪ್ರವೇಶವನ್ನು ಸ್ವತಃ ಪ್ರಧಾನಿಯವರೇ ಮುಂದೊತ್ತುತ್ತಿದ್ದಾರೆ. ಇದು ಖಾಸಗೀಕರಣದ ಮಹಾ ಯೋಜನೆಯ ಭಾಗವಾಗಿದೆ. ಉದಾರೀಕರಣ ಜಾರಿಗೆ ಬಂದ ನಂತರದಲ್ಲಿ ಐಎಎಸ್ ಅಧಿಕಾರಿಗಳ ನೇಮಕದಲ್ಲಿ ಸುಮಾರು ಮೂರನೇ ಒಂದರಷ್ಟು ದೊಡ್ಡ ಪ್ರಮಾಣದ ಕಡಿತ ಮಾಡಿದ ಹಿನ್ನೆಲೆಯಲ್ಲಿ ಈ ಪಾರ್ಶ್ವ ಪ್ರವೇಶ ನೀತಿ ಬರುತ್ತಿದೆ. ಹೀಗೆ ಸೃಷ್ಟಿಸಿದ ಕೊರತೆಯನ್ನು ಖಾಸಗಿ ಕ್ಷೇತ್ರದಿಂದ ನೇಮಕ ಮಾಡಿ ತುಂಬಿಸಿಕೊಳ್ಳುವ ಪ್ರಯತ್ನ ನಡೆದಿದೆ.

*** ಪ್ರಕಾಶ್ ಕಾರಟ್**

ನಾಗರಿಕ ಸೇವೆಗಳಲ್ಲಿ ಜಂಟಿ ಕಾರ್ಯದರ್ಶಿ ಮಟ್ಟದಲ್ಲಿ ನೇರ ಪ್ರವೇಶದ (ಲ್ಯಾಟರಲ್ ಎಂಟ್ರಿ–ಪಾರ್ಶ್ವ ಪ್ರವೇಶ) ನೀತಿಯನ್ನು ಸರಕಾರ ಪ್ರಕಟಿಸಿದ್ದು ಇದು ಅನೇಕ ಪ್ರಶ್ನೆಗಳನ್ನು ಹುಟ್ಟು ಹಾಕಿದೆ. ಸಚಿವ ಸಂಪುಟ ಕಾರ್ಯದರ್ಶಿ ನೇತೃತ್ವದ ಸಮಿತಿಯೊಂದು ನೇಮಕ ಮಾಡಿಕೊಳ್ಳಲಿರುವ ಹತ್ತು ಜಂಟಿ ಕಾರ್ಯದರ್ಶಿಗಳ ಹುದ್ದೆಗೆ ಅರ್ಜಿ ಆಹ್ವಾನಿಸಿ ಕೇಂದ್ರ ಸರಕಾರ ಜಾಹಿರಾತು ಪ್ರಕಟಿಸಿದೆ. ಸಾರ್ವಜನಿಕ ಕ್ಷೇತ್ರ, ವಿಶ್ವವಿದ್ಯಾನಿಲಯಗಳು, ಅಥವಾ ಬಹುರಾಷ್ಟ್ರೀಯ ಕಂಪೆನಿಗಳಲ್ಲಿ ಕೆಲಸ ಮಾಡುತ್ತಿರುವವರೂ ಸೇರಿದಂತೆ ಖಾಸಗಿ ಕ್ಷೇತ್ರದವರು– ಈ ಪೈಕಿ ಯಾರೂ ಅರ್ಜಿ ಸಲ್ಲಿಸಬಹುದೆಂದು ಸೂಚಿಸಲಾಗಿದೆ. ವೃತ್ತಿಯಲ್ಲಿ 15 ವರ್ಷ ಅನುಭವ ಇರಬೇಕೆಂಬುದು ಅರ್ಹತೆಯಾಗಿದೆ.

ಇದು ಸದ್ಯ ಸಾಧುವಾಗಿ ಕಾಣುವ, ಆದರೆ ಮುಂದೆ ಅಪಾಯಕಾರಿಯಾಗಬಹುದಾದ ಒಂದು ಕ್ರಮ. ಈ ನೇರ ಪ್ರವೇಶವನ್ನು ಸ್ವತಃ ಪ್ರಧಾನಿಯವರೇ ಮುಂದೊತ್ತುತ್ತಿದ್ದಾರೆ. ಇದು ಖಾಸಗೀಕರಣದ ಮಹಾ ಯೋಜನೆಯ ಭಾಗವಾಗಿದೆ. ಯೋಜನಾ ಆಯೋಗವನ್ನು ಕಳಚಿ ಹಾಕಲಾಯಿತು, ಅದರ ಜಾಗದಲ್ಲಿ ನೀತಿ ಆಯೋಗ ಎಂಬ 'ಚಿಂತಕರ ಚಾವಡಿ'ಯನ್ನು ರಚಿಸಲಾಯಿತು. ಈ ನೀತಿ ಆಯೋಗ ಎಂಬುದು ಖಾಸಗೀಕರಣದ ಸಮಾಲೋಚಕ ಸಂಸ್ಥೆ (ಕನ್ಸಲ್ಟಂಟ್) ಆಗಿ ಕಾರ್ಯ ನಿರ್ವಹಿಸುತ್ತಿದೆ.

ಉದಾರೀಕರಣ ಜಾರಿಗೆ ಬಂದ ನಂತರದಲ್ಲಿ ಐಎಎಸ್ ಅಧಿಕಾರಿಗಳ ನೇಮಕದಲ್ಲಿ ಸುಮಾರು ಮೂರನೇ ಒಂದರಷ್ಟು ದೊಡ್ಡ ಪ್ರಮಾಣದ ಕಡಿತ ಮಾಡಿದ ಹಿನ್ನೆಲೆಯಲ್ಲಿ ಈ ಪಾರ್ಶ್ವ ಪ್ರವೇಶ ನೀತಿ ಬರುತ್ತಿದೆ. ಹೀಗೆ ಸೃಷ್ಟಿಸಿದ ಕೊರತೆಯನ್ನು ಖಾಸಗಿ ಕ್ಷೇತ್ರದಿಂದ ನೇಮಕ ಮಾಡಿ ತುಂಬಿಸಿಕೊಳ್ಳುವ ಪ್ರಯತ್ನ ನಡೆದಿದೆ.

ನಾಗರಿಕ ಸೇವೆಯ ದರ್ಜೆಗೆ ನೇಮಕ ಮಾಡಿಕೊಳ್ಳಬೇಕಾಗಿರುವ ಕೇಂದ್ರ ಲೋಕಸೇವಾ ಆಯೋಗ (ಯುಪಿಎಸ್‌ಸಿ)ವನ್ನು ಬದಿಗೊತ್ತಿರುವುದು ಈ ಪ್ರಕ್ರಿಯೆಯ ಇನ್ನೊಂದು ಗಮನಾರ್ಹ ಅಂಶವಾಗಿದೆ. ಪಾರ್ಶ್ವ ಪ್ರವೇಶ ನೇಮಕಗಳು ಮೂರು ವರ್ಷ ಅವಧಿಯ ಗುತ್ತಿಗೆ ಆಧಾರದ ನೇಮಕಗಳಾಗಿರುತ್ತವೆ ಹಾಗೂ ಅವನ್ನು ಇನ್ನೆರಡು ವರ್ಷಗಳಿಗೆ ವಿಸ್ತರಿಸಬಹುದಾಗಿದೆ.

ಹಿಂದೆಲ್ಲಾ ನೇರ ನೇಮಕವು ಮುಖ್ಯವಾಗಿ ಆರ್ಥಿಕ ತಜ್ಞರಂಥ ಒಂದು ಸಣ್ಣ ವಿಭಾಗಕ್ಕೆ ಸೀಮಿತವಾಗಿರುತ್ತಿತ್ತು. ಅವರನ್ನು ಆರ್ಥಿಕ ಸಚಿವಾಲಯಗಳಿಗೆ ಆರ್ಥಿಕ ಸಲಹೆಗಾರರು ಅಥವಾ ಮುಖ್ಯ ಆರ್ಥಿಕ ಸಲಹೆಗಾರರನ್ನಾಗಿ ನೇಮಕ ಮಾಡಿಕೊಳ್ಳಲಾಗುತ್ತಿತ್ತು. ಆದರೆ ಈಗ, ಎಲ್ಲಾ ಆರ್ಥಿಕ ಮತ್ತು ಮೂಲ ಸೌಕರ್ಯ ಸಚಿವಾಲಯಗಳ ಮಹತ್ವದ ಜಂಟಿ ಕಾರ್ಯದರ್ಶಿ ಮಟ್ಟದ ಹುದ್ದೆಗೆ ನೇರ ನೇಮಕದ ಅವಕಾಶವನ್ನು ತೆರೆಯಲಾಗಿದೆ.

ಖಾಸಗಿ ರಂಗ, ಕಾರ್ಪೊರೇಟ್ ಮತ್ತು ಬಹುರಾಷ್ಟ್ರೀಯ ಕಂಪೆನಿಗಳಿಂದ ಅಧಿಕಾರಿಗಳನ್ನು ನೇಮಕ ಮಾಡಿಕೊಳ್ಳುವುದರಿಂದ ಆಡಳಿತಶಾಹಿಯಲ್ಲಿ ಸಾರ್ವಜನಿಕ ಸೇವೆಯ ಸ್ವರೂಪಕ್ಕೆ ಗಂಭೀರ ಅಪಾಯ ಉಂಟಾಗುತ್ತದೆ. ಈ ರೀತಿ ನೇಮಕಗೊಂಡವರು ಸಾರ್ವಜನಿಕ ಹಿತವನ್ನು ಕಡೆಗಣಿಸಿ ಕಾರ್ಪೊರೇಟ್ ಹಿತಗಳನ್ನು ರಕ್ಷಿಸುವತ್ತ ಹೆಚ್ಚು ಒಲವು ಹೊಂದಿರುವ ಸಾಧ್ಯತೆಗಳಿರುತ್ತವೆ. ಇದು ಆಡಳಿತದಲ್ಲಿನ ಹುದ್ದೆಗಳು ಕಾರ್ಪೊರೇಟ್ ಎಕ್ಸಿಕ್ಯುಟಿವ್‌ಗಳು ಪರಸ್ಪರ ಅದಲು–ಬದಲು ಆಗಬಹುದಾದ ಅಮೆರಿಕದ ಮಾದರಿಯನ್ನು ನಕಲು ಮಾಡುವಂತದ್ದಾಗುತ್ತದೆ.

ವಾಸ್ತವವಾಗಿ, ನೀತಿ ಆಯೋಗದ ಕಾರ್ಯದರ್ಶಿ ಅಮಿತಾಭ್ ಕಾಂತ್ ಈ ನೇರ ನೇಮಕ ವ್ಯವಸ್ಥೆಯನ್ನು ಶ್ಲಾಘಿಸುತ್ತ "ಸರಕಾರ ತನ್ನ ಅಧಿಕಾರಿಗಳನ್ನು ಖಾಸಗಿ ಕ್ಷೇತ್ರಕ್ಕೆ ಡೆಪ್ಯುಟೇಶನ್ ಮೇಲೆ ಕಳಿಸಲು ಕೂಡ ಬಿಡಬೇಕು" ಎಂದು ಹೇಳಿದ್ದಾರೆ.

ಈಗಿನ ಆಳ್ವಿಕೆಯಲ್ಲಿ ಇನ್ನೂ ಒಂದು ಅಪಾಯವಿದೆ. ಈ ನೇರ ನೇಮಕ ಎಂಬ ಪ್ರವೇಶವನ್ನು ಆರ್‌ಎಸ್‌ಎಸ್–ಹಿಂದುತ್ವ ಮನೋಭಾವದ ಸಿಬ್ಬಂದಿಗಳನ್ನು ನಾಗರಿಕ ಸೇವೆಯ ಉನ್ನತ ಹಂತಗಳಲ್ಲಿ ತೂರಿಸಲು ಬಳಸಿಕೊಳ್ಳುವ ಅಪಾಯ ಇದ್ದೇ ಇದೆ. ಸರಕಾರದಿಂದ ನೇರ ನೇಮಕದ ಅವಕಾಶ ಇರುವ ಕಡೆಯಲ್ಲೆಲ್ಲಾ ಈಗಾಗಲೇ ಈ ಪ್ರಕ್ರಿಯೆ ಚಾಲ್ತಿಯಲ್ಲಿದೆ.

ಈ ನೇರ ನೇಮಕ ವ್ಯವಸ್ಥೆಯನ್ನು ಸಾಮಾನ್ಯೀಕರಿಸಿದರೆ ಹಾಗೂ ಎಲ್ಲಾ ದರ್ಜೆಗಳಿಗೆ ವಿಸ್ತರಿಸಿದರೆ, ಅದು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಿಗೆ ಹುದ್ದೆಗಳಲ್ಲಿ ಇರುವ ಮೀಸಲಾತಿಯನ್ನು ಬುಡಮೇಲು ಮಾಡಲಿದೆ. ಕೇಂದ್ರ ಸಚಿವ ಸಂಪುಟದಲ್ಲಿ ಸಚಿವರಾಗಿರುವ ಬಿಜೆಪಿಯ ಮೈತ್ರಿ ಪಕ್ಷದ ಒಬ್ಬ ಸದಸ್ಯರು ಈಗಾಗಲೇ ಈ ಬಗ್ಗೆ ಭೀತಿಯನ್ನು ವ್ಯಕ್ತಪಡಿಸಿದ್ದಾರೆ.

ನಾಗರಿಕ ಸೇವೆಗಳ ಅದರಲ್ಲೂ ವಿಶೇಷವಾಗಿ ಐಎಎಸ್‌ನ ಸಮಗ್ರತೆಯನ್ನು ರಕ್ಷಿಸಬೇಕಾಗಿದೆ. ನಾಗರಿಕ ಸೇವೆಯಲ್ಲಿರುವವರು ರಾಜಕೀಯ ಅಧಿಕಾರಕ್ಕೆ ಪ್ರಜಾಸತ್ತಾತ್ಮಕವಾಗಿ ಉತ್ತರದಾಯಿಯಾಗಿರುವ ಸಂವಿಧಾನಿಕ ವ್ಯವಸ್ಥೆಗೆ ಭಂಗ ಬರಬಾರದು. ಹಿರಿಯ ಮಟ್ಟಗಳಲ್ಲಿನ ಅಧಿಕಾರಿಗಳಿಗೆ ವಿಶೇಷಜ್ಞತೆ ಹಾಗೂ ಕ್ಷೇತ್ರ ಜ್ಞಾನ ಅಗತ್ಯವಾಗಿದೆ. ಇಂತಹ ವಿಶೇಷೀಕರಣಕ್ಕೆ ಅವಕಾಶ ಕಲ್ಪಿಸಬೇಕು.

ಆದರೆ ಯುಪಿಎಸ್‌ಸಿಯನ್ನು ಬದಿಗೊತ್ತುವ ಹಾಗೂ ರಾಜಕೀಯ ಅಧಿಕಾರಸ್ಥರ ಮೂಲಕ ಹಿರಿಯ ನಾಗರಿಕ ಅಧಿಕಾರಿಗಳನ್ನು ನೇರವಾಗಿ ನೇಮಿಸುವ ಪ್ರಯತ್ನಗಳನ್ನು ವಿರೋಧಿಸಬೇಕು. ಪಾರ್ಶ್ವ ಪ್ರವೇಶ ನೀತಿಯನ್ನು ಸರಕಾರ ವಾಪಸ್ ಪಡೆಯಬೇಕು.

ಅನು: ವಿಶ್ವ

ಬಿಜೆಪಿ ಕೇಂದ್ರ ಸರಕಾರ ಒಕ್ಕೂಟತತ್ವವನ್ನು ಶಿಥಿಲಗೊಳಿಸುತ್ತಿದೆ–ಸೀತಾರಾಮ್ ಯೆಚುರಿ

ದಿಲ್ಲಿ ರಾಜ್ಯ ಸರಕಾರದ ಮುಖ್ಯಮಂತ್ರಿಗಳೂ ಸೇರಿದಂತೆ ಸರಕಾರದ ಮುಖಂಡರುಗಳು ಕೇಂದ್ರದ ಬಿಜೆಪಿ ಸರಕಾರ ಉಪರಾಜ್ಯಪಾಲರ ಮೂಲಕ ತಮ್ಮ ಸರಕಾರವನ್ನು ಅಸ್ಥಿರಗೊಳಿಸುವುದರ ವಿರುದ್ಧ ರಾಜನಿವಾಸದಲ್ಲಿ ಧರಣಿ ನಡೆಸುತ್ತಿದ್ದ ಹಿನ್ನೆಲೆಯಲ್ಲಿ ಸಿಪಿಐ(ಎಂ) ಜೂನ್ 17 ರಂದು ಪ್ರಧಾನ ಮಂತ್ರಿಗಳ ನಿವಾಸದ ಎದುರು ಪ್ರತಿಭಟನೆಯಲ್ಲಿ ಕೈಜೋಡಿಸಿತು. ಪ್ರಧಾನ ಕಾರ್ಯದರ್ಶಿ ಸೀತಾರಾಮ್ ಯೆಚುರಿ ದಿಲ್ಲಿ ಸಿಪಿಐ(ಎಂ)ನ ಮುಖಂಡರು ಮತ್ತು ಕಾರ್ಯಕರ್ತರೊಂದಿಗೆ ಭಾಗವಹಿಸಿದರು.

ಒಕ್ಕೂಟ ತತ್ವ ನಮ್ಮ ಸಂವಿಧಾನದ ಒಂದು ಮೂಲ ಲಕ್ಷಣ. ಅದನ್ನು ಬಿಜೆಪಿ ಕೇಂದ್ರ ಸರಕಾರ ಇದನ್ನು ಶಿಥಿಲಗೊಳಿಸುತ್ತಿದೆ ಎಂದು ಯೆಚುರಿ ಬಲವಾಗಿ ಖಂಡಿಸಿದರು.

ರಾಜ್ಯಪಾಲರುಗಳು ಮತ್ತು ಉಪರಾಜ್ಯಪಾಲರುಗಳ ಹುದ್ದೆಗಳನ್ನು ಬಳಸಿಕೊಂಡು ಬಿಜೆಪಿ ಕೇಂದ್ರ ಸರಕಾರ ಪ್ರಜಾಸತ್ತಾತ್ಮಕವಾಗಿ ಚುನಾಯಿತವಾಗಿರುವ ಬಿಜೆಪಿಯೇತರ ಸರಕಾರಗಳನ್ನು ಅಸ್ಥಿರಗೊಳಿಸಲು ಪ್ರಯತ್ನಿಸುತ್ತಿದೆ. ದಿಲ್ಲಿ ಮತ್ತು ಪುದುಚೇರಿಯ ಚುನಾಯಿತ ಸರಕಾರಗಳ ವಿಷಯದಲ್ಲಿ ಇದು ನಡೆಯುತ್ತಿದೆ ಎಂದ ಯೆಚುರಿ ಇತ್ತೀಚೆಹಷ್ಟೇ, ಕರ್ನಾಟಕದಲ್ಲಿ ಜನಾದೇಶವನ್ನು ಹೈಜಾಕ್ ಮಾಡಲು ರಾಜ್ಯಪಾಲರ ಹುದ್ದೆಯನ್ನು ಬಳಸಿಕೊಳ್ಳಲು ನಡೆಸಿದ ಪ್ರಯತ್ನದತ್ತ ಗಮನ ಸೆಳೆದಿದ್ದಾರೆ.

ಗೋವಾ, ಮಣಿಪುರ, ಮೇಘಾಲಯದಲ್ಲಿ ಆಗಿರುವಂತೆ ಚುನಾವಣೆಗಳಲ್ಲಿ ಸೋತಿರುವಲ್ಲಿಯೂ ಬಿಜೆಪಿ ಸರಕಾರಗಳನ್ನು ಕೂರಿಸಲು ರಾಜ್ಯಪಾಲರ ಹುದ್ದೆಯನ್ನು ದುರುಪಯೋಗ ಪಡಿಸಿಕೊಳ್ಳಲಾಗಿದೆ.

ಬಿಹಾರದಲ್ಲಿ ಚುನಾವಣೆಗಳಲ್ಲಿ ಬಲವಾದ ಸೋಲುಂಡ ಬಿಜೆಪಿ ಹಿಂಬಾಗಿಲಿನಿಂದ ಸರಕಾರವನ್ನು ಪ್ರವೇಶಿಸಲು ಅವಕಾಶವಾಗುವಂತೆ ರಾಜ್ಯಪಾಲರ ಹುದ್ದೆಯ ದುರುಪಯೋಗ ನಡೆಯಿತು.

ಕೇಂದ್ರ–ರಾಜ್ಯ ಸಂಬಂಧಗಳು ಭಾರತೀಯ ಸಂವಿಧಾನದ ಒಕ್ಕೂಟ ತತ್ವದ ಬೆನ್ನೆಲುಬು. ಈಗಾಗಲೇ ಅದು ನಾಜೂಕು ಸ್ಥಿತಿ ತಲುಪಿದೆ. ಮೇಲೆ ಹೇಳಿದಂತಹ ಪ್ರಯತ್ನಗಳು ಈ ಸಂಬಂಧಗಳನ್ನು ಧ್ವಂಸ ಮಾಡುತ್ತಿವೆ. ಇವಕ್ಕೆ ಅನುಮತಿ ಸಿಗಬಾರದು ಎಂದು ಯೆಚುರಿ ಹೇಳಿದ್ದಾರೆ.



ಕೇಂದ್ರ ಸರಕಾರದಿಂದ ಸಂವಿಧಾನದ ಅಂಶಗಳ ಇಂತಹ ಸರ್ವಾಧಿಕಾರಶಾಹಿ ದುರುಪಯೋಗಕ್ಕೆ ಮೊದಲು ಬಲಿಯಾದವರು ಭಾರತದ ಕಮ್ಯುನಿಸ್ಟರು. ಕೇರಳದಲ್ಲಿ 1957ರಲ್ಲಿ ಪ್ರಜಾಸತ್ತಾತ್ಮಕವಾಗಿ ಚುನಾಯಿತಗೊಂಡ ಸರಕಾರವನ್ನು 1959ರಲ್ಲಿ ಪ್ರಜಾಪ್ರಭುತ್ವ–ವಿರೋಧಿ ರೀತಿಯಲ್ಲಿ ವಜಾ ಮಾಡಲಾಯಿತು. ನಂತರವೂ ಕೇರಳ ಮತ್ತು ಪಶ್ಚಿಮ ಬಂಗಾಲದ ಎಡನೇತೃತ್ವದ ಸರಕಾರಗಳೊಂದಿಗೆ ಇಂತಹುದೇ ರೀತಿಯಲ್ಲಿ ವ್ಯವಹರಿಸಲಾಯಿತು ಎಂಬುದನ್ನು ಸೀತಾರಾಂ ಯೆಚುರಿ ಈ ಸಂದರ್ಭದಲ್ಲಿ ನೆನಪಿಸಿದರು.

ಸಪ್ಟಂಬರ್ 5–ಮಜ್ದೂರ್–ಕಿಸಾನ್ ಸಂಘರ್ಷ ರ‍್ಯಾಲಿ

ಪುಟ 2 ರಿಂದ

ಐಕ್ಯ ಹೋರಾಟಗಳನ್ನು ಬಲಪಡಿಸಲು ಶ್ರಮಜೀವಿಗಳ ಎಲ್ಲ ವಿಭಾಗಗಳ ಸಾಧ್ಯವಾದಷ್ಟು ವಿಶಾಲವಾದ ಐಕ್ಯತೆಯನ್ನು ಕಟ್ಟಲು ಶ್ರಮಿಸುವುದಾಗಿ ಸಿಐಟಿಯು, ಎಐಕೆಎಸ್, ಮತ್ತು ಎಐಎಡಬ್ಲ್ಯುಯು ಹೇಳಿವೆ.

ಮಜ್ದೂರ್–ಕಿಸಾನ್ ಸಂಘರ್ಷ ರ‍್ಯಾಲಿಯಲ್ಲಿ ಈ ಮೂರು ಸಂಘಟನೆಗಳು ಈ ಕೆಳಗಿನ 15 ಬೇಡಿಕೆಗಳ ಮೇಲೆ ಗಮನ ಕೇಂದ್ರೀಕರಿಸಲು ನಿರ್ಧರಿಸಿವೆ:

1. ಬೆಲೆಯೇರಿಕೆಯನ್ನು ತಡೆಗಟ್ಟಬೇಕು; ಸಾರ್ವಜನಿಕ ವಿತರಣಾ ವ್ಯವಸ್ಥೆಯನ್ನು ಸಾರ್ವತ್ರಿಕಗೊಳಿಸಬೇಕು; ಆವಶ್ಯಕ ಸರಕುಗಳಲ್ಲಿ ವಾಯಿದಾ ವ್ಯಾಪಾರವನ್ನು ನಿಷೇಧಿಸಬೇಕು.
2. ಗೌರವಯುತ ಉದ್ಯೋಗದ ನಿರ್ಮಾಣಕ್ಕೆ ಮೂರ್ತ ಕ್ರಮಗಳನ್ನು ಕೈಗೊಳ್ಳಬೇಕು.
3. ಎಲ್ಲ ಕಾರ್ಮಿಕರಿಗೂ ಮಾಸಿಕ ರೂ.18,000 ಗಿಂತ ಕಡಿಮೆಯಿಲ್ಲದಂತೆ ಕನಿಷ್ಠ ಕೂಲಿ ನಿಗದಿಯಾಗಬೇಕು.
4. ಕಾರ್ಮಿಕ–ವಿರೋಧಿ ಕಾರ್ಮಿಕ ಕಾಯ್ದೆ ತಿದ್ದುಪಡಿಗಳನ್ನು ನಿಲ್ಲಿಸಬೇಕು.
5. ಸ್ವಾಮಿನಾಥನ್ ಆಯೋಗದ ಶಿಫಾರಸಿನಂತೆ ರೈತರಿಗೆ ಫಲದಾಯಕ ಬೆಲೆಗಳು ಸಿಗುವಂತೆ ಮಾಡಬೇಕು; ಸಾರ್ವಜನಿಕ ಖರೀದಿ ನಡೆಯುವಂತೆ ಮಾಡಬೇಕು.
6. ಬಡರೈತರು ಮತ್ತು ಕೃಷಿಕೂಲಿಕಾರರಿಗೆ ಸಾಲ ಮನ್ನಾ.
7. ಕೃಷಿ ಕಾರ್ಮಿಕರಿಗೆ ಸಮಗ್ರ ಶಾಸನ ರೂಪಿಸಬೇಕು
8. ಎಲ್ಲ ಗ್ರಾಮೀಣ ಪ್ರದೇಶಗಳಲ್ಲಿ ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಕಾಯ್ದೆಯ ಜಾರಿ; ನಗರಪ್ರದೇಶಗಳನ್ನು ಒಳಗೊಳ್ಳುವಂತೆ ಕಾಯ್ದೆಗೆ ತಿದ್ದುಪಡಿ ತರಬೇಕು.
9. ಎಲ್ಲರಿಗೂ ಆಹಾರ ಭದ್ರತೆ, ಆರೋಗ್ಯ, ಶಿಕ್ಷಣ, ವಸತಿ.
10. ಸಾರ್ವತ್ರಿಕ ಸಾಮಾಜಿಕ ಭದ್ರತೆ.
11. ಕಾಂಟ್ರಾಕ್ಟೀಕರಣ ಬೇಡವೇ ಬೇಡ.
12. ಮರುಹಂಚಿಕೆಯ ಭೂಸುಧಾರಣೆಗಳನ್ನು ತರಬೇಕು
13. ಬಲವಂತದ ಭೂಸ್ವಾಧೀನವನ್ನು ನಿಲ್ಲಿಸಬೇಕು.
14. ಪ್ರಾಕೃತಿಕ ವಿಕೋಪಗಳ ಸಂತ್ರಸ್ತರಿಗೆ ಪರಿಹಾರ ಮತ್ತು ಮರುವಸತಿ.
15. ನವ–ಉದಾರವಾದಿ ಧೋರಣೆಗಳನ್ನು ಹಿಂತೆಗೆದುಕೊಳ್ಳಬೇಕು.



ಇ.ಎಂ.ಎಸ್. ಸ್ಮರಣೆ :

ಮಾರ್ಕ್ಸ್‌ವಾದ: ವಿಜ್ಞಾನ – ತಂತ್ರಜ್ಞಾನದ ಕುರಿತು ಚಿಂತನ – ಮಂಥನ

ಜೂನ್ 13, ದೇಶದ ಮಹಾನ್ ಮಾರ್ಕ್ಸ್‌ವಾದಿ ಚಿಂತಕ, 'ದುಡಿಯುವ ವರ್ಗದ' ದತ್ತುಪುತ್ರ ಕಾಮ್ರೇಡ್ ಇ.ಎಂ.ಎಸ್. ನಂಬೂದರಿಪಾಡ್‌ರವರ ಜನ್ಮದಿನ. ಅವರು ಅಗಲಿ (1998) 20 ವರುಷಗಳು ಗತಿಸಿದವು. ನಿನ್ನೆ, ಮೊನ್ನೆ 'ಇದ್ದಂತಿದೆ ಅವರ ನೆನಪು. ಅವರ ನೆನಪೇ ಅಷ್ಟು ಹಸಿರು. ಈ ಹಸಿರನ್ನು ಉಸಿರಾಡಲು, ಚಿಂತನೆ ಮತ್ತು ಚಳುವಳಿಯ ಚೇತನ ಮತ್ತಷ್ಟು ಬಲಗೊಳ್ಳಲು ದೇಶದ ಅನೇಕ ಕಡೆ ಪ್ರಯತ್ನಗಳು ನಡೆದೇ ಇವೆ. ವಿಶೇಷವಾಗಿ ಅವರ ಜನ್ಮಭೂಮಿ. ಕೆಂಪು ಕೇರಳವಂತೂ ಅವರ ಚಿಂತನೆಗಳನ್ನು ಸದಾ ಜೀವಂತವಾಗಿರಿಸಲು ಹತ್ತಾರು ವೈವಿಧ್ಯಮಯ ಕಾರ್ಯಗಳನ್ನು ರೂಪಿಸಿದೆ. ಸುಂದರ ಪ್ರಶಾಂತ ಪರಿಸರದಲ್ಲಿ ಶಿಕ್ಷಣ, ತರಬೇತಿ, ಅಕೆಡೆಮಿಕ್ ಚರ್ಚೆಗಳಿಗೆ ಇ.ಎಂ.ಎಸ್. ಅಕಾಡೆಮಿ ಮೈದಳೆದು ನಿಂತಿದ್ದರೆ, ಅವರ ಬರಹಗಳ ಎಲ್ಲವನ್ನೂ ಸಂಗ್ರಹಿಸಿದ 100 ಸಂಪುಟಗಳ ಯೋಜನೆ ಕಾರ್ಯಗತ, ಅವುಗಳ ಅಧ್ಯಯನಕ್ಕೆ 'ಅಧ್ಯಯನ ವೃಂದಗಳು' (ವೇದಿಗಳು) ಸತತ ವಿಚಾರ ಸಂಕಿರಣ, ಇತ್ಯಾದಿಗಳು....

ಎಸ್.ವೈ. ಗುರುಶಾಂತ್



ಅರ್ಥಪೂರ್ಣ ಸಮ್ಮಿಲನ:

ಈ ಸರಣಿಯಲ್ಲಿ ಕೇರಳದ ತ್ರಿಶೂರ್ ಜಿಲ್ಲೆಯೂ ತನ್ನದೇ ವಿಶಿಷ್ಟ, ಕಾರ್ಯಕ್ರಮಗಳು ರೂಪಿಸಿ, ನಾಡಿನ ಬೌದ್ಧಿಕ ವಲಯವನ್ನು ತನ್ನತ್ತ ಸೆಳೆದಿದೆ. ಪ್ರತಿವರ್ಷವೂ ಜೂನ್ 13 ಮತ್ತು 14 ರಂದು 'ಚಿಂತನ – ಮಂಥನಗಳ' ಮಹಾ ಸಮ್ಮಿಲನ ನಡೆದೇ ನಡೆಯುತ್ತದೆ. ಇ.ಎಂ.ಎಸ್. ನಿಧನರಾದ ಆ ವರುಷವೇ ಅವರ ಒಡನಾಡಿಗಳು, ಚಿಂತಕರು, ಎಡ ಚಳುವಳಿಯ ಪ್ರಮುಖರು ಒಂದೆಡೆ ಸೇರಿ ಪ್ರಸಕ್ತ ಮಹತ್ವದ ಒಂದು ಪ್ರಶ್ನೆಯ ಸುತ್ತ ಗಂಭೀರವಾಗಿ ಚರ್ಚೆಗಳನ್ನು ನಡೆಸುತ್ತ ಬಂದಿದ್ದಾರೆ.

ದೇಶದ ಪ್ರಮುಖ ಚಿಂತಕರನ್ನು ಆಹ್ವಾನಿಸಿ, ಅವರ ಮಾತು–ವಿಶ್ಲೇಷಣೆಗಳಿಗೆ ಕಿವಿಯಾಗಿದ್ದಾರೆ. ಮನ ತೆರೆದಿದ್ದಾರೆ, ಮಥಿಸಿದ್ದಾರೆ. ಇಂತಹ ಮುತುವರ್ಜಿಗೆ ಮುಂಚೂಣಿ ವಹಿಸಿದವರೆಂದರೆ ಇ.ಎಂ.ಎಸ್. ನಿಕಟ ಒಡನಾಡಿ ಚಂದ್ರದತ್ತ ಅರ್ಥಾತ್ 'ದತ್ತು ಮಾಶ್'. ಆದರೆ ಈ ವರ್ಷ ಅವರು ಅಗಲಿಬಿಟ್ಟರು. ಈ 20ನೆಯ ಸಮ್ಮಿಲನದ ಎಲ್ಲಾ ರೂಪುರೇಷೆಗಳನ್ನು, ಸಿದ್ಧತೆಗಳನ್ನು ನಡೆಸಿದ ಅವರು ಇದೇ ಮಾರ್ಚ್ 20ಕ್ಕೆ ದೀರ್ಘವಧಿ ಕ್ಯಾನ್ಸರ್‌ನಿಂದ ನಿಧನರಾದರು. ಅವರ ಸ್ಮರಣೆಯಲ್ಲೇ ಈ ಸಮ್ಮಿಲನ ಅರ್ಪಿತವಾಯ್ತು.

"ಮಾರ್ಕ್ಸ್‌ವಾದ: ವಿಜ್ಞಾನ ಮತ್ತು ತಂತ್ರಜ್ಞಾನ" ಈ ಕುರಿತ ಕೇಂದ್ರ ವಿಚಾರ ವಸ್ತುವೇ ಈ 20 ನೇ ಸಮ್ಮಿಲನದ ಮುಖ್ಯ ವಿಷಯ. ಈ ಕುರಿತು ಆಯ್ದ ಪ್ರಮುಖರನ್ನು, ಮಾರ್ಗದರ್ಶಿಸಲು ಅನುಭವಿಗಳನ್ನು ಆಹ್ವಾನಿಸಲಾಗಿತ್ತು. ದೇಶದ ವಿವಿಧ ಭಾಗಗಳಿಂದ ಅವರು ಭಾಗವಹಿಸಿದರು. ಹಾಗೆಯೇ ಪ್ರತಿನಿಧಿಗಳಾಗಿಯೂ ಕೇರಳ ಅಲ್ಲದೇ ಹೊರರಾಜ್ಯಗಳ ಕೆಲವರು, ದುಬೈ, ಸೌದಿ, ಮುಂತಾದೆಡೆಗಳಿಂದಲೂ, ವಿಶೇಷವಾಗಿ ವಿಶ್ವವಿದ್ಯಾಲಯಗಳ ವಿದ್ಯಾರ್ಥಿ ಪ್ರತಿನಿಧಿಗಳೂ ಆಗಮಿಸಿದ್ದರು. ಅಲ್ಲದೇ ತ್ರಿಶೂರ ಜಿಲ್ಲೆಯ ಬಹುತೇಕ, ಎಲ್ಲಾ ಸಾಮೂಹಿಕ ಸಂಘಟನೆಗಳ ಮುಖ್ಯ ಪದಾಧಿಕಾರಿಗಳು ಪಾಲ್ಗೊಂಡಿದ್ದರು. ಈ ಸಮ್ಮಿಲನದ ಸಿದ್ಧತೆಗಾಗಿ ಒಂದು ಸ್ವಾಗತ ಸಮಿತಿಯೂ ರಚನೆಯಾಗಿತ್ತು. ಶಾಸಕ ಹಾಗೂ ಜಿಲ್ಲಾ ಸಿಪಿಐ(ಎಂ) ಕಾರ್ಯದರ್ಶಿ ಕಾಮ್ರೇಡ್ ರಾಧಕೃಷ್ಣ ರವರ ಅಧ್ಯಕ್ಷತೆಯಲ್ಲಿ ಪ್ರೊ. ಮುರಳಿಧರನ್ ರವರ ಸಂಚಾಲಕತ್ವದಲ್ಲಿ ವಿವಿಧ ಸಮಿತಿಗಳೂ ಜವಾಬ್ದಾರಿ ನಿಭಾಯಿಸಿದವು.

ಮೂಲ ಆಶಯ

ಸಮಾಜದ ವರ್ತಮಾನದ ಬಿಕ್ಕಟ್ಟುಗಳಿಂದ ಬಿಡುಗಡೆಯಾಗಲು ಮಾರ್ಕ್ಸ್‌ವಾದಿ ದೃಷ್ಟಿಕೋನದ ಅಳವಡಿಕೆ, ಅದರ ಹುಡುಕಾಟವೇ ಈ ಸಮ್ಮಿಲನದ ಉದ್ದೇಶ. ಬಿಕ್ಕಟ್ಟು ಎಂದಾಗ ಅದು ಕೇವಲ ಬಂಡವಾಳಶಾಹಿ ಬಿಕ್ಕಟ್ಟು ಮಾತ್ರವಲ್ಲ ಪಾರಿಸಾರಿಕ ಮತ್ತು ನಾಗರೀಕತೆಯ ಬಿಕ್ಕಟ್ಟು ಕೂಡ. ಒಂದು ಸಮಾಜವಾಗಿ ನಮ್ಮ ಉತ್ಪಾದನಾ ಸಾಮರ್ಥ್ಯದ ಹೆಚ್ಚಳವು, ನಿಜವಾದ ಅರ್ಥದಲ್ಲಿ ಆಧುನಿಕ ತಂತ್ರಜ್ಞಾನಗಳ ಅಭಿವೃದ್ಧಿ ಮತ್ತು ನೈಸರ್ಗಿಕ ಜ್ಞಾನದ ಉನ್ನತೀಕರಣವೇ ಆಗಿದೆ. ಈ ಪ್ರಕ್ರಿಯೆಯಲ್ಲಿ ನಮ್ಮ ಸಮಾಜದ ಬಹುದೊಡ್ಡ ವಿಭಾಗಗಳನ್ನು ಗುಲಾಮರನ್ನಾಗಿಸಲಾಗಿದೆ. ನೀರು, ಗಾಳಿ ವಿಷಯುಕ್ತವಾಗಿ ಅಪಾಯದಲ್ಲಿರುವ ಜಗತ್ತು ಸೃಷ್ಟಿಗೊಂಡಿದೆ. ಜ್ಞಾನದ ಮುನ್ನಡೆ ಮತ್ತು ತಂತ್ರಜ್ಞಾನದ ಬೆಳವಣಿಗೆ, ಸಮಾಜದ ಮೇಲೆ ಅದರ ಪರಿಣಾಮಗಳ ಇತ್ಯಾರ್ಥ ಹಾಗೂ ಹೊಂದಿರಬೇಕಾದ ದೃಷ್ಟಿ ಬಗೆಗೆ ಈ ಸಮ್ಮಿಲನ ಬೆಳಕು ಚೆಲ್ಲಿತು. ಅಭಿವೃದ್ಧಿಯನ್ನು ನಾವು ನಿಲ್ಲಿಸಬೇಕೇ? ನಮ್ಮ ಅಭಿವೃದ್ಧಿಯ ಗುರಿಗಳು ಭಿನ್ನವಾಗಿರಬೇಕೇ? ಹಾಗೂ ಅದು ನಮ್ಮ 'ಬಿಡುಗಡೆಯ ದೃಷ್ಟಿಕೋನದಲ್ಲಿ ಎಂತಹ ಸ್ಥಾನ? ಈ ದೃಷ್ಟಿಕೋನದಲ್ಲಿ ಜ್ಞಾನ ಮತ್ತು ತಂತ್ರಜ್ಞಾನದ ಮುನ್ನಡೆಯ ಬಗ್ಗೆ ಹೇಗೆ ಯೋಚಿಸಬಹುದು? ಇವೇ ಮುಂತಾದ ಗಹನವಾದ ಪ್ರಶ್ನೆಗಳು ಸಮ್ಮಿಲನದಲ್ಲಿ ಎದ್ದು ಬಂದವು.



ಧಾಳಿಗಳು – ಎದುರಿಸುವ ಸವಾಲು

ವಿಜ್ಞಾನ ಮತ್ತು ಇತಿಹಾಸವನ್ನು ನೋಡುವ ಬಗ್ಗೆ ಹಾಗೂ ಪ್ರಸಕ್ತವಾಗಿ ಅವುಗಳ ಮೇಲೆ ಅವೈಚಾರಿಕ, ತರ್ಕಹೀನ ಸಿದ್ಧಾಂತಗಳ ಧಾಳಿಗಳ ಬಗ್ಗೆ ಚರ್ಚೆಗಳು ಮತ್ತೊಂದು ಘಟ್ಟ. ಹಿಂದುತ್ವದ ಶಕ್ತಿಗಳು, ನಮ್ಮ ಗತ ಕಾಲವನ್ನು ವಿಜ್ಞಾನ ಮತ್ತು ವೈಜ್ಞಾನಿಕ ದೃಷ್ಟಿಕೋನದಿಂದ ಪರಿಶೀಲಿಸುವುದರ ಮೇಲೆಯೇ ತೀವ್ರ ಧಾಳಿಯನ್ನು ಕೇಂದ್ರೀಕರಿಸಿವೆ. ಪ್ರಾಚೀನ ಕಾಲವನ್ನು ಅತಿಯಾಗಿ ವಿಜೃಂಭಿಸುತ್ತಿವೆ. ಪ್ರಾಚೀನ ಕಾಲದಲ್ಲೇ, ವಂಶವಾಹಿನಿ – ತಳಿಗಳು, ಅಣ್ವಸ್ತ್ರಗಳು, ಅಂತರ್ ಗ್ರಹಗಳ ಪ್ರಯಾಣ ಇತ್ಯಾದಿಗಳ ಬಗ್ಗೆ ಮಂತ್ರಿಗಳು, ಪ್ರಧಾನ ಮಂತ್ರಿಗಳೇ ಇದ್ದುವೆಂದು ಪ್ರತಿಪಾದಿಸುತ್ತಾರೆ. ಇವೆಲ್ಲಾ ಹುಸಿ ರಾಷ್ಟ್ರೀಯತೆ, ಗತಕಾಲದ ಹಿಂದೂ ವೈಭವೀಕರಣಗಳು ಕೃತಕ ಸೃಷ್ಠಿಗಳು, ಈ ವೈಭವವನ್ನು ಮುಸ್ಲಿಂರು ಧ್ವಂಸಗೊಳಿಸಿದ್ದಾರೆಂದು ಅಪಪ್ರಚಾರಿಸಲು ಬೆಳಸುತ್ತಿದ್ದಾರೆ.

ಉದ್ಘಾಟಿಸಿದ ಕಾಂ. ಎಂ.ಎ. ಬೇಬಿ

"ವಿಜ್ಞಾನ ಮತ್ತು ತಂತ್ರಜ್ಞಾನಗಳು ಅಗಾಧ ಸಾಧನೆಯನ್ನು ಮಾಡಿವೆ ನಿಜ. ಆದರೆ ಜನತೆಗೆ ಸಹಾಯವಾಹಿತೇ? ಬದಲಾಗಿ ಕೆಲವರದ್ದೇ ಖಜಾನೆ ತುಂಬಿಸಲು ಸಹಾಯವಾಗಿದೆ. ಕೃತಕ ಬುದ್ಧಿಮತ್ತೆಯಂತಹ ತಂತ್ರಜ್ಞಾನದ ಮುನ್ನಡೆ. ಅಪಾರ ಕಾರ್ಮಿಕರನ್ನು, ಶ್ರಮಶಕ್ತಿಯನ್ನು ನಿರುದ್ಯೋಗಿಗಳನ್ನಾಗಿಸಿರುವುದೂ ವಾಸ್ತವ. ನಿಸರ್ಗ ಮತ್ತು ಮಾನವ ಸಮುದಾಯಗಳೊಂದಿಗೆ ವಿಜ್ಞಾನ – ತಂತ್ರಜ್ಞಾನದ ಬೆಳವಣಿಗೆ – ಕೊಡುಗೆಗಳು ಸಹಜೀವನದ ಜೊತೆಗೂಡಿಯೇ ಸಾಗಬೇಕು ಎಂಬುದು ಮಾರ್ಕ್ಸ್‌ವಾದಿ ದೃಷ್ಟಿಕೋನ" ಎಂದು ಸಮ್ಮಿಲನವನ್ನು ಉದ್ಘಾಟಿಸಿದ ಸಿಪಿಐ(ಎಂ) ಪೊಲಿಟ್ ಬ್ಯೂರೋ ಸದಸ್ಯರಾದ ಕಾಂ. ಎಂ.ಎ. ಬೇಬಿ ನುಡಿದರು. ಕಾಂ. ಸೀತರಾಮ್ ಯೆಚೂರಿಯವರ ಗೈರಿನಿಂದಾಗಿ ಅವರು ಉದ್ಘಾಟನೆ ನೆರವೇರಿಸಿದರು.

"ಇಂತಹ ಅಭಿವೃದ್ಧಿ ಹಾಗೂ ಬೆಳವಣಿಗೆಗಳ ಫಲ ಎಲ್ಲರಿಗೂ ದಕ್ಕಬೇಕು. ಇದು ಸಾಧ್ಯವಾಗುವುದು ಸಮಾಜವಾದಿ ಸಮಾಜದಲ್ಲಿ ಮಾತ್ರವೇ: ಇಲ್ಲವಾದಲ್ಲಿ ಬಂಡವಾಳವು ತನ್ನ ಗರಿಷ್ಠ ಲಾಭಕ್ಕಾಗಿ ಮಾನವ ಸಮುದಾಯವನ್ನು ಮತ್ತಷ್ಟೂ ಹೆಚ್ಚು ಶೋಷಣೆ ಮಾಡಲು ಬಳಸುತ್ತದೆ" ಎಂದರು.

"ಸಮಾಜವಾದಿ ಹಾದಿಯ ಬಗ್ಗೆಗೂ ಎದ್ದಿರುವ ಪ್ರಶ್ನೆಗಳನ್ನು ನಿಕಕ್ಷಕ್ಕೆ ಒಳಪಡಿಸಿ ಪರಿಹಾರ ರೂಪಿಸಲು ಮಾರ್ಕ್ಸ್‌ವಾದಿಗಳು ಮುಂದಾಗಬೇಕಿದೆ. ಅತ್ಯಂತ ಹಿಂದುಳಿದ ದೇಶವಾಗಿದ್ದ ಸೋವಿಯತ್ ಯೂನಿಯನ್ ಭಾರೀ ಮುನ್ನಡೆ ಸಾಧಿಸಿದ ದೇಶವಾಯಿತು. ಆದರೆ ಮತ್ತೇಕೆ ಕುಸಿಯಿತು? ಜೀವಶಾಸ್ತ್ರವನ್ನು ನಿಯಂತ್ರಿಸುವ ಮತ್ತು ತಳಿಶಾಸ್ತ್ರದ ಮೇಲೆ ಧಾಳಿ ಮಾಡಲು ಲೈಸೆಂಕೋಗೆ ಸೋವಿಯತ್ ವಿಜ್ಞಾನ ಹೇಗೆ ಅವಕಾಶ ಕೊಟ್ಟಿತು? ಮಾನವ ಮತ್ತು ಪ್ರಕೃತಿಯ ಸಹಜೀವನವು ಜೈವಿಕ, ಪರಿಸರಾತ್ಮಕ ಪ್ರಶ್ನೆಗಳೊಂದಿಗೆ ವೈಜ್ಞಾನಿಕ ಪರಿಹಾರ ಬಯಸುತ್ತದೆ" ಎಂದು ಕಾಂ. ಬೇಬಿ ಹೇಳಿದರು. ಈ ಸಮ್ಮಿಲನ ಮಾರ್ಕ್ಸ್‌ವಾದದ ದೃಷ್ಟಿಕೋನದ ಮುನ್ನಡೆಗೆ ಸಹಾಯಕವಾಗಲಿ ಎಂದೂ ಆಶಿಸಿದರು.

ಬಿಡುವಿರದ ಕಾರ್ಯ ಕಲಾಪಗಳು: ವೈವಿಧ್ಯತೆ ವಿಷಯಗಳು

ಈ ಸಮ್ಮಿಲನವು ಸುಮಾರು 13 ವಿವಿಧ ವಿಷಯಗಳ ಮೇಲೆ ವಿಚಾರ ಮಂಡನೆ ಹಾಗೂ ಚರ್ಚೆಗಳನ್ನು ಒಳಗೊಂಡಿತ್ತು. ಬಲಪಂಥೀಯ ಸಿದ್ಧಾಂತಗಳಿಗೆ ವಿಜ್ಞಾನ – ಪ್ರಶ್ನಿಸುವ ಮನೋಭಾವ ಬೆದರಿಕೆಯಾಗಿ ಕಾಣುತ್ತದೆ?" ಜೆನೆಟಿಕ್ಸ್ – (ವಂಶವಾಹಿಸಿ) ಕ್ಷೇತ್ರದಲ್ಲಿನ ಮುನ್ನಡೆ, ಪರಿಣಾಮಗಳು, ಡಿಜಿಟಲ್ ಏಕಸ್ವಾಮ್ಯ, ಕೃತಕ ಬುದ್ಧಿಮತ್ತೆ ಮತ್ತು ಭವಿಷ್ಯದ ಕೆಲಸ. ಆಧಾರ್ – ಬಂಡವಾಳಶಾಹಿ ಮತ್ತು ನಿಗಾವಣಾ ಪ್ರಭುತ್ವ, ಮಾಧ್ಯಮ ಮತ್ತು ಸಂಪರ್ಕ ತಂತ್ರಜ್ಞಾನ – ಅಂತರ್ಜಾಲದ ಯುಗದಲ್ಲಿ?, ಮುಕ್ತ ವಿಜ್ಞಾನ – ಜ್ಞಾನದ ಏಕಸ್ವಾಮ್ಯದ ಎದುರಿನಲ್ಲಿ, ಜ್ಞಾನದ ಏಕಸ್ವಾಮ್ಯ – ಬಂಡವಾಳದ ಅಧಿಪತ್ಯ, ಸಾಫ್ಟ್‌ವೇರ್ ಮುಕ್ತತೆ – ಸಿದ್ಧಾಂತ, ವಿಜ್ಞಾನ – ವಿಚಾರವಾದದ ಮೇಲೆ ಆಕ್ರಮಣ, ವಿಜ್ಞಾನ ಸಮುದಾಯದ ಪಾತ್ರ, ಕಾರ್ಪೋರೇಟ್ ಕೃಷಿ ನಿಯಂತ್ರಣ ಮತ್ತು ಕೃಷಿಕ ಸಮುದಾಯಗಳ ಚಳವಳಿಗಳು, ಇಂಧನ ನೀತಿ, ಜನರ ಮೇಲೆ ಪರಿಣಾಮ ಇತ್ಯಾದಿ ಪ್ರಮುಖ ವಿಷಯಗಳ ಸುತ್ತ ಚರ್ಚೆ ನಡೆದವು. ಅಲ್ಲದೇ ದೇವಿಪ್ರಸಾದ್ ಚಟ್ಟೋಪಾಧ್ಯಾಯರ ಸ್ಮರಣೆಯ ವಿಶೇಷ ಉಪನ್ಯಾಸ ನಡೆಯಿತು. ಕಾಂ. ಪ್ರಕಾಶ್‌ಕಾರಟ್, ಪ್ರೊ. ರಾಮಕೃಷ್ಣ ಭಟ್ಟಾಚಾರ್ಯ ಭಾಗವಹಿಸಿದ್ದರು. ವಿವಿಧ ಉಪನ್ಯಾಸಗಳಲ್ಲಿ ಪ್ರಭೀರ್ ಪುರಕಾಯಸ್ತಾ, ಡಾ। ಟಿ. ಜಯರಾಮನ್, ದಿನೇಶ್ ಅಬ್ರಾಲ್, ವಿಜೂಕೃಷ್ಣನ್, ರಾಯಸಿಂಗಮ್ – ಅಮೇರಿಕಾ, ಪ್ರೊ. ರವಿಕುಮಾರ್, ರವೀಂದ್ರನಾಥ್, ವಿಜಯ್ ಪ್ರಸಾದ್, ಪಿ. ಸಾಯಿನಾಥ್, ಡಾ. ಅಮಿತ್‌ಸೇನಾ ಗುಪ್ತಾ, ಅಮಿತಾ ರಾಮ್‌ಗೋಪಾಲ್, ಸಂಸದ ಎಂ.ಬಿ. ರಾಜೇಶ್, ಪ್ರೊ. ರಾಮಸ್ವಾಮಿ, ಡಾ. ಪ್ರವೀಣ್‌ಲಾಲ್, ಡಾ. ವಿ.ಕೆ. ರಾಮಚಂದ್ರನ್ ಮುಂತಾದವರು ವಿವಿಧ ವಿಷಯಗಳ ಕುರಿತು ಉಪನ್ಯಾಸ ನೀಡಿದರು.

ಈ ಸಮ್ಮಿಲನದಲ್ಲಿ ಎರಡೂ ದಿನಗಳೂ ಸುಮಾರು 800 ಕ್ಕೂ ಅಧಿಕ ಪ್ರತಿನಿಧಿಗಳು ಭಾಗವಹಿಸಿದ್ದರು. ಇದೊಂದು ಅತ್ಯಂತ ಚಿಂತನಾರ್ಹ, ಸ್ಮರಣೀಯ ಸಮ್ಮಿಲನವಾಗಿತ್ತು.



ರೈತರು ಮತ್ತು ಕಾರ್ಮಿಕರಿಗೆ ನೀಡಿದ ಆಶ್ವಾಸನೆಗಳು ಮಾಡಿದ ವಿಶ್ವಾಸಘಾತ

ಅಧಿಕಾರದಲ್ಲಿ ನಾಲ್ಕು ವರ್ಷಗಳನ್ನು ಪೂರೈಸಿರುವ ನರೇಂದ್ರ ಮೋದಿ ನೇತೃತ್ವದ ಬಿಜೆಪಿ 2014ರಲ್ಲಿ ಅಧಿಕಾರಕ್ಕೆ ಬರುವ ಮೊದಲು ಚುನಾವಣಾ ಪ್ರಚಾರದಲ್ಲಿ, ತನ್ನ ಚುನಾವಣಾ ಪ್ರಣಾಳಿಕೆಯಲ್ಲಿ ಮತ್ತು ಅಧಿಕಾರ ವಹಿಸಿಕೊಂಡ ಮೇಲೂ ಆಶ್ವಾಸನೆಗಳ ಮೇಲೆ ಆಶ್ವಾಸನೆಗಳನ್ನು ನೀಡಿತ್ತು–ರೈತರಿಗೆ ಮತ್ತು ಕಾರ್ಮಿಕರಿಗೆ, ವಿವಿಧ ಜನವಿಭಾಗಗಳಿಗೆ–ಮಹಿಳೆಯರಿಗೆ, ದಲಿತರಿಗೆ ಮತ್ತು ಆದಿವಾಸಿಗಳಿಗೆ. ಆದರೆ ಯಾವವೂ ಈಡೇರಿಲ್ಲ. ಸಿಪಿಐ(ಎಂ) ಕೇಂದ್ರ ಸಮಿತಿ ಪ್ರಕಟಿಸಿರುವ ನಾಲ್ಕು ಕಿರುಪುಸ್ತಕಗಳಲ್ಲಿ ಮೂರನೆಯದು ವಿವಿಧ ಜನವಿಭಾಗಗಳಿಗೆ ನೀಡಿದ ಆಶ್ವಾಸನೆಗಳ ಮತ್ತು ನಾಲ್ಕು ವರ್ಷಗಳ ನಂತರ ಅವುಗಳ ಸ್ಥಿತಿ–ಗತಿಗಳ ಒಂದು ಚಿತ್ರವನ್ನು ನೀಡಿದೆ.

ಅದರಲ್ಲಿನ ಎರಡು ದೊಡ್ಡ ಜನವಿಭಾಗಗಳಾದ ರೈತರು ಮತ್ತು ಕಾರ್ಮಿಕರಿಗೆ ನೀಡಿದ ಆಶ್ವಾಸನೆಗಳ, ಮಾಡಿದ ವಿಶ್ವಾಸಘಾತಗಳ ಚಿತ್ರ ಈ ಸಂಚಿಕೆಯಲ್ಲಿದೆ.

ಕಳೆದ ನಾಲ್ಕು ವರ್ಷಗಳ ನರೇಂದ್ರ ಮೋದಿ ನೇತೃತ್ವದ ಸರಕಾರದ ಕೃಷಿಕ್ಷೇತ್ರದ ಎಲ್ಲ ಕ್ರಮಗಳ ಮೂಲ ಗುರಿ ಕಾರ್ಪೊರೇಟ್ ವಲಯದ ಲಾಭಕೋರತನಕ್ಕೆ ನೆರವಾಗುವುದು– ಇದಕ್ಕಾಗಿ ರೈತಾಪಿ ಜನಗಳ ಹಿತಗಳನ್ನು ಬಲಿಗೊಟ್ಟರೂ ಸರಿಯೇ.

ಕಾರ್ಮಿಕರಂಗದಲ್ಲೂ ಕಳೆದ ನಾಲ್ಕು ವರ್ಷಗಳು 'ಸುಗಮ ವ್ಯಾಪಾರ–ವ್ಯವಹಾರಕ್ಕಾಗಿ' ದೇಶದ ಕಾರ್ಮಿಕ ವರ್ಗದ ಮೇಲೆ ಮಾಡಿದ ಅಮಾನುಷ ಪ್ರಹಾರಗಳ ವರ್ಷಗಳು. ಈ ರಂಗದಲ್ಲಿ ಮೋದಿ ಸರಕಾರದ ಕ್ರಮಗಳಲ್ಲಿನ ಒಂದು ಸಾಮಾನ್ಯ ಎಳೆಯೆಂದರೆ ದೇಶೀ –ವಿದೇಶೀ ಬಂಡವಾಳಕ್ಕೆ ಶ್ರಮಶಕ್ತಿಯ ಶೋಷಣೆಯನ್ನು ಸುಲಭಗೊಳಿಸುವುದು.

ರೈತರು ಮತ್ತು ಕಾರ್ಮಿಕರು ಈ ದಾಳಿಗಳ ಎದುರು ಕೈಚೆಲ್ಲಿ ಕೂತಿಲ್ಲ. ಇತ್ತೀಚಿನ ದಿನಗಳಲ್ಲಿ ದೇಶಾದ್ಯಂತ ಹಲವು ರಾಜ್ಯಗಳಲ್ಲಿ ರೈತ ಹೋರಾಟಗಳು ಭುಗಿಲೆದ್ದಿವೆ. ಅಖಿಲ ಭಾರತ ಮಟ್ಟದಲ್ಲಿ ಒಂದು ಜಂಟಿ ಕಿಸಾನ್ ಸಂಘರ್ಷ ವೇದಿಕೆ ರೂಪುಗೊಂಡಿದೆ. ಕಳೆದ ವರ್ಷ ಇದರ ನೇತೃತ್ವದಲ್ಲಿ ಎರಡು ದಿನಗಳ ಕಿಸಾನ್ ಮುಕ್ತಿ ಸಂಸದ್ ನಡೆದಿದೆ. ರೈತರ ಸಾಲಮನ್ನಾ ಮತ್ತು ರೈತರು ಬೆಳೆದ ಬೆಳೆಗಳಿಗೆ ಪ್ರತಿಫಲದಾಯಕ ಬೆಲೆ ಕುರಿತಂತೆ ಎರಡು ಮಸೂದೆಗಳನ್ನು ರೂಪಿಸಲಾಗಿದೆ.

ಕಾರ್ಮಿಕ ರಂಗದಲ್ಲೂ ಎರಡು ಅಖಿಲ ಭಾರತ ಸಾರ್ವತ್ರಿಕ ಮುಷ್ಕರಗಳು ನಡೆದಿದ್ದು, ಹಿಂದೆಂದಿಗಿಂತಲೂ ಹೆಚ್ಚಿನ ಕಾರ್ಮಿಕರು ಇದರಲ್ಲಿ ಭಾಗವಹಿಸಿದ್ದಾರೆ. 2017ರಲ್ಲಿ ಮೂರು ದಿನಗಳ ಅಭೂತಪೂರ್ವ 'ಮಹಾಪಡಾವ್'ನಲ್ಲಿ ಕಾರ್ಮಿಕ ಸಂಘಟನೆಗಳಲ್ಲಿ ಬಹುಪಾಲು ಐಕ್ಯತೆಯಿಂದ ಭಾಗವಹಿಸಿ ಸರಕಾರಕ್ಕೆ ಎಚ್ಚರಿಕೆ ನೀಡಿವೆ.

ಈ ಹೋರಾಟಗಳ ಮುಂದಿನ ಘಟ್ಟವಾಗಿ ಸಪ್ಟಂಬರ್ 5ರಂದು ಬೃಹತ್ ಮಜ್ದೂರ್–ಕಿಸಾನ್ ಸಂಘರ್ಷ ರ್‍ಯಾಲಿಗೆ ಸಿದ್ಧತೆಗಳು ನಡೆಯುತ್ತಿವೆ.



ರೈತರಿಗೆ 3 ಲಕ್ಷ ಕೋಟಿ ರೂ. ನಷ್ಟ ಉಂಟು ಮಾಡಿದ ರೈತ–ವಿರೋಧಿ ಸರಕಾರ

ತಮ್ಮ ಶ್ರಮಕ್ಕೆ ಸೂಕ್ತ ಪ್ರತಿಫಲ ಸಿಗದೆ, ಸಾಲದ ಹೊರೆಯಿಂದ ಆತ್ಮಹತ್ಯೆಗಳಿಗೆ ಶರಣಾಗುತ್ತಿರುವ ದೇಶದ ಕೋಟ್ಯಂತರ ರೈತಾಪಿ ಜನಗಳಿಗೆ ಬಿಜೆಪಿ ಹಲವಾರು ಆಶ್ವಾಸನೆಗಳನ್ನು ಕೊಟ್ಟಿತ್ತು. ಅಚ್ಛೇ ದಿನ್‌ಗಳು ಬರಲಿದ್ದು ರೈತರ ಆತ್ಮಹತ್ಯೆಗಳು ನಿಲ್ಲುತ್ತವೆ, ಕೃಷಿ ಬೆಳವಣಿಗೆಗೆ, ರೈತರ ಆದಾಯಗಳನ್ನು ಹೆಚ್ಚಿಸಲು ಮತ್ತು ಗ್ರಾಮೀಣ ಅಭಿವೃದ್ಧಿಗೆ ಅತ್ಯುನ್ನತ ಆದ್ಯತೆ ನೀಡಲಾಗುತ್ತದೆ ಎಂದು ಬಿಜೆಪಿ ಪ್ರಣಾಳಿಕೆ ಸಾರಿತ್ತು.

ಕೆಳಮುಖವಾದ ಕೃಷಿ ಬೆಳವಣಿಗೆ

* ಈ ಸರಕಾರ ಬರುವ ಮೊದಲು, 2013–14ರಲ್ಲಿ ಕೃಷಿ ವಲಯ 5.6% ಬೆಳವಣಿಗೆ ದಾಖಲಿಸಿತ್ತು.

ಈ ಸರಕಾರದ ಮೊದಲ ವರ್ಷದ ಕೊನೆಯಲ್ಲಿ, ಅಂದರೆ 2014–15ರಲ್ಲಿ ದಾಖಲಿಸಿದ ಬೆಳವಣಿಗೆ ನಕಾರಾತ್ಮವಾಗಿತ್ತು, ಅಂದರೆ (–)0.2%

2015–16ರಲ್ಲಿ ತುಸು ಏರಿಕೆ ದಾಖಲಿಸಿತು, ಅಂದರೆ 0.7%

2016–17ರಲ್ಲಿ ಅದು 4.9% ಕ್ಕೇರಿತ್ತು. ಆದರೂ ಯುಪಿಎ ಸರಕಾರದ ಕೊನೆಯಲ್ಲಿ ದಾಖಲಿಸಿದ ದರದ ಬಳಿಯೂ ಬರಲಿಲ್ಲ.

2017–18ರಲ್ಲಿ ಅದು 2.1%ಕ್ಕೆ ಇಳಿಯಲಿದೆ ಎನ್ನಲಾಗುತ್ತಿದೆ.

2022ರ ವೇಳೆಗೆ ದುಪ್ಪಟ್ಟು ಆದಾಯ–ಬರೀ ಕನಸು

ರೈತರ ಆದಾಯಗಳು 2022ರ ವೇಳೆಗೆ ದ್ವಿಗುಣಗೊಳ್ಳುತ್ತವೆ ಎಂದು ಬಿಜೆಪಿ ಅಧಿಕಾರಕ್ಕೆ ಬಂದ ಮೇಲೆ ಸಾರಲಾಯಿತು.

ಆರ್ಥಿಕ ತಜ್ಞರ ಪ್ರಕಾರ 2017–22ರ ಐದು ವರ್ಷಗಳಲ್ಲಿ ಕೃಷಿ ಆದಾಯಗಳು ದ್ವಿಗುಣಗೊಳ್ಳಬೇಕಾದರೆ ಪ್ರತಿವರ್ಷ ಸರಾಸರಿ 14.86% ಕೃಷಿ ಬೆಳವಣಿಗೆ ದಾಖಲಿಸಬೇಕು.

ನೀತಿ ಆಯೋಗದ ಲೆಕ್ಕಾಚಾರದ ಪ್ರಕಾರ ಸರಾಸರಿ 10.4% ಬೆಳವಣಿಗೆ ದಾಖಲಿಸಬೇಕು.

ಆದರೆ 2017–18ರಲ್ಲಿ ದಾಖಲಿಸಿದ್ದು, ಮೇಲೆ ಹೇಳಿದಂತೆ 2.1% ಮಾತ್ರ. ಅಂದರೆ ಈ 10.4% ವೂ ಬಹಳ ದೂರದ ಕನಸು!

ರೈತರ ಆತ್ಮಹತ್ಯೆಗಳು ಇಳಿದಿಲ್ಲ

ಕಳೆದ ಸಂಚಿಕೆಯಲ್ಲಿ (ಪುಟ 12 ನೋಡಿ) ಹೇಳಿರುವಂತೆ ರಾಷ್ಟ್ರೀಯ ಅಪರಾಧ ದಾಖಲೆಗಳ ಕಚೇರಿ (ಎನ್‌ಸಿಆರ್‌ಬಿ)ಯಲ್ಲಿ ಲಭ್ಯವಾಗಿರುವ ರೈತರ ಆತ್ಮಹತ್ಯೆಗಳ ತೀರಾ ಇತ್ತೀಚಿನ ಅಂಕಿ–ಅಂಶಗಳೆಂದರೆ 2015ರದ್ದು. 2016 ಮತ್ತು 2017ರ ಅಂಕಿ–ಅಂಶಗಳನ್ನು ಅದು ಇನ್ನೂ ಬಿಡುಗಡೆ ಮಾಡಿಲ್ಲ. ಕೆಲವು ರಾಜ್ಯಗಳ ಪ್ರಕಟಿತ ಮಾಹಿತಿಗಳು ಹಲವು ಪ್ರಶ್ನೆಗಳನ್ನು ಎಬ್ಬಿಸಿದ್ದು ಇದಕ್ಕೆ ಕಾರಣವಂತೆ.

ಉದಾ: ಪಂಜಾಬಿನಲ್ಲಿ ಎನ್‌ಸಿಆರ್‌ಬಿ ಮಾಹಿತಿ ಪ್ರಕಾರ ಇದು 459, ಆದರೆ ಪಂಜಾಬ್ ವಿಶ್ವವಿದ್ಯಾಲಯಗಳು ನಡೆಸಿದ ಮನೆ–ಮನೆ ಸರ್ವೆ ಪ್ರಕಾರ ಕಳೆದ ಮೂರುವ ರ್ಷಗಳ ಸರಾಸರಿ ಆತ್ಮಹತ್ಯೆಗಳ ಸಂಖ್ಯೆ 1000 ದಾಟಿದೆ. ಬಂಗಾಲ ಮತ್ತು ಬಿಹಾರದಲ್ಲಿ ರೈತರ ಆಶತ್ಮಹತ್ಯೆಗಳೇ ನಡೆದಿಲ್ಲ ಎಂದು ದಾಖಲಾಗಿದೆ. ಆದರೆ ಇದನ್ನು ಯಾರೂ ನಂಬುತ್ತಿಲ್ಲ.

ಮೋದಿ ಸರಕಾರದ ಮೊದಲ ಮೂರು ವರ್ಷಗಳಲ್ಲಿ ಸುಮಾರು 36 ಸಾವಿರ ರೈತರ ಆತ್ಮಹತ್ಯೆಗಳು ನಡೆದಿವೆ ಎಂದು ಅಂದಾಜು ಮಾಡಲಾಗಿದೆ. ಇದರಲ್ಲಿ ಮೂರನೇ ಒಂದರಷ್ಟು, ಅಂದರೆ 11956 ಆತ್ಮಹತ್ಯೆಗಳು ಬಿಜೆಪಿ ಆಳ್ವಿಕೆಯ ಶ್ರೀಮಂತ ರಾಜ್ಯಗಳಲ್ಲಿ ಒಂದೆನಿಸಿರುವ ಮಹಾರಾಷ್ಟ್ರದಲ್ಲಿ ನಡೆದಿವೆ ಎನ್ನಲಾಗುತ್ತಿದೆ.



ಹುಸಿಯಾದ ಒಂದೂವರೆ ಪಟ್ಟು ಬೆಂಬಲ ಬೆಲೆಯ ಆಶ್ವಾಸನೆ

ರೈತರ ಬೆಳೆಗಳಿಗೆ ಉತ್ಪಾದನಾ ಖರ್ಚಿನ ಒಂದೂವರೆ ಪಟ್ಟು ಕನಿಷ್ಟ ಬೆಂಬಲ ಬೆಲೆ ಸಿಗುವಂತೆ ಮಾಡಬೇಕು ಎಂಬಸ್ವಾಮಿನಾಥನ್ ಆಯೋಗದ ಶಿಫಾರಸನ್ನು ಜಾರಿ ಮಾಡುವುದಾಗಿ ನರೇಂದ್ರ ಮೋದಿಯವರು ತಮ್ಮ ಚುನಾವಣಾ ಪ್ರಚಾರದಲ್ಲಿ ಅದೆಷ್ಟು ಬಾರಿ ಪುನರುಚ್ಚರಿಸಿದರೋ!

ಆದರೆ ಅಧಿಕಾರಕ್ಕೆ ಬಂದ ಒಂದೇ ವರ್ಷದೊಳಗೆ, ಫೆಬ್ರುವರಿ 20, 2015ರಂದು ಸುಪ್ರಿಂ ಕೋರ್ಟ್ ಸಮ್ಮುಖ ಸಲ್ಲಿಸಿದ ಅಫಿಡವಿಟ್‌ನಲ್ಲಿ ಇದು ಸಾಧ್ಯವಾಗದ ಮಾತು ಎಂದು ಮೋದಿ ಸರಕಾರ ಹೇಳಿತು.

ಈ ಬಗ್ಗೆ ವ್ಯಾಪಕ ಪ್ರತಿಕ್ರಿಯೆಯ ನಂತರ, ಇತ್ತೀಚೆಗೆ, ಈಗಾಗಲೇ ರೈತರಿಗೆ ಅವರ ಉತ್ಪಾದನಾ ಖರ್ಚಿನ ಒಂದೂವರೆ ಪಟ್ಟು ಕನಿಷ್ಟ ಬೆಂಬಲ ಬೆಲೆ ಲಭ್ಯಗೊಳಿಸಲಾಗುತ್ತಿದೆ ಎಂದು ಇದೇ ಸರಕಾರ

ಪುಟ 10 ನೋಡಿ

'ಸುಗಮ ವ್ಯಾಪಾರ–ವ್ಯವಹಾರ'ಗಳಿಗಾಗಿ ಕಾರ್ಮಿಕರ ಮೇಲೆ ಪ್ರಹಾರಗಳ ವರ್ಷಗಳು

ಬಿಜೆಪಿಯು ಚುನಾವಣಾ ಪ್ರಣಾಳಿಕೆ ಕಾರ್ಮಿಕ ವರ್ಗಕ್ಕೆ ಯಾವುದೇ ನಿರ್ದಿಷ್ಟ 'ಆಶ್ವಾಸನೆ' ನೀಡಿರಲಿಲ್ಲ, ಎಂಬುದೇನೋ ಬಹುಮಟ್ಟಿಗೆ ನಿಜ. ಅದರ ಚುನಾವಣಾ ಪ್ರಣಾಳಿಕೆಯಲ್ಲಿ 'ಶ್ರಮ ನಮ್ಮ ಬೆಳವಣಿಗೆಯ ಸ್ತಂಭ' ಎಂಬ ಪದದ ಅಡಿಯಲ್ಲಿ ಇದ್ದುದು 'ಕಾರ್ಮಿಕ ಸುಧಾರಣೆಗಳು' ಎಂಬ ಪದಗಳು, ಅದೂ ಯಾರ ಪರವಾದ ಸುಧಾರಣೆಗಳು ಎಂಬ ಬಗ್ಗೆಯೂ ಬಹಳಷ್ಟು ಸಂದೇಹಗಳೇನೂ ಇರಲಿಲ್ಲ. ಈ 'ಸುಧಾರಣೆ'ಗಳು ಹೂಡಿಕೆದಾರರಿಗೆ ಸಹಾಯಕವಾಗುವ ಒಂದು ಪರಿಸರವನ್ನು ಒದಗಿಸಲಿಕ್ಕಾಗಿ' ಎಂದು ಪ್ರಣಾಳಿಕೆ ಹೇಳಿತ್ತು. ಅವರ ಮಟ್ಟಿಗೆ ಉದ್ಯಮಿಗಳು ಮತ್ತು ಕಾರ್ಮಿಕರು ಒಂದು ದೊಡ್ಡ ಕುಟುಂಬ, ಉದ್ಯಮಿಗಳಿಗೆ ನೆರವು ಕೊಟ್ಟರೆ ಅದು ಕಾರ್ಮಿಕರಿಗೂ ಕೊಟ್ಟಂತೆಯೇ ಎಂದು ಭಾವಿಸಬೇಕು! ಆದ್ದರಿಂದ ಬಹುಶಃ ಕಾರ್ಮಿಕರಿಗೆ ಆಶ್ವಾಸನೆಗಳೇ ಇಲ್ಲದಿರುವಾಗ ವಿಶ್ವಾಸಘಾತ ಎಲ್ಲಿದೆ ಎಂದು ಯಾರಾದರೂ ಹೇಳಿದರೆ ಅದನ್ನು ಒಪ್ಪಿಕೊಳ್ಳಬಹುದು. ಆದರೂ ಅಂಗನವಾಡಿ ನೌಕರರ 'ಗೌರವ ಧನ' ಹೆಚ್ಚಿಸುವ ಆಶ್ವಾಸನೆ, ವರ್ಷಕ್ಕೆ ರೆಡು ಕೋಟಿ ಉದ್ಯೋಗಾವಕಾಶಗಳ ನಿರ್ಮಾಣದ ಆಶ್ವಾಸನೆ ಇತ್ಯಾದಿ ಇದ್ದವು. ಅವನ್ನೆಲ್ಲವನ್ನೂ ಮರೆತು ಬಿಡಲಾಗಿದೆ.

ಕಳೆದ ನಾಲ್ಕು ವರ್ಷಗಳು 'ಸುಗಮ ವ್ಯಾಪಾರ–ವ್ಯವಹಾರಕ್ಕಾಗಿ' ದೇಶದ ಕಾರ್ಮಿಕ ವರ್ಗದ ಮೇಲೆ ಅಮಾನುಷ ಪ್ರಹಾರಗಳ ವರ್ಷಗಳು ಎಂದು ಮಾತ್ರ ಖಡಾಖಂಡಿತವಾಗಿ ಹೇಳಬಹದು

ಈ ಪ್ರಹಾರಗಳ ಪರಿಣಾಮವೆಂದರೆ



* ನಿಜ ಸಂಬಳಗಳು ಇಳಿಯುತ್ತಿವೆ.
* ನಿಯಮಿತ ಉದ್ಯೋಗಗಳನ್ನು ಸಾರ್ವಜನಿಕ ವಲಯವೂ ಸೇರಿದಂತೆ ಎಲ್ಲೆಡೆಗಳಲ್ಲಿ ಹೊರಗುತ್ತಿಗೆಗಳಾಗಿ ಬದಲಿಸಲಾಗುತ್ತಿದೆ,
* ಕಾರ್ಮಿಕ ಕಾನೂನುಗಳನ್ನು ಕಳಚಿ ಹಾಕಲಾಗುತ್ತಿದೆ.
* ಸಾರ್ವಜನಿಕ ವಲಯವನ್ನು ಖಾಸಗಿ ತಿಮಿಂಗಿಲಗಳಿಗೆ ವಹಿಸಿ ಕೊಡಲಾಗುತ್ತಿದೆ,
* ಮಹಿಳೆಯರ ಉದ್ಯೋಗದ ಪ್ರಮಾಣ ಅತ್ಯಂತ ಕೆಳಮಟ್ಟಕ್ಕೆ ಇಳಿದಿದೆ **ಮತ್ತು**

ರಾಷ್ಟ್ರೀಯ ಅಜೆಂಡಾದಲ್ಲಿ ಕಾರ್ಮಿಕರನ್ನು ಅಂಚಿಗೆ ತಳ್ಳಲಾಗಿದೆ.

ಕಳೆದ ನಾಲ್ಕು ವರ್ಷಗಳಲ್ಲಿ ಮೋದಿ ಸರಕಾರದ ಕ್ರಮಗಳಲ್ಲಿನ ಒಂದು ಸಾಮಾನ್ಯ ಎಳೆಯೆಂದರೆ ದೇಶೀ –ವಿದೇಶೀ ಬಂಡವಾಳಕ್ಕೆ ಶ್ರಮಶಕ್ತಿಯ ಶೋಷಣೆಯನ್ನು ಸುಲಭಗೊಳಿಸುವುದು.

ಮೋದಿ ಸರಕಾರದ 'ಹೂಡಿಕೆದಾರ–ಸ್ನೇಹಿ' 'ಸಾಧನೆ'ಗಳ, ಅದಕ್ಕಾಗಿ ದೇಶದ ಕಾರ್ಮಿಕ ವರ್ಗದ ಮೇಲೆ ನಡೆಸಿರುವ ಪ್ರಹಾರಗಳ ಒಂದು ಪಟ್ಟಿ ನೋಡಿ:

1. **ಕೆಳಮಟ್ಟದ ಸಂಬಳಗಳು:**

   ದೇಶದ ಜಿಡಿಪಿ ಬೆಳವಣಿಗೆ ದರ ಏರುತ್ತಿದೆ ಎಂದು ಸದಾ ಬೆನ್ನು ತಟ್ಟಿಕೊಳ್ಳುತ್ತಿರುವ ಸರಕಾರ, ಸ್ವತಃ 7ನೇ ವೇತನ ಆಯೋಗ ಸುಪ್ರಿಂ ಕೋರ್ಟ್ ಈ ಹಿಂದೆ ನೀಡಿದ್ದ ಮಾರ್ಗದರ್ಶಕ ಸೂತ್ರಗಳ ಆಧಾರದಲ್ಲಿ ಶಿಫಾರಸು ಮಾಡಿರುವ 18000ರೂ. ಮಾಸಿಕ ಕನಿಷ್ಟವೇತನದ ಬೇಡಿಕೆಯನ್ನು ದೇಶದ ಕಾರ್ಮಿಕ ಸಂಘಟನೆಗಳು ಮುಂದಿಟ್ಟು, ಆ ಬಗ್ಗೆ ಹಲವು ಮನವಿಗಳನ್ನು, ಅದಕ್ಕೆ ಬೆಲೆ ಸಿಗದಿದ್ದಾಗ ಪ್ರತಿಭಟನೆಗಳನ್ನು ನಡೆಸಿದ್ದರೂ, ಎರಡು ಬೃಹತ್ ಅಖಿಲ ಭಾರತ ಸಾರ್ವತ್ರಿಕ ಮುಷ್ಕರಗಳಲ್ಲಿ ಕೋಟ್ಯಂತರ ಕಾರ್ಮಿಕರು ಭಾಗವಹಿಸಿದ್ದರೂ, ಏನೂ ಮಾಡದೆ ಮೌನವಾಗಿದೆ. ಬಹಳಷ್ಟು ರಾಜ್ಯಗಳಲ್ಲಿ ಕನಿಷ್ಟ ವೇತನ ಈಗಲೂ 6000–10000ರೂ. ನಡುವೆಯೇ ಉಳಿದಿದೆ.

2. **ಗುತ್ತಿಗೆಯೆಂಬ ಹೆಚ್ಚುತ್ತಿರುವ ಶೋಷಣೆ:** ನಿಯಮಿತ ಉದ್ಯೋಗಗಳನ್ನು ಕಡಿತಗೊಳಿಸಿ ಕಡಿಮೆ ವೇತನದ ಗುತ್ತಿಗೆ ಕೆಲಸಗಳನ್ನು ಹೆಚ್ಚಿಸುವ ಪ್ರಕ್ರಿಯೆಯಿಂದಾಗಿ

ಪುಟ 10 ನೋಡಿ

......ರೈತ-ವಿರೋಧಿ ಸರಕಾರ



ಪುಟ 9 ರಿಂದ

ಸಾರಿತು. ಅದಕ್ಕಾಗಿ ಅದು ಮಾಡಿದ ತಂತ್ರ ಎಂದರೆ ಉತ್ಪಾದನಾ ಖರ್ಚಿನ ಲೆಕ್ಕಾಚಾರವನ್ನೇ ಕೆಳಗಿಳಿಸಿದ್ದು! ಈ ಇಳಿಕೆ ಲೆಕ್ಕಾಚಾರ ಭತ್ತಕ್ಕೆ ಸಂಬಂಧಪಟ್ಟಂತೆ 32% ಇದ್ದರೆ. ಜೋಳಕ್ಕೆ 34% ಮತ್ತು ಸಜ್ಜೆಗೆ ಸಂಬಂಧಪಟ್ಟಂತೆ 39%.

2017–18ರ ಪ್ರಮುಖ ಮುಂಗಾರು ಬೆಳೆಗಳಲ್ಲಿ ಭಾರತದ ರೈತರಿಗೆ ಈ ಸರಕಾರ 3ಲಕ್ಷ ಕೋಟಿರೂ. ಗಳಷ್ಟು ನಷ್ಟ ಮಾಡಿದೆ ಎಂದು ಪರಿಣಿತರು ಲೆಕ್ಕ ಹಾಕಿದ್ದಾರೆ. ಇದು ರೈತರಿಗೆ ವಾಸ್ತವವಾಗಿ ಸಿಕ್ಕಿರುವ ಬೆಲೆಗಳು ಮತ್ತು ಮೋದಿ ತಮ್ಮ ಮಾತಿಗೆ ತಕ್ಕಂತೆ ನಡೆದುಕೊಂಡಿದ್ದರೆ ಸಿಗಬಹುದಾಗಿದ್ದ ಬೆಲೆಗಳಲ್ಲಿನ ಅಂತರ.

ಬಡ ಕೃಷಿ ಕೂಲಿಕಾರರನ್ನು ಮರೆತೇ ಬಿಟ್ಟಿರುವ ಸರಕಾರ

ದೇಶದಲ್ಲಿ ಕೃಷಿ ಕ್ಷೇತ್ರದಲ್ಲಿ ದುಡಿಯುತ್ತಿರುವವರಲ್ಲಿ 55% ದಷ್ಟು ಕೃಷಿಕೂಲಿಕಾರರು– ಇವರು ದೇಶದ ಅತೀ ಬಡ ವಿಭಾಗಗಳು, ಇವರಲ್ಲಿ ಬಹುಪಾಲು ದಲಿತರು ಮತ್ತು ಆದಿವಾಸಿಗಳು.

ಇವರ ಮುಖ್ಯ ಬೇಡಿಕೆಯಾದ ಭೂಮಿಯ ಬಗ್ಗೆಯಂತೂ ಬಿಜೆಪಿ ಚಕಾರ ಎತ್ತುವುದಿಲ್ಲ. ಕೂಲಿ ಹೆಚ್ಚಳದ ಬೇಡಿಕೆಯನ್ನೂ ಮೋದಿ ಸರಕಾರ ಸಂಪೂರ್ಣವಾಗಿ ಉಪೇಕ್ಷಿಸಿದೆ. ಏಕೆಂದರೆ ಕೃಷಿ ಕೂಲಿಕಾರರು ವಿಪರೀತ ಕೂಲಿ ಕೇಳುತ್ತಿದ್ದಾರೆ ಎಂಬ ಭೂಮಾಲಕರು ಸೃಷ್ಟಿಸಿರುವ ಹುಸಿ ಭಾವನೆಯನ್ನು ಈ ಸರಕಾರ ಸಾರಾಸಗಟು ಸ್ವೀಕರಿಸಿದೆ.

2014–15ರಿಂದ 2016–17ರ ನಡುವೆ ವಿವಿಧ ಕೃಷಿ ಕೆಲಸಗಳ ಕೂಲಿದರಗಳಲ್ಲಿ ಆಗಿರುವ ನಿಜವಾದ ಹೆಚ್ಚಳದ ಪ್ರಮಾಣವನ್ನು ನೋಡಿ:

* ಉಳುಮೆ	1.7%
* ಬಿತ್ತನೆ/ನಾಟಿ/ಕಳೆ ಕೀಳಲು–ಗಂಡಸರಿಗೆ	3.1%
–ಹೆಂಗಸರಿಗೆ	5.0%
* ಕಟಾವು/ಜಳ್ಳು ಶೋಧನೆ/ಒಕ್ಕಣೆ–ಗಂ.	0.5%
–ಹೆಂ.	0.3%
* ನಿಪುಣತೆಯಿಲ್ಲದ ಕೆಲಸ –ಗಂ.	2.0%
–ಹೆಂ.	4.7%

ಮನರೇಗ

ಗ್ರಾಮೀಣ ಬಡವರಿಗೆ ತುಸುವಾದರೂ ಪರಿಹಾರ ನೀಡಿರುವ ಮಹಾತ್ಮ ಗಾಂಧಿ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆ(ಮನರೇಗ)ವನ್ನು ಕೃಷಿಯೊಂದಿಗೆ ಸಮಗ್ರೀಕರಿಸುವುದಾಗಿ ಬಿಜೆಪಿ ಚುನಾವಣಾ ಪ್ರಣಾಳಿಕೆ ಹೇಳಿತ್ತು. ಆ ನಿಟ್ಟಿನಲ್ಲಿ ಏನೂ ಮಾಡಿಲ್ಲ. ಇತ್ತೀಚಿನ ಬಜೆಟಿನಲ್ಲೂ ಇದಕ್ಕೆ ನೀಡಿರುವ ಹಣ 55,000ಕೋಟಿ ರೂ. ಇದು ಕಳೆದ 2017–18ರ ಪರಿಷ್ಕೃತ ಬಜೆಟಿನ ಮೊತ್ತದಷ್ಟೇ ಇದೆ. ವಾಸ್ತವವಾಗಿ, ಈ ಕಾಯ್ದೆಯ ಸರಿಯಾದ ಜಾರಿಗೆ 80,000 ಕೋಟಿ ರೂ. ಬೇಕು ಎಂದು ಅಂದಾಜು ಮಾಡಲಾಗಿದೆ.

* 2016–17ರ'ಲ್ಲಿ 56% ದ'ಷ್ಟು ಕೂಲಿ ಪಾವತಿಯಾಗಿಲ್ಲ.
* ಈ ಕಾಯ್ದೆಯಡಿ ಕೆಲಸ ಕೇಳಿದ 1.3 ಕೋಟಿ ಬಡವರಿಗೆ, 15% ಮಂದಿಗೆ ಕೆಲಸ ಕೊಟ್ಟಿಲ್ಲ.
* 2017–18ರಲ್ಲಿ 1.62ಕೋಟಿ ಜಾಬ್ ಕಾರ್ಡುದಾರರ ಹೆಸರುಗಳನ್ನು ದಾಖಲಾತಿ ಪುಸ್ತಕದಿಂದ ತೆಗೆದು ಹಾಕಲಾಗಿದೆ.
* ಈ ಬಾಬ್ತು ರಾಜ್ಯಗಳಿಗೆ ನೀಡುವ ಹಣದಲ್ಲಿ ತೀವ್ರ ಕಡಿತ ಮಾಡಲಾಗಿದೆ.
* ಕನಿಷ್ಟ ನೂರು ದಿನಗಳ ಕೆಲಸದ ಭರವಸೆ ನೀಡಿರುವ ಈ ಯೋಜನೆಯ ಅಡಿಯಲ್ಲಿ 2017–18ರಲ್ಲಿ ಒದಗಿಸಿದ ಉದ್ಯೋಗದ ಸರಾಸರಿ 45%. ಇದು 2015–16ರಲ್ಲಿ 49% ಇತ್ತು
* 27 ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಲ್ಲಿ ಕೃಷಿಕೂಲಿಕಾರರಿಗೆ ಕಾನೂನು ಪ್ರಕಾರ ಲಭ್ಯವಾಗಬೇಕಾದ ಕನಿಷ್ಟ ಕೂಲಿಯನ್ನು ಮನರೇಗದ ಅಡಿಯಲ್ಲಿ ಕೊಡಲಾಗುತ್ತಿಲ್ಲ.

ಗ್ರಾಮೀಣ ಬಡ ರೈತಾಪಿಗಳ ಬಗ್ಗೆ ಮೋದಿ ಸರಕಾರದ ನಿರ್ಲಕ್ಷ್ಯವನ್ನು ಬಿಂಬಿಸುವ ಅಂಕಿ–ಅಂಶಗಳಿವು.

ಕೃಷಿ ನಿಧಿಗಳಲ್ಲಿ ಭಾರೀ ಇಳಿಕೆ

ಸರಕಾರದ ಆರ್ಥಿಕ ಸರ್ವೆಯ ಪ್ರಕಾರವೇ ಹವಾಮಾನ ಬದಲಾವಣೆಯಿಂದಾಗಿ ವಾರ್ಷಿಕ ಕೃಷಿ ಆದಾಯಗಳಲ್ಲಿ 15ರಿಂದ 18ಶೇ. ಇಳಿಕೆಯಾಗಬಹುದು, ನೀರಾವರಿಯಿಲ್ಲದ ಪ್ರದೇಶಗಳಲ್ಲಿ ಇದು 20ರಿಂದ 25ಶೇ.ದ ವರೆಗೂ ಇಳಿಯಬಹುದು . ಆದರೂ ಕೃಷಿಕ್ಷೇತ್ರದ ವಿವಿಧ ಹಣ–ನೀಡಿಕೆಗಳ ಅಂಕಿ–ಅಂಶಗಳನ್ನು ನೋಡಿ:

* ರಾಷ್ಟ್ರೀಯ ಕೃಷಿ ವಿಕಾಸ ಯೋಜನೆಗೆ ಕಳೆದ ವರ್ಷ ನೀಡಿದ್ದ ಹಣದ ಪರಿಷ್ಕೃತ ಅಂದಾಜು 4500 ಕೋಟಿ ರೂ. ಆದರೆ ಈ ವರ್ಷ ಬಜೆಟಿನಲ್ಲಿ ನಿಡಿರುವುದು 3600 ಕೋಟಿ ರೂ. ಮಾತ್ರ, **ಇದು ಈ ಯೋಜನೆ ಆರಂಭವಾದಂದಿನಿಂದ ನೀಡಿರುವ ಅತಿ ಕಡಿಮೆ ಮೊತ್ತ ಎನ್ನಲಾಗಿದೆ.**
* ಕೃಷಿ ಉತ್ಪನ್ನಗಳ ಬೆಲೆಗಳಲ್ಲಿ ಬಾರೀ ಏರಿಪೇರಿನಿಂದ ರೈತರಿಗೆ ರಕ್ಷಣೆ ನೀಡಲೆಂದು ಬಹಳ ಸದ್ದು–ಗದ್ದಲಗಳ ನಡುವೆ ರಚಿಸಿರುವ 'ಬೆಲೆ ಸ್ಥಿರೀಕರಣ ನಿಧಿ'ಗೆ 2016–17ರಲ್ಲಿ 6900 ಕೋಟಿ ರೂ.ಗಳನ್ನು ನೀಡಿದ್ದರೆ, 2017–18ರಲ್ಲಿ ಇದು ಕೇವಲ 1500 ಕೋಟಿರೂ. ಗಳಿಗೆ ಇಳಿದಿದೆ. **ಇದು ರಬ್ಬರ್, ಚಹಾ, ಕಾಫಿ, ಮಸಾಲೆ ಪದಾರ್ಥಗಳು ಮುಂತಾದ ವಾಣಿಜ್ಯ ಬೆಳೆಗಳನ್ನು ಬೆಳೆಯುವ ರೈತರನ್ನು ತೀವ್ರವಾಗಿ ತಟ್ಟುತ್ತಿವೆ.**
* ಸಾಂಸ್ಥಿಕ ಕೃಷಿ ಸಾಲಗಳಲ್ಲಿ ಸಣ್ಣ ಮತ್ತು ಅಂಚಿನಲ್ಲಿರುವ ರೈತರಿಗೆ ಸಿಕ್ಕಿರುವುದು 41% ಮಾತ್ರ. (ತಲಾ 2ಲಕ್ಷ ರೂ.ಗಿಂತ ಕಡಿಮೆ ಸಾಲ). 1ಕೋಟಿರೂ. ಗಿಂತ ಹೆಚ್ಚಿನ ಮೊತ್ತದ ಸಾಲಗಳು, ಅಂದರೆ ಕೃಷಿ ಕಾರ್ಪೊರೇಟ್‌ಗಳಿಗೆ ನೀಡಿದ ಸಾಲಗಳ ಪ್ರಮಾಣ 14% ದಷ್ಟಾಗುತ್ತದೆ.

ಇದರಿಂದಾಗಿ ತಮ್ಮ ಕೃಷಿ ಚಟುವಟಿಕೆಗಳನ್ನು ಮುಂದುವರೆಸಲು ಬಡ ರೈತರು ಲೇವಾದೇವಿಗಾರರ ಮೊರೆ ಹೋಗಬೇಕಾದ್ದರಿಂದ ಅವರ ಸಾಲ ಹೊರೆ ಏರುತ್ತಲೇ ಇದೆ, ಅದರಿಂದಾಗಿ ಹತಾಶ ಆತ್ಮಹತ್ಯೆಗಳೂ ಏರುತ್ತಲೇ ಇವೆ.

* ಬಹಳಷ್ಟು ಪ್ರಚಾರ ಗಿಟ್ಟಿಸಿರುವ ಪ್ರಧಾನ ಮಂತ್ರಿ ಫಸಲ್ ಬಿಮಾ ಯೋಜನಾದ ಹೆಸರಲ್ಲಿ 21,000 ಕೋಟಿ ರೂ.ಗಳನ್ನು ಖರ್ಚು ಮಾಡಲಾಗಿದೆ ಎಂದು ಹೇಳಲಾಗುತ್ತಿದೆ. ಆದರೆ ಇದರ ನಿಜವಾದ ಫಲಾನುಭವಿಗಳು ಇದರಲ್ಲಿ ಮೂರನೇ ಒಂದರಷ್ಟು ಬೆಳೆ ವಿಮೆಗೆ ಪ್ರೀಮಿಯಂ ತೆತ್ತಿರುವ ರೈತರಲ್ಲ, ಬದಲಾಗಿ ದೊಡ್ಡ ವಿಮಾ ಕಂಪನಿಗಳು. ಅವರು 10,000 ಕೋಟಿ ರೂ.ಗಳ ಲಾಭ ಮಾಡಿಕೊಂಡಿದ್ದಾರೆ ಎಂದು ಒಂದು ಸಿಎಜಿ ವರದಿಯೇ ಹೇಳುತ್ತದೆ.

ನೀರಾವರಿ ಯೋಜನೆಯದ್ದೂ ಅದೇ ಕತೆ

ಇನ್ನೊಂದು 'ಪಿಎಂ' ಯೋಜನೆ, 'ಪ್ರಧಾನ ಮಂತ್ರಿ ಕೃಷಿ ಸಿಂಚಾಯಿ ಯೋಜನಾ' ಅಡಿಯಲ್ಲಿ 'ಪ್ರತಿ ಗದ್ದೆಗೆ ನೀರು' ಎಂಬ ಘೋಷಣೆಯ ಬಗ್ಗೆ ಭಾರೀ ಪ್ರಚಾರ ನೀಡಲಾಗಿತ್ತು. ಆದರೆ ಈ ಕಾರ್ಯಕ್ರಮ ಆಂಧ್ರಪ್ರದೇಶ, ಕರ್ನಾಟಕ, ಮಹಾರಾಷ್ಟ್ರ ಮತ್ತು ತಮಿಳುನಾಡಿಗಷ್ಟೇ ಸೀಮಿತಗೊಂಡಂತಿದೆ ಎಂದು ಇತ್ತೀಚಿನ ಒಂದು ವಿಶ್ಲೇಷಣೆ ಹೇಳುತ್ತದೆ. ಬಿಹಾರದಲ್ಲಿ ನೀರಾವರಿ ವಿಸ್ತರಣೆ ಕೇವಲ 86 ಹೆಕ್ಟೇರ್ ಮಾತ್ರವಂತೆ. ಈ ಕಾರ್ಯಕ್ರಮದಲ್ಲಿ 40% ಹಣವನ್ನು ರಾಜ್ಯ ಸರಕಾರಗಳೇ ನೀಡಬೇಕಾಗಿರುವುದೇ ಈ ಕಾರ್ಯಕ್ರಮ ಸಫಲವಾಗದಿರಲು ಪ್ರಮುಖ ಕಾರಣ ಎನ್ನಲಾಗಿದೆ.

ಕಳೆದ ನಾಲ್ಕು ವರ್ಷಗಳ ನರೇಂದ್ರ ಮೋದಿ ನೇತೃತ್ವದ ಸರಕಾರದ ಕೃಷಿಕ್ಷೇತ್ರದ ಎಲ್ಲ ಕ್ರಮಗಳ ಮೂಲ ಗುರಿ ಕಾರ್ಪೊರೇಟ್ ವಲಯದ ಲಾಭಕೋರತನಕ್ಕೆ ನೆರವಾಗುವುದು– ಇದಕ್ಕಾಗಿ ರೈತಾಪಿ ಜನಗಳ ಹಿತಗಳನ್ನು ಬಲಿಗೊಟ್ಟರೂ ಸರಿಯೇ. ಇದರಿಂದಾಗಿ ಇತ್ತೀಚಿನ ದಿನಗಳಲ್ಲಿ ಬೃಹತ್ ಪ್ರಮಾಣದಲ್ಲಿ ರೈತಾಪಿಗಳು ಬೀದಿಗಿಳಿಯುತ್ತಿದ್ದಾರೆ. 'ಬಿಜೆಪಿ–ಮೋದಿ ಕಿಸಾನ್–ವಿರೋಧ' ಎಂಬ ಭಾವನೆ ಬೇರೂರುತ್ತಿದ್ದು ಇದನ್ನು ಅಳಿಸಿ ಹಾಕಲು ಬಿಜೆಪಿ ಹೆಣಗುವಂತಾಗಿದೆ. ●

....ಕಾರ್ಮಿಕರ ಮೇಲೆ ಪ್ರಹಾರಗಳ ವರ್ಷಗಳು

ಪುಟ 9 ರಿಂದ

* ಈಗ ಸಾರ್ವಜನಿಕ ವಲಯದ ಮೂರನೇ ಒಂದು ಭಾಗದಷ್ಟು, ಖಾಸಗಿ ವಲಯದಲ್ಲಿ 40ರಿಂದ 60ಶೇ.ದಷ್ಟು ಕಾರ್ಮಿಕರು ಗುತ್ತಿಗೆ ಕಾರ್ಮಿಕರಾಗಿ ನರಳುತ್ತಿದ್ದಾರೆ.
* ಇವರ ಸಂಬಳಗಳು ಸಾಮಾನ್ಯವಾಗಿ ನಿಯಮಿತ ಉದ್ಯೋಗಿಗಳ ಸಂಬಳಕ್ಕಿಂತ 30ರಿಂದ 40 ಶೇ. ಕಡಿಮೆಯಿದೆ. ಇತರ ಕಾನೂನು ಸೌಲಭ್ಯಗಳಂತೂ ಇಲ್ಲವೇ ಇಲ್ಲ.
* ಸಮಾನ ಕೆಲಸಕ್ಕೆ ಸಮಾನ ಸಂಬಳ–ಸೌಲಭ್ಯಗಳು ಲಭ್ಯವಾಗಬೇಕು ಎಂದು ಸುಪ್ರಿಂ ಕೋರ್ಟ್ 2016ರಲ್ಲಿ ಪುನರುಚ್ಚರಿಸಿದ್ದರೂ ಅದನ್ನು ಜಾರಿ ಮಾಡುವ ಗೋಜಿಗೂ ಈ ಸರಕಾರ ಹೋಗಿಲ್ಲ.

3. **ಅಸಂಘಟಿತ ಕಾರ್ಮಿಕರ ಬಗ್ಗೆ ನಿರ್ಲಕ್ಷ್ಯ:**

ದೇಶ ಒಟ್ಟು ಕಾರ್ಮಿಕರಲ್ಲಿ 93% ಅಸಂಘಟಿತ ವಲಯದಲ್ಲಿ ದುಡಿಯುತ್ತಿದ್ದಾರೆ, ಅಂದರೆ ಅತಿ ಕಡಿಮೆ ಕೂಲಿ, ಶೋಚನೀಯ ದುಡಿಮೆಯ ಪರಿಸ್ಥಿತಿಗಳು ಮತ್ತು ಜೀವನದ ಪರಿಸ್ಥಿತಿಗಳು. ಕೃಷಿ ಬಿಕ್ಕಟ್ಟಿನಿಂದಾಗಿ ಊರು ಬಿಟ್ಟ ವಲಸೆ ಬರುವ ಕಾರ್ಮಿಕರ ಪರಿಸ್ಥಿತಿ ಇನ್ನಷ್ಟು ಶೋಚನೀಯಗೊಂಡಿದೆ. ಹೋರಾಟಗಳಿಂದ ಗಳಿಸಿದ ಕೆಲವು ಸೌಲಭ್ಯಗಳು ಕೂಡ ಸರಕಾರದ ನಿರ್ಲಕ್ಷ್ಯದಿಂದಾಗಿಯೇ ಜಾರಿಯಾಗಿಲ್ಲ. ಉದಾ: ಕಟ್ಟಡ ಕೆಲಸಗಾರರ ಕಲ್ಯಾಣದ ಹೆಸರಲ್ಲಿ ಸಂಗ್ರಹಿಸಿರುವ 37,400 ಕೋಟಿರೂ. ಗಳಲ್ಲಿ ಖರ್ಚಾಗಿರುವುದು ಕೇವಲ 9000 ಕೋಟಿ ರೂ.. ಅದೂ ಕಟ್ಟಡ ಕಾರ್ಮಿಕರ ಕಲ್ಯಾಣಕ್ಕಾಗಿಯಲ್ಲ, ಬದಲಾಗಿ ಆಡಳಿತ ವೆಚ್ಚಗಳಿಗಾಗಿ.

4. **ಸ್ಕೀಂ ಕೆಲಸಗಾರರ ಉಪೇಕ್ಷೆ:**

ಸರಕಾರದ ವಿವಿಧ ಯೋಜನೆಗಳ ಜಾರಿಯಲ್ಲಿ ಸುಮಾರು ಒಂದು ಕೋಟಿಯಷ್ಟು ಜನ(ಬಹುಪಾಲು ಮಹಿಳೆಯರು) ದುಡಿಯುತ್ತಿದ್ದಾರೆ. ಇವರು ಜನಗಳಿಗೆ ಶಿಕ್ಷಣ, ಆರೋಗ್ಯ, ಪೋಷಕಾಂಶಗಳ ಪೂರೈಕೆ



ಮುಂತಾದ ಬಡವಿಭಾಗಗಳಿಗೆ ಮೂಲಸೇವೆಗಳನ್ನು ಒದಗಿಸುವ ಕೆಲಸ ಮಾಡುತ್ತಿರುವವರು. ಸರಕಾರ ಅವರನ್ನು ಕೆಲಸಗಾರರೆಂದೇ ಪರಿಗಣಿಸುತ್ತಿಲ್ಲ. 'ಗೌರವ ಧನ' ಎಂದೋ, 'ಪ್ರೋತ್ಸಾಹಕ ಧನ' ಎಂದೋ ಹಿಡಿಗಾಸು ಕೊಡುತ್ತಿದೆ, ಯಾವ ಸಾಮಾಜಿಕ ಸೌಲಭ್ಯಗಳನ್ನು ಕೊಡಲೂ ಸಿದ್ಧವಿಲ್ಲ. ಅಂಗನವಾಡಿ ನೌಕರರಿಗೆ 2011ರಿಂದಲೂ 'ಗೌರವಧನ'ವನ್ನು ಹೆಚ್ಚಿಸಿಲ್ಲ. ಅದನ್ನು ಹೆಚ್ಚಿಸುವ ಒಂದು ಆಶ್ವಾಸನೆಯನ್ನು ಬಿಜೆಪಿಯೂ ನೀಡಿತ್ತು. ಅದನ್ನು ಜಾರಿ ಮಾಡಿಲ್ಲ, ಮಾತ್ರವಲ್ಲ, ಇದರಲ್ಲಿ ಭಾರತ ಸರಕಾರದ ಪಾಲನ್ನು ಕಡಿತ ಮಾಡಿ, ಖಾಸಗೀಕರಣದ ಮೂಲಕ ಈ ಯೋಜನೆಯನ್ನೇ ಕಳಚಿಹಾಕಲು ಈ ಸರಕಾರ ಮುಂದಾಗಿದೆ.

5. **ನಿರುದ್ಯೋಗಿ ಪಡೆ ನಿರ್ಮಾಣ:**

'ಮೇಕ್ ಇನ್ ಇಂಡಿಯ', 'ಸ್ಕಿಲ್ ಇಂಡಿಯ', 'ಸ್ಟಾರ್ಟ್ ಅಪ್ ಇಂಡಿಯ' ಎಂಬ ಹತ್ತು ಹಲವು ಮಾತುಗಳ ಮಂಟಪಗಳನ್ನು ಕಟ್ಟಿದರೂ ಪದವೀದರರ ನಡುವೆ ನಿರುದ್ಯೋಗ 28% ಎಂದು ವರದಿಯಾಗಿದೆ. ಜತೆಗೆ ವಿವಿಧ ವಲಯಗಳಲ್ಲಿ ದೊಡ್ಡ ಪ್ರಮಾಣದಲ್ಲಿ ಉದ್ಯೋಗನಷ್ಟಗಳ ಸುದ್ದಿಗಳೂ ಬರುತ್ತಲೇ ಇವೆ. ಲೇಬರ್ ಬ್ಯುರೊ ಪ್ರಕಾರ 37% ಕಾರ್ಮಿಕರಿಗೆ ಸರಿಯಾದ ಉದ್ಯೋಗವಿಲ್ಲ, ಸಿಎಂಐಇ ಪ್ರಕಾರ 7% ಕಾರ್ಮಿಕರಿಗೆ ಉದ್ಯೋಗಗಳೆ ಇಲ್ಲ. ಮಹಿಳಾ ಉದ್ಯೋಗ ಪ್ರಮಾಣ 27%ಕ್ಕಿಳಿದಿದೆ. ಅದು ಇಷ್ಟೊಂದು ಕೆಳ ಮಟ್ಟಕ್ಕೆ ಎಂದೂ ಇಳಿದಿರಲಿಲ್ಲ.

6. **ಮೀಸಲಾತಿ, ಸ್ವಾವಲಂಬನೆ ಸಾರ್ವಭೌಮತೆಯನ್ನು ಬಲಿಗೊಡುವ ಖಾಸಗೀಕರಣ:**

ಎರಡು ಯುಪಿಎ ಸರಕಾರಗಳು ಒಂದು ದಶಕದಲ್ಲಿ ಮಾಡಲಾಗದ್ದನ್ನು ಮೋದಿ ಸರಕಾರ ನಾಲ್ಕೇ ವರ್ಷಗಳಲ್ಲಿ ಮಾಡಿರುವ ಒಂದು ಕೆಲಸವೆಂದರೆ 1.96 ಲಕ್ಷ ಕೋಟಿ ರೂ. ಬೆಲೆ ಬಾಳುವ ಸಾರ್ವಜನಿಕ ಸೊತ್ತುಗಳ ಮಾರಾಟ! ರಕ್ಷಣೆ ಮತ್ತು ರೈಲ್ವೆಯಂತಹ ಆಯಕಟ್ಟಿನ ವಲಯಗಳನ್ನೂ ಈ ಸರಕಾರ ಬಿಟ್ಟಿಲ್ಲ, ದೇಶಿ–ವಿದೇಶಿ ಬಂಡವಾಳಕ್ಕೆ ತೆರೆದಿಟ್ಟಿದೆ. ಕಾರ್ಮಿಕರ ಮಟ್ಟಿಗೆ ಇದರ ಅರ್ಥ ಉದ್ಯೋಗ ನಷ್ಟ, ಸೇವಾ ಶರತ್ತುಗಳಲ್ಲಿ ಪ್ರತಿಕೂಲಕರ ಬದಲಾವಣೆ, ಮೀಸಲಾತಿಗಳ ನಷ್ಟ, ದೇಶಕ್ಕೆ ಸ್ವಾವಲಂಬನೆ ಮತ್ತು ಕೆಲವೊಂದು ಸಂದರ್ಭಗಳಲ್ಲಿ ಸಾರ್ವ ಭೌಮತೆಯ ನಷ್ಟ ಕೂಡ.

7. **ಕಾನೂನಿನ ರಕ್ಷಣೆಯನ್ನು ಕೊನೆಗೊಳಿಸುವ ಕಾರ್ಮಿಕ ಕಾನೂನು ತಿದ್ದುಪಡಿಗಳು:**

ಮೋದಿ ಸರಕಾರ ಅತ್ಯಂತ ಉತ್ಸಾಹದಿಂದ ಮಾಡಿರುವ ಒಂದು ಕೆಲಸವೆಂದರೆ 'ಕಾರ್ಮಿಕ ಸುಧಾರಣೆಗಳ'ನ್ನು ಮುಂದೊತ್ತಿರುವುದು. ಇದನ್ನು ಎರಡು ಮಟ್ಟಗಳಲ್ಲಿ ಮಾಡಲಾಗುತ್ತಿದೆ– ಕೇಂದ್ರ ಮಟ್ಟದಲ್ಲಿ ಮತ್ತು ರಾಜ್ಯಮಟ್ಟದಲ್ಲಿ. ಏಕೆಂದರೆ ಕಾರ್ಮಿಕ ವಿಷಯ ಸಂವಿಧಾನದ ಸಮವರ್ತಿ ಪಟ್ಟಿಯಲ್ಲಿದೆ. ಕೇಂದ್ರ ಮಟ್ಟದಲ್ಲಿ 44 ಕೇಂದ್ರ ಕಾರ್ಮಿಕ ಕಾಯ್ದೆಗಳನ್ನು ವಿಲೀನಗೊಳಿಸಿ ನಾಲ್ಕು 'ಸಂಹಿತೆ'ಗಳಲ್ಲಿ ಹಂಚುವ ಮೂಲಕ ಮಾಲಕರಿಗೆ ಕಾರ್ಮಿಕರನ್ನು ಮನಬಂದಂತೆ ನೇಮಿಸಿಕೊಳ್ಳುವ ಅಥವ ತೆಗೆದು ಹಾಕುವ ಸ್ವಾತಂತ್ರ್ಯವನ್ನು ಕೊಡಮಾಡುವ ಪ್ರಕ್ರಿಯೆಯನ್ನು ಆರಂಭಿಸಿದೆ. ಇದಕ್ಕಾಗಿ ಕಾರ್ಮಿಕ ಕಾಯ್ದೆಗಳ ತಿದ್ದುಪಡಿಗಳ ಪ್ರಧಾನ ಒತ್ತು ಬಹುಪಾಲು ಕಾರ್ಮಿಕರನ್ನು ಕಾನೂನಿನ ರಕ್ಷಣೆಯ ವ್ಯಾಪ್ತಿಯಿಂದ ಹೊರಗಿಡುವುದು ಮತ್ತು ಅವರು ಹೋರಾಟಗಳಿಂದ ಪಡೆದ ಹಕ್ಕುಗಳನ್ನು ಕಿತ್ತುಕೊಳ್ಳುವುದು.

ಆರಂಭದಲ್ಲಿ ಗಾರ್ಮೆಂಟ್ ಮತ್ತು ಜವಳಿ ಉದ್ದಿಮೆಯಲ್ಲಿ ಈ ಸರಕಾರ ತಂದ 'ನಿಗದಿತ ಅವಧಿಯ ಉದ್ಯೋಗ' ಎಂಬುದನ್ನು ಈಗ ಎಲ್ಲ ವಲಯಗಳಿಗೆ ವಿಸ್ತರಿಸಲಾಗಿದೆ. ಕಾನೂನುಗಳ ರಕ್ಷಣೆಯಂತೆ ಖಾಯಂ ಉದ್ಯೋಗ ಕೂಡ ಕ್ರಮೇಣ ಕಳೆದುಹೋದ ಸಂಗತಿಯಾಗಲಿದೆ. ಕಾರ್ಮಿಕರು ಸದಾ ಕೆಲಸ ಕಳಕೊಳ್ಳುವ ಭೀತಿಯಲ್ಲೇ ಕೆಲಸ ಮಾಡುತ್ತಿರಬೇಕಾಗುತ್ತದೆ. ಸಾಮಾಜಿಕ ಭದ್ರತೆಯ ಸಂಹಿತೆಯಲ್ಲಿ ಸಾಮಾಜಿಕ ಭದ್ರತೆಗೆ ಸರಕಾರ ಹಣ ಒದಗಿಸುವ ಮಾತೇ ಇಲ್ಲ. ಇಲ್ಲಿ ನಿಜವಾದ ಆಶಯ ಎಂದರೆ ಕಾರ್ಮಿಕರ ಹಣವನ್ನು ಶೇರು ಮಾರುಕಟ್ಟೆಗೆ ಒದಗಿಸುವುದು.

8. **ರಾಜ್ಯಗಳಲ್ಲಿ 'ರಾಜಸ್ಥಾನ ಮಾದರಿ' ಕಾರ್ಮಿಕ ಕಾಯ್ದೆಗಳ ತಿದ್ದುಪಡಿಗಳು:**

ರಾಜಸ್ಥಾನದ ಬಿಜೆಪಿ ಸರಕಾರ ಈಗ ಕಾರ್ಮಿಕ ರಂಗದಲ್ಲಿ ಬಿಜೆಪಿ ಮುಂದಿಟ್ಟಿರುವ ಮಾದರಿಯಾಗಿದೆ. ಅಲ್ಲಿ ಕೈಗಾರಿಕಾ ವಿವಾದಗಳ ಕಾಯ್ದೆ ಸೇರಿದಂತೆ ಹಲವು ಕಾಯ್ದೆಗಳನ್ನು ತಿದ್ದುಪಡಿ ಮಾಡಲಾಗಿದೆ. ಈ ಮೂಲಕ ಮಾಲಕರು ಕಾರ್ಮಿಕರನ್ನು ಮನಬಂದಂತೆ ನೇಮಿಸಿಕೊಳ್ಳಲು, ತೆಗೆದು ಹಾಕಲು ಅನುಕೂಲ ಕಲ್ಪಿಸಿಕೊಟ್ಟಿದ್ದರೆ, ಇತ್ತ ಕಾರ್ಮಿಕರು ತಮ್ಮ ಸಂಘಟನೆಗಳನ್ನು ಕಟ್ಟಿಕೊಳ್ಳುವುದನ್ನು, ಸಾಮೂಹಿಕ ಚೌಕಾಶಿ ನಡೆಸುವುದನ್ನು ಮತ್ತು ತಮ್ಮ ಬೇಡಿಕೆಗಳ ಮೇಲೆ ಮುಷ್ಕರಕ್ಕೆ ಇಳಿಯುವುದನ್ನು ಬಹಳಷ್ಟು ಕಷ್ಟಕರಗೊಳಿಸಲಾಗಿದೆ. ಇದನ್ನು ಇತರ ಬಿಜೆಪಿ ರಾಜ್ಯ ಸರಕಾರಗಳು, ಕಾಂಗ್ರೆಸ್ ರಾಜ್ಯಸರಕಾರಗಳು ಕೂಡ ಅನುಕರಿಸಿವೆ. ಬಿಜೆಪಿ ಕೇಂದ್ರ ಸರಕಾರ ಇತರ ರಾಜ್ಯಸರಕಾರಗಳೂ ಇದೇ ರಾಜಸ್ಥಾನ ಮಾದರಿಯನ್ನು ಅನುಕರಿಸುವಂತೆ ನಿರ್ದೇಶಿಸುತ್ತಿದೆ.

9. **ಕಾರ್ಮಿಕ ಕಾಯ್ದೆಗಳ ಉಸ್ತುವಾರಿ ವ್ಯವಸ್ಥೆಗೇ ಭಂಗ:**

ಕಾರ್ಮಿಕ ಕಾನೂನುಗಳನ್ನು ದುರ್ಬಲ ಗೊಳಿಸುವುದಲ್ಲದೆ, ಇವುಗಳ ಜಾರಿಯ ಉಸ್ತುವಾರಿ ನೋಡಿಕೊಳ್ಳುವ ಕಾರ್ಮಿಕ ಇಲಾಖೆಗಳ ಮತ್ತು ಲೇಬರ್ ಕೋರ್ಟುಗಳನ್ನೂ ಭಂಗಗೊಳಿಸಲಾಗುತ್ತಿದೆ.

ಗೌರಿ ಹತ್ಯೆ ಹಿಂದಿನ ಕೈಗಳು ಬಯಲಾದಾವೆ?



ಕಳೆದ ವಾರ ಗೌರಿ ಹತ್ಯೆಯ ತನಿಖೆ ನಿರ್ಣಾಯಕ ಹಂತಕ್ಕೆ ಬಂದಿದೆ. ಹತ್ಯೆಯಲ್ಲಿ ನೇರವಾಗಿ ಭಾಗವಹಿಸಿದ ಹಲವರು ಬಂಧಿತರಾಗಿದ್ದಾರೆ. ಹತ್ಯೆಯ ಹಿಂದಿನ ಸಂಚಿನ ಸ್ಥೂಲರೂಪ ಸಹ ಬೆಳಕಿಗೆ ಬಂದಿದೆ. ಹತ್ಯೆಗೆಂದೇ ಒಂದೂವರೆ ವರ್ಷದಿಂದ ಸಿದ್ಧತೆ ಮಾಡಿಕೊಳ್ಳುತ್ತಿದ್ದ ಆರೋಪಿಗಳು, ನಾಲ್ಕು ತಂಡಗಳಲ್ಲಿ ಕೆಲಸ ಮಾಡಿದ್ದರು ಎಂದು ತನಿಖೆಯಿಂದ ತಿಳಿದು ಬಂದಿದೆ. ಸುಜಿತ್ ಕುಮಾರ್ ಅಲಿಯಾಸ್ ಪ್ರವೀಣ್, ಮನೋಹರ್ ಯಡವೆ, ಅಮೋಲ್ ಕಾಳೆ ಮತ್ತು ಅಮಿತ್ ರಾಮಚಂದ್ರ ದೇಗ್ವೆಕರ್, ಪರಶುರಾಮ್ ವಾಘ್ಮೋರೆ – ಬಂಧಿತ ಆರೋಪಿಗಳು.


ಮೊದಲ ತಂಡವು ಒಂದೂವರೆ ವರ್ಷದಿಂದ ಗೌರಿ ಅವರ ಬರಹಗಳನ್ನು ಸಂಗ್ರಹಿಸಲಾರಂಭಿಸಿತ್ತು. ಗೌರಿ ಲಂಕೇಶ್ ಪತ್ರಿಕೆಗಳ ಸಂಚಿಕೆಗಳು, ಅವರ ಭಾಷಣದ ವಿಡಿಯೊ ಹಾಗೂ ಹಿಂದೂ ಧರ್ಮದ ವಿರುದ್ಧ ನೀಡಿದ್ದ ಹೇಳಿಕೆಗಳನ್ನು ಸಂಗ್ರಹ ಮಾಡಿತ್ತು. ಅದನ್ನೆಲ್ಲ ಎರಡನೇ ತಂಡಕ್ಕೆ ಕೊಟ್ಟಿತ್ತು. ಎರಡನೇ ತಂಡದವರು, ಹೆಚ್ಚುವರಿ ಮಾಹಿತಿ ಸೇರಿಸಿ ಮೂರನೇ ತಂಡಕ್ಕೆ ರವಾನಿಸಿದ್ದರು. ಮೂರನೇ ತಂಡದಲ್ಲಿದ್ದ ಇಬ್ಬರು ಆರೋಪಿಗಳು, ಆರು ತಿಂಗಳು ಗೌರಿ ಅವರನ್ನು ಹಿಂಬಾಲಿಸಿ ದಿನಚರಿ ತಿಳಿದುಕೊಂಡಿದ್ದರು. ಮನೆ ಹಾಗೂ ಸುತ್ತಮುತ್ತ ಸಿ.ಸಿ.ಟಿ.ವಿ ಕ್ಯಾಮೆರಾ ಬಗ್ಗೆ ಮಾಹಿತಿ ಕಲೆಹಾಕಿ ನಾಲ್ಕನೇ ತಂಡಕ್ಕೆ ನೀಡಿದ್ದರು. ಗುಂಡು ಹಾರಿಸಿ ಹತ್ಯೆ ಮಾಡುವ ಹೊಣೆಯನ್ನು ನಾಲ್ಕನೇ ತಂಡದಲ್ಲಿ ಪ್ರವೀಣ್, ಪರಶುರಾಮ್ ಹಾಗೂ ನಿಹಾಲ್ ದಾದಾ ವಹಿಸಿಕೊಂಡಿದ್ದರು. ಹತ್ಯೆಗೂ ತಿಂಗಳ ಮುನ್ನ ನಗರಕ್ಕೆ ಬಂದಿದ್ದ ಮೂವರು, ಹತ್ಯೆ ಮಾಡಲು ಯಾವ ರಸ್ತೆಯಲ್ಲಿ ಹೋಗಬೇಕು. ಆಮೇಲೆ ಪರಾರಿಯಾಗುವುದು ಹೇಗೆ ಎಂಬುದನ್ನು ತಿಳಿದುಕೊಂಡಿದ್ದರು. ಸೆಪ್ಟೆಂಬರ್ 4ರಂದೇ ಗೌರಿ ಅವರನ್ನು ಹತ್ಯೆ ಮಾಡಲು ಅವರು ಸಿದ್ಧರಾಗಿದ್ದರು. ಅದು ಸಾಧ್ಯವಾಗಿರಲಿಲ್ಲ. ಮರುದಿನವೇ ಕೃತ್ಯ ಎಸಗಿ ಪರಾರಿಯಾಗಿದ್ದರು ಎಂದು ತನಿಖೆಯಿಂದ ಸ್ಪಷ್ಟವಾಗಿದೆ ಎನ್ನಲಾಗಿದೆ.

'ಗೌರಿ ಲಂಕೇಶ್ರನ್ನು ಹತ್ಯೆ ಮಾಡಿದ್ದು ನಾನೇ. ಆ ಮೂವರು ಹೇಳಿದ್ದಕ್ಕೆ ಗುಂಡು ಹೊಡೆದೆ' ಎಂದು ಆರೋಪಿ ಪರಶುರಾಮ್ ವಾಘ್ಮೋರೆ, ಎಸ್.ಐ.ಟಿ ಅಧಿಕಾರಿಗಳ ಎದುರು ತಪ್ಪೊಪ್ಪಿಕೊಂಡಿದ್ದಾನೆ. 'ಪರಶುರಾಮ ವಾಘ್ಮೋರೆಯೇ ಗೌರಿ ಲಂಕೇಶ್ ಅವರಿಗೆ ಗುಂಡು ಹೊಡೆದದ್ದು' ಎಂದು ಹತ್ಯೆಯ ಪ್ರತ್ಯಕ್ಷದರ್ಶಿಗಳಾದ ಪತ್ರಿಕೋದ್ಯಮ ವಿದ್ಯಾರ್ಥಿ ಹಾಗೂ ಕೂಲಿ ಕಾರ್ಮಿಕನೊಬ್ಬ ಎಸ್.ಐ.ಟಿ ಅಧಿಕಾರಿಗಳಿಗೆ ಹೇಳಿಕೆ ನೀಡಿದ್ದಾರೆ. 'ಕೃತ್ಯವೆಸಗಲು ತನಗೆ ನಿರ್ದೇಶನ ನೀಡಿದ ಹಾಗೂ ಕೃತ್ಯದಲ್ಲಿ ಭಾಗಿಯಾಗಿದ್ದ ಮೂವರ ವಿವರಗಳನ್ನು ಆತ ಹಂಚಿಕೊಂಡಿದ್ದಾನೆ' ಎಂದು ಎಸ್.ಐ.ಟಿ ಅಧಿಕಾರಿಗಳು ತಿಳಿಸಿದ್ದಾರೆ.

ಡಾ. ದಾಬೋಲ್ಕರ್, ಗೋವಿಂದ ಪಾನ್ಸರೆ, ಡಾ. ಕಲಬುರ್ಗಿ ಮತ್ತು ಗೌರಿ ಲಂಕೇಶ್ ಅವರ ಸರಣಿ ಹತ್ಯೆ ನಡೆದಿದ್ದು ಇತ್ತೀಚಿನ ವರೆಗೆ ಅವರ ಹಂತಕರಾಗಲಿ ಹತ್ಯೆಯ ರೂವಾರಿಗಳಾಗಲಿ ಪತ್ತೆಯಾಗಿರಲಿಲ್ಲ. ಈ



ನಾಲ್ಕು ಹತ್ಯೆಗಳಲ್ಲಿ ಬಳಸಲಾದ ಗುಂಡು, ಪಿಸ್ತೂಲು, ವಿಧಾನ, ಉದ್ದೇಶಗಳಲ್ಲಿ ಹಲವು ಸಾಮ್ಯಗಳಿದ್ದು ಇವು ಒಂದು ಗ್ಯಾಂಗಿನ ಕೃತ್ಯವೆಂದು ಹಿಂದಿನಿಂದಲೇ ತೀವ್ರ ಗುಮಾನಿಯಿತ್ತು. ಇದೊಂದು ಉಗ್ರಗಾಮಿ



ಹಿಂದುತ್ವ ಗುಂಪಿನ ವ್ಯವಸ್ಥಿತ ಕೃತ್ಯವೆಂಬುದೂ ಹೆಚ್ಚು ಕಡಿಮೆ ಸ್ಪಷ್ಟವಾಗಿತ್ತು. ಆದರೆ ಹಂತಕರ ಅಥವಾ ಅದರ ಯೋಜಕರ ಯಾವುದೇ ಸುಳಿವು ತನಿಖೆಗೆ ದಕ್ಕಿರಲಿಲ್ಲ. ಬೇರೆ ಬೇರೆ ಕಾರಣಗಳಿಗೆ ಮಹಾರಾಷ್ಟ್ರ ಮತ್ತು ಕರ್ನಾಟಕ (ಕಾಂಗ್ರೆಸ್ ಮತ್ತು ಬಿಜೆಪಿ) ಸರಕಾರಗಳ ರಾಜಕೀಯ ಇಚ್ಛೆಯ ಅಭಾವ ಇದಕ್ಕೆ ಒಂದು ಕಾರಣ. ಗುಪ್ತಕಾರ್ಯಾಚರಣೆ ನಡೆಸುವಲ್ಲಿ ಈ ಗುಂಪಿನ ಸಾಮರ್ಥ್ಯ ಮತ್ತು ಪ್ರಭುತ್ವ (ರಾಜಕೀಯ, ಪೋಲಿಸ್ ಇತ್ಯಾದಿ) ವ್ಯವಸ್ಥೆಯೊಳಗೆ ಅದರ ಕೊಂಡಿಗಳು ಬಲವಾಗಿರುವುದೂ ಇನ್ನೊಂದು ಕಾರಣ. ಈ ಹಿನ್ನೆಲೆಯಲ್ಲಿ ಗೌರಿ ಹಂತಕರನ್ನು ಗುರುತಿಸಿ ಹಿಡಿಯುವಲ್ಲಿ ಈಗ ಸಾಧಿಸಿರುವ ಪ್ರಗತಿ ಗಮನಾರ್ಹವಾದದ್ದೇ.

ಬೀದರದಲ್ಲಿ ಪಾಕಿಸ್ತಾನ ಧ್ವಜ ಹಾರಿಸಿದ್ದ ಆರು ಜನರಲ್ಲಿ ವಾಘ್ಮೋರೆ ಸಹ ಒಬ್ಬನಾಗಿದ್ದು, ಆತನಿಗೆ ಬೈಲ್ ಕೊಡಿಸಿದ್ದು ಸ್ವತಃ ಪ್ರಮೋದ್ ಮುತಾಲಿಕ್ ಅವರೇ. ಹಂತಕನಿಗೂ ಶ್ರೀರಾಮಸೇನೆಗೆ ಸಂಬಂಧ ಇರುವುದು ಬಹಿರಂಗವಾಗುತ್ತಿದ್ದಂತೆ ರಾಜ್ಯದಲ್ಲಿ ಸಂಘ ಪರಿವಾರ ಎಚ್ಚೆತ್ತು ಕಾರ್ಯಾಚರಣೆಗೆ ಇಳಿದಿದೆ. ಒಂದು ಕಡೆ ಹಂತಕ ಆರೋಪಿ ಪರಶುರಾಮ್ ಶ್ರೀರಾಮಸೇನೆ ಸದಸ್ಯನಲ್ಲ ಎಂದರೆ, ಇನ್ನೊಂದು ಕಡೆ ಬಹಿರಂಗವಾಗೇ ಆತನ ಸೈದ್ಧಾಂತಿಕ ಭೌತಿಕ ಬೆಂಬಲಕ್ಕೆ ಇಳಿದಿದೆ. ಬಿಜೆಪಿ ಯುವ ಮೋರ್ಚಾದ ರಾಜ್ಯ ಕಾರ್ಯಕಾರಿಣಿ ಸದಸ್ಯೆ ಮಂಚಾಲೇಶ್ವರಿ ತೊಣಶ್ಯಾಳ, 'ಈ ದೇಶದ ತಳಹದಿ ಹಿಂದುತ್ವ. ಲದ್ದಿಜೀವಿಗಳು ಹಿಂದೂ ವಿರೋಧಿ ಚಟುವಟಿಕೆ ಮಾಡಿದ್ರೆ ಮನೆ ಮನೆಯಲ್ಲೂ ಪರಶುರಾಮ ವಾಘ್ಮೋರೆ ಹುಟ್ಟುತ್ತಾರೆ' ಎಂದು ತಮ್ಮ ಫೇಸ್ಬುಕ್ ಖಾತೆಯಲ್ಲಿ ಬರೆದುಕೊಂಡಿದ್ದಾರೆ. ಶ್ರೀರಾಮಸೇನಾ ಕರ್ನಾಟಕ ಸಂಘಟನೆಯು ತನ್ನ ಫೇಸ್ಬುಕ್ ಖಾತೆಯಲ್ಲಿ 'ನಿಮ್ಮ ದುಡಿಮೆಯ ಒಂದು ಭಾಗ, ನಿಮ್ಮ ಅನ್ನದ ಒಂದು ತುತ್ತನ್ನು ದೇಶಭಕ್ತರಿಗೆ ಕೊಡಲಾರಿರಾ? ಪರಶುರಾಮ ವಾಘ್ಮೋರೆ ಕುಟುಂಬ ಆರ್ಥಿಕ ಸಂಕಷ್ಟದಲ್ಲಿದ್ದು, ದಯವಿಟ್ಟು ಹಣದ ಸಹಾಯ ಮಾಡಬೇಕೆಂದು ಕಳಕಳಿಯ ವಿನಂತಿ' ಎಂಬ ಪೋಸ್ಟ್ ಅನ್ನು ಹ್ಯಾಷ್ ಟ್ಯಾಗಿನೊಂದಿಗೆ ಅಪ್ಲೋಡ್ ಮಾಡಿದೆ. ಮತ್ತೊಂದು ಕಡೆ ನಾಲ್ವರು ಆರೋಪಿಗಳಿಗೆ ಪೊಲೀಸರು 'ಥರ್ಡ್ ಡಿಗ್ರಿ ಟ್ರೀಟ್ಮೆಂಟ್' ನೀಡಿರುವ ಕುರಿತು ವಿಶೇಷ ವಿಚಾರಣೆ ನಡೆಸಲು ಗೃಹ ಇಲಾಖೆಗೆ ನಿರ್ದೇಶಿಸಬೇಕು' ಎಂದು ಕೋರಿ ರಿಟ್ ಅರ್ಜಿಯ ವಿಚಾರಣೆ ನಡೆಸಿ ಆರೋಪಕ್ಕೆ ಸಂಬಂಧಿಸಿದ ದಾಖಲೆಗಳನ್ನು ಪರಿಶೀಲನೆಗೆ ಒಪ್ಪಿಸುವಂತೆ ವಿಚಾರಣಾ ನ್ಯಾಯಾಲಯಗಳಿಗೆ ಹೈಕೋರ್ಟ್ ನಿರ್ದೇಶಿಸಿದೆ.

'ಕೃತ್ಯ ಎಸಗಿರುವುದಾಗಿ ಒಪ್ಪಿಕೊಳ್ಳುತ್ತಿರುವ ಆರೋಪಿಗಳು, ಆ ಸಂಬಂಧ ಮಾಹಿತಿಗಳನ್ನು ಮುಚ್ಚಿಡುತ್ತಿದ್ದಾರೆ. ಅವರಿಂದ ಮತ್ತಷ್ಟು ಮಾಹಿತಿ ಕಲೆಹಾಕಬೇಕು. ಜಾಮೀನು ನೀಡಬಾರದು' ಎಂದು ಅಧಿಕಾರಿಗಳು ಮನವಿ ಮಾಡಿದ್ದಾರೆ. 'ಹತ್ಯೆಗೆ ಬಳಸಿರುವ ಶಸ್ತ್ರವನ್ನು ಪತ್ತೆ ಮಾಡಬೇಕು. ಬೈಕ್ ಜಪ್ತಿ ಮಾಡಬೇಕು. ಆರೋಪಿಗಳು ಹೊರ ರಾಜ್ಯ ಹಾಗೂ ಹೊರ ಜಿಲ್ಲೆಯವರಾಗಿದ್ದು, ಜಾಮೀನು ಸಿಕ್ಕರೆ ತಲೆಮರೆಸಿಕೊಳ್ಳುವ ಸಾಧ್ಯತೆ ಇದೆ' ಎಂದಿದ್ದಾರೆ. ಆರೋಪಿಗಳಿಗೆ ಜಾಮೀನು ಕೊಡಿಸಲು ಗರಿಷ್ಟ ಪ್ರಯತ್ನ ಮಾಡಲಾಗುವುದು. ಆರೋಪಿಗಳಿಗೆ ಜಾಮೀನು ಸಿಗದಂತೆ ಸರಕಾರ ದೃಢ ಕ್ರಮ ವಹಿಸಬೇಕಾಗಿದೆ.

ಗೌರಿ ಬಳಿಕ, ಸಾಹಿತಿ ಪ್ರೊ. ಕೆ.ಎಸ್.ಭಗವಾನ್ ಹಾಗೂ ಗಿರೀಶ್ ಕಾರ್ನಾಡ್ ಅವರನ್ನು ಸರದಿಯಲ್ಲಿ ಹತ್ಯೆ ಮಾಡಲು ಆರೋಪಿಗಳು ಸಂಚು ರೂಪಿಸಿದ್ದರು. "ಹಿಂದೂ ಧರ್ಮ ಹಾಗೂ ದೇವರುಗಳ ಬಗ್ಗೆ ಅವಹೇಳನಕಾರಿಯಾಗಿ ಮಾತನಾಡುವ" ಸಾಹಿತಿಗಳು ಹಾಗೂ ವಿಮರ್ಶಕರನ್ನು ಹತ್ಯೆ ಮಾಡಲೆಂದು ತಂಡಗಳು ಹುಟ್ಟಿಕೊಂಡಿದ್ದು, ಅದರ ಸದಸ್ಯರು ಐದು ರಾಜ್ಯಗಳಲ್ಲಿದ್ದಾರೆ ಎಂಬ ಸಂಗತಿ ತನಿಖೆಯಲ್ಲಿ ಗೊತ್ತಾಗಿದೆ. 'ಕರ್ನಾಟಕ, ಗೋವಾ, ಮಧ್ಯಪ್ರದೇಶ, ಗುಜರಾತ್ ಹಾಗೂ ಮಹಾರಾಷ್ಟ್ರದಲ್ಲಿರುವ ಕೆಲ ಯುವಕರು ಈ ತಂಡಗಳಲ್ಲಿ ಗುರುತಿಸಿಕೊಂಡಿದ್ದಾರೆ. ಅಮೋಲ್ ಕಾಳೆಯೇ ಸಂಚಿನ ಸೂತ್ರಧಾರ. 'ಕರ್ನಾಟಕದ ವ್ಯಕ್ತಿಯೇ ಆತನಿಗೆ ಸಾಹಿತಿಗಳು, ಸ್ವಾಮೀಜಿಗಳು ಸೇರಿದಂತೆ ರಾಜ್ಯದ ಹತ್ತು ಮಂದಿಯ ಹಿಟ್ ಲಿಸ್ಟ್' ತಯಾರಿಸಿ ಕೊಟ್ಟಿದ್ದಾನೆ. ನಂತರ ಅಮೋಲ್ ಬೇರೆ ರಾಜ್ಯಗಳ ಇನ್ನೂ 16 ಮಂದಿ ಚಿಂತಕರ ಹೆಸರುಗಳನ್ನು ಆ ಪಟ್ಟಿಗೆ ಸೇರಿಸಿಕೊಂಡಿದ್ದಾನೆಂದೂ ತನಿಖೆಯಲ್ಲಿ ಗೊತ್ತಾಗಿದೆ.

ಈವರೆಗಿನ ತನಿಖೆ ದೃಢವಾಗಿ ಮುಂದುವರೆದರೆ ಗೌರಿ ಹಂತಕರು ಮಾತ್ರವಲ್ಲ, ಅವರ ಹಿಂದಿರುವ ಪಿತೂರಿಯನ್ನು ಬಯಲು ಮಾಡುವ ಸಾಧ್ಯತೆ ಹೊಂದಿದೆ. ಅಲ್ಲದೆ, ಇತರ ಮೂರು ಹತ್ಯೆಗಳ ಮೇಲೂ ಬೆಳಕು ಚೆಲ್ಲುವ ಸಾಧ್ಯತೆ ಹೊಂದಿದೆ. ಇದನ್ನು ಆಗದಂತೆ ತಡೆಯುವ ಶಕ್ತಿಗಳು ಬಲಿಷ್ಟವಾಗಿದ್ದು, ಇದು ರಾಷ್ಟ್ರೀಯ ಮಹತ್ವ ಹೊಂದಿದ್ದು, ಹೊಸ ಮೈತ್ರಿ ಸರಕಾರಕ್ಕೆ ಇದು ಅಗ್ನಿ ಪರೀಕ್ಷೆಯಾಗಲಿದೆ.

ಬೆಂಗಳೂರಿಗೆ ಲಿಂಗನಮಕ್ಕಿ ನೀರು

ನಗರಕ್ಕೆ ಲಿಂಗನಮಕ್ಕಿ ಜಲಾಶಯದಿಂದ ನೀರು ಪೂರೈಸುವ ಬಗ್ಗೆ ವಿಸ್ತೃತ ಯೋಜನಾ ವರದಿ ಸಿದ್ಧಪಡಿಸಲು ಸೂಚಿಸಿದ್ದೇನೆ ಎಂದು ಜಿ.ಪರಮೇಶ್ವರ ಘೋಷಿಸಿದ್ದಾರೆ. 'ಲಿಂಗನಮಕ್ಕಿ ಜಲಾಶಯದಲ್ಲಿ ಸರಾಸರಿ 151 ಟಿಎಂಸಿ ಅಡಿ ನೀರಿನ ಸಂಗ್ರಹವಿರುತ್ತದೆ. ನಗರದ ನೀರಿನ ಬೇಡಿಕೆ ಪೂರೈಸಲು ಈ ಜಲಾಶಯದ ನೀರು ಬಳಸಬಹುದು ಎಂದು ಜಲಮಂಡಳಿ ರಚಿಸಿದ್ದ ಬಿ.ಎನ್.ತ್ಯಾಗರಾಜ ಸಮಿತಿ 2015ರಲ್ಲಿ ಶಿಫಾರಸು ಮಾಡಿತ್ತು. ಕಾವೇರಿ ಐದನೇ ಹಂತದ ಯೋಜನೆ ಅನುಷ್ಠಾನ ಮಾಡುತ್ತಿದ್ದೇವೆ. ಅಲ್ಲಿಗೆ ನಗರಕ್ಕೆ ಕಾವೇರಿ ನೀರಿನ ಪಾಲು ಮುಗಿದು ಹೋಗುತ್ತಿದೆ. ಬಳಿಕ ಪರ್ಯಾಯ ಮೂಲಗಳತ್ತ ಗಮನ ಹರಿಸಬೇಕಿದೆ. ಲಿಂಗನಮಕ್ಕಿ, ಎತ್ತಿನ ಹೊಳೆಯಿಂದ ನೀರು ತರಲು ಯೋಜಿಸಲಾಗಿದೆ. ಎತ್ತಿನಹೊಳೆಯ 2 ಟಿಎಂಸಿ ಅಡಿ ನೀರನ್ನು ಎತ್ತಿನಹೊಳೆಗೆ ಹರಿಸಲಾಗುತ್ತದೆ. ಬಳಿಕ ನಗರಕ್ಕೆ ಪೂರೈಕೆ ಮಾಡಲಾಗುತ್ತದೆ' ಎಂದೂ ಅವರು ಹೇಳಿದ್ದಾರೆ.

ಆದರೆ, ಬೆಂಗಳೂರು ನಗರಕ್ಕೆ ಲಿಂಗನಮಕ್ಕಿ ಜಲಾಶಯದಿಂದ ಕುಡಿಯುವ ನೀರು ಪೂರೈಕೆ ಯೋಜನೆ ಕೈಗೆತ್ತಿಕೊಳ್ಳುವ ಸರ್ಕಾರದ ಆಲೋಚನೆ ಮುರ್ಖತನದ ಪರಮಾವಧಿ ಎಂದು ಶಿವಮೊಗ್ಗದಲ್ಲಿ ನಡೆದ ಸಭೆಯೊಂದರಲ್ಲಿ ಪರಿಸರವಾದಿಗಳು, ಸಾಹಿತಿಗಳು ಟೀಕಿಸಿದ್ದಾರೆ. ಜಲಾಶಯ ಸಂಪೂರ್ಣ ಭರ್ತಿಯಾದರೆ 151 ಟಿಎಂಸಿ ಅಡಿ ನೀರು ಸಂಗ್ರಹವಾಗುತ್ತದೆ. ಈ ನೀರಿನಿಂದ 1,035 ಮೆಗಾವಾಟ್ ವಿದ್ಯುತ್ ಉತ್ಪಾದಿಸಲಾಗುತ್ತದೆ. 50 ಟಿಎಂಸಿ ನೀರನ್ನು ಕುಡಿಯುವ ಯೋಜನೆಗೆ ಬಳಸಿಕೊಂಡರೆ 150ರಿಂದ 200 ಮೆಗಾವಾಟ್ ವಿದ್ಯುತ್ ಉತ್ಪಾದನೆ ಕುಂಠಿತವಾಗುತ್ತದೆ ಎನ್ನುವುದು ಅವರ ಅಭಿಪ್ರಾಯ. ಶರಾವತಿ ನದಿಗೆ ಲಿಂಗನಮಕ್ಕಿ ಬಳಿ ಜಲಾಶಯ ಕಟ್ಟಲು 12 ಸಾವಿರ ಎಕರೆ ಕಾಡು ನಾಶ ಮಾಡಲಾಗಿತ್ತು. ಸಾವಿರಾರು ಕುಟುಂಬಗಳನ್ನು ಒಕ್ಕಲೆಬ್ಬಿಸಲಾಗಿತ್ತು. ನೆಲೆ ಕಳೆದುಕೊಂಡವರಿಗೆ ಇಂದಿಗೂ ಸೂಕ್ತ ನೆಲೆ, ಪರ್ಯಾಯ ವ್ಯವಸ್ಥೆ ಕಲ್ಪಿಸಲು ಸಾಧ್ಯವಾಗಿಲ್ಲ. ಇಲ್ಲಿಂದ ಬೆಂಗಳೂರಿಗೆ ಸುಮಾರು 400 ಕಿ.ಮೀ ದೂರವಿದೆ. ಪೈಪ್ ಲೈನ್ ಅಳವಡಿಸಲು, ಕಾಲುವೆ ತೋಡಲು ಮತ್ತೆಷ್ಟು ಮರಗಳ ಮಾರಣಹೋಮ ನಡೆಸಬೇಕು ಎಂದು ಸಾಹಿತಿ ನಾ. ಡಿಸೋಜ ಪ್ರಶ್ನಿಸಿದರು. 'ನಾನು ಚಿಕ್ಕವನಿದ್ದಾಗ ಜೋಗದ ಭಾಗದಲ್ಲಿ 300ರಿಂದ 350 ಇಂಚು ಮಳೆಯಾಗುತ್ತಿತ್ತು. ಈಗ ಅದು 100ರ ಒಳಗೆ ಇದೆ. ಇರುವ ಕಾಡು ಉಳಿಸಿಕೊಳ್ಳದಿದ್ದರೆ ನಾಡಿಗೆ ಉಳಿಗಾಲವಿಲ್ಲ. ಈ ಯೋಜನೆ ಜಾರಿಗೆ ಯೋಚಿಸುವ ಸರ್ಕಾರ ಮೂರ್ಖ ಸರ್ಕಾರ' ಎಂದು ಡಿಸೋಜ ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಇಡೀ ದಕ್ಷಿಣ ಭಾರತಕ್ಕೆ ಜಲಮೂಲ ಪಶ್ಚಿಮಘಟ್ಟ ಪ್ರದೇಶ. ಈ ಭಾಗದಲ್ಲೇ ಮಳೆ ಕೊರತೆ ಎದುರಾಗಿದೆ. ಕಳೆದ 10 ವರ್ಷಗಳಲ್ಲಿ ಮೂರು ಬಾರಿ ಮಾತ್ರ ಲಿಂಗನಮಕ್ಕಿ ಭರ್ತಿಯಾಗಿದೆ. ಜಲಾಶಯದ ಸರಾಸರಿ ನೀರಿನ ಮಟ್ಟ 151 ಟಿಎಂಸಿ ಇದ್ದರೂ, ಹೂಳು ತುಂಬಿರುವ ಕಾರಣ ವಾಸ್ತವದಲ್ಲಿ ಅಷ್ಟು ನೀರಿಲ್ಲ ಎಂದು ಪಶ್ಚಿಮಘಟ್ಟ ಕಾರ್ಯಪಡೆ ಮಾಜಿ ಅಧ್ಯಕ್ಷ ಅನಂತ ಹೆಗಡೆ ಆಶಿಸರ ಎಚ್ಚರಿಸಿದ್ದಾರೆ. ಬೆಂಗಳೂರಿಗೆ ಈ ನೀರು ತೆಗೆದುಕೊಂಡು ಹೋದರೆ ವಿದ್ಯುತ್ ಘಟಕಗಳು ಸ್ಥಗಿತವಾಗುತ್ತವೆ. ಸಾವಿರಾರು ಮರಗಳು ನಾಶವಾಗುತ್ತವೆ. ಇದು ಅತ್ಯಂತ ವೆಚ್ಚದಾಯಕ ಯೋಜನೆ ಸಹ ಆಗಿದೆ ಎಂದು ಆಕ್ಷೇಪ ವ್ಯಕ್ತಪಡಿಸಿದ್ದಾರೆ.

ಸರಕಾರ ಈ ಯೋಜನೆಯ ಸಾಧ್ಯಾಸಾಧ್ಯತೆ ಮತ್ತು ಪರಿಸರ ದುಷ್ಪರಿಣಾಮಗಳನ್ನು ವಿವರವಾಗಿ ಪರಿಶೀಲಿಸಿ ಮುಂದುವರೆಯಬೇಕಾಗಿದೆ.

ಏರ್ ಇಂಡಿಯಾ ಮಾರಲಾಗಲಿಲ್ಲವೇ? ಕೋಲ್ ಇಂಡಿಯಾ ಮಾರೋಣ!

ಭಾರತದ ರಾಷ್ಟ್ರೀಯ ವಿಮಾನಯಾನ ಸಂಸ್ಥೆ ಏರ್ ಇಂಡಿಯಾದ 76% ಶೇರುಗಳನ್ನು ಮಾರಾಟ ಮಾಡಿ ಖಾಸಗೀಕರಣ ಮಾಡುವ ನಿರ್ಧಾರವನ್ನು ಅಚ್ಛೇ ದಿನ್ ಸರಕಾರ ಕೈಗೊಂಡಿತ್ತು. ಆದರೆ ಖರೀದಿಸಲು ಬಿಡ್‌ಗಳು ಎರಡೆರಡು ಬಾರಿ ಅವಧಿ ವಿಸ್ತರಿಸಿದರೂ ಬರದಿರುವುದರಿಂದ ಅದರ ಮಾರಾಟದ ವಿಚಾರವನ್ನು ಸದ್ಯಕ್ಕೆ ಮುಂದೂಡಲಾಗಿದೆಯಂತೆ. ಆದರೆ ಈಗ ಅದರ ಸ್ಥಾನದಲ್ಲಿ ಕೋಲ್ ಇಂಡಿಯಾದ ಶೇರುಗಳ ಮಾರಾಟದ ಯೋಚನೆ ಮಾಡಲಾಗುತ್ತಿದೆಯಂತೆ(ನ್ಯೂಸ್‌ಕ್ಲಿಕ್.ಇನ್, ಜೂನ್19).

ಕೋಲ್ ಇಂಡಿಯಾ ಜಗತ್ತಿನಲ್ಲೇ ಅತಿ ದೊಡ್ಡ ಕಲ್ಲಿದ್ದಲು ಗಣಿಗಾರಿಕೆಯ ಕಂಪನಿ ಎನಿಸಿಕೊಂಡಿದೆ. ಇದರ ಮೇಲೇನೂ ಏರ್ ಇಂಡಿಯಾದಂತೆ ಭಾರೀ ಸಾಲದ ಹೊರೆ(ಇದು ಕೂಡ ಈ ಹಿಂದೆ ಈ ಪತ್ರಿಕೆಯಲ್ಲಿ ಹೇಳಿರುವಂತೆ ಸರಕಾರದ ಖಾಸಗೀ-ಪರ ಮನೋಭಾವದ ಪರಿಣಾಮ) ಇದರ ಮೇಲಿಲ್ಲ. ಆದರೂ ಶೇರು ಮಾರಾಟದ ಯೋಚನೆ ಏಕೇ?

ಏಕೆಂದರೆ ಬಜೆಟ್‌ನಲ್ಲಿ ಈ ವರ್ಷ 80,000 ಕೋಟಿ ರೂ.ಗಳನ್ನು ಸಾರ್ವಜನಿಕ ವಲಯದ ಘಟಕಗಳ ಶೇರು ಮಾರಾಟದಿಂದ, ಅಂದರೆ ರಾಷ್ಟ್ರೀಯ ಸೊತ್ತುಗಳ ಮಾರಾಟದಿಂದ ಪಡೆಯುವ ಅಂದಾಜು ಹಾಕಲಾಗಿತ್ತು. ಏರ್ ಇಂಡಿಯಾ ಮಾರಾಟವಾಗದಿದ್ದರೆ ಅದನ್ನು ತುಂಬಲು ದೇಶದ ಇನ್ನೊಂದು ಸೊತ್ತನ್ನು ಮಾರಬೇಕು ತಾನೇ? ಆದ್ದರಿಂದ ಇನ್ನೊಂದು ದೊಡ್ಡ ಸೊತ್ತಾದ ಕೋಲ್ ಇಂಡಿಯಾದ ಮೇಲೆ ಕಣ್ಣು ಬಿದ್ದಿದೆ.

ಸಾರ್ವಜನಿಕ ಸೊತ್ತುಗಳನ್ನು ಅತ್ಯಂತ ಹೆಚ್ಚಿನ ಪ್ರಮಾಣದಲ್ಲಿ ಖಾಸಗಿಯವರಿಗೆ ವಹಿಸಿಕೊಟ್ಟಿರುವ 'ಹೆಮ್ಮೆಯ ಸಾಧನೆ' ಈ ಅಚ್ಛೇ ದಿನ್ ಸರಕಾರದ್ದು. ಈ ನಾಲ್ಕು ವರ್ಷಗಳಲ್ಲಿ ಅದು ಒಟ್ಟು 1.96ಲಕ್ಷ ಕೋಟಿ ರೂ.ಗಳ ರಾಷ್ಟ್ರೀಯ ಅಸ್ತಿಗಳನ್ನು ಮಾರಿಕೊಂಡಿದೆ. ನವ-ಉದಾರವಾದೀ ಧೋರಣೆಗಳ ಹರಿಕಾರನೆನಿಸಿದ ಆರ್ಥಿಕ ತಜ್ಞನ ನೇತೃತ್ವದ ಯುಪಿಎ ಸರಕಾರ ಹತ್ತು ವರ್ಷಗಳಲ್ಲಿ ಮಾಡ(ರ)ಲಾಗದ್ದಷ್ಟನ್ನು ಮಾರಿ ಕೊಂಡಿರುವ ದಾಖಲೆ ಇವರದ್ದು.

ಈಗಾಗಲೇ, ಕಾರ್ಮಿಕ ಸಂಘಟನೆಗಳ ನೀತಿಬದ್ಧ ವಿರೋಧವನ್ನೂ ಲೆಕ್ಕಿಸದೆ, ಕಲ್ಲಿದ್ದಲು ಗಣಿಗಳ ಕಾಯ್ದೆಗೆ 2015ರಲ್ಲಿ ತಿದ್ದುಪಡಿ ತಂದು ಕಲ್ಲಿದ್ದಲು ಬ್ಲಾಕುಗಳನ್ನು ವಿವಿಧ ಖಾಸಗಿ ಕಂಪನಿಗಳಿಗೆ ಗಣಿಗಾರಿಕೆಗೆ ಹರಾಜಿನಲ್ಲಿ ಹಂಚುವ ಕೆಲಸ ಆರಂಭವಾಗಿದೆ. ಈ ಮೂಲಕ ಕ್ರಮೇಣ ಈ ವಲಯ ಖಾಸಗಿಯವರ ಪಾಲಾಗುತ್ತದೆ, ಇಲ್ಲಿ ಕೆಲಸ ಮಾಡುವ 3.5 ಲಕ್ಷಕ್ಕೂ ಹೆಚ್ಚು ಮಂದಿ ಕಾರ್ಮಿಕರ ಬದುಕು ಮೂರಾಬಟ್ಟೆಯಾಗುತ್ತದೆ ಎಂಬುದು ಕಾರ್ಮಿಕ ಸಂಘಗಳ ಪ್ರಧಾನ ಆತಂಕವಾಗಿದ್ದರೆ, ಈ ನೈಸರ್ಗಿಕ 'ರಾಷ್ಟ್ರೀಯ ಸಂಪತ್ತು ಖಾಸಗಿ ಲೂಟಿಗೆ ಪಕ್ಕಾಗುತ್ತದೆ ಎಂಬ ಆತಂಕವೂ ಅದರ ಜತೆಗಿದೆ.

2015 ರಲ್ಲಿ ಈ ಸರಕಾರ ತಿದ್ದುಪಡಿ ತಂದಾಗ ಸಂಘ ಪರಿವಾರಕ್ಕೆ ಸೇರಿದ ಬಿಎಂಎಸ್ ಕೂಡ ಸೇರಿದಂತೆ ಎಲ್ಲ ಕೇಂದ್ರೀಯ ಕಾರ್ಮಿಕ ಸಂಘಟನೆಗಳು ಪ್ರತಿಭಟನಾ ಮುಷ್ಕರ ನಡೆಸಿದ್ದವು. ಈಗ ಮತ್ತೆ ಈ ರಾಷ್ಟ್ರೀಯ ಸಂಪತ್ತು ಖಾಸಗಿಯವರ ಲಂಗುಲಗಾಮಿಲ್ಲದ ದುರುಪಯೋಗಕ್ಕೆ ಒಳಗಾಗದಂತೆ ಮಾಡಲು ಮತ್ತು 3ಲಕ್ಷಕ್ಕೂ ಹೆಚ್ಚು ಕಲ್ಲಿದ್ದಲು ಕಾರ್ಮಿಕರ ಜೀವನಾಧಾರವನ್ನು ಉಳಿಸಿಕೊಳ್ಳಲು ಪ್ರತಿಭಟನೆಗಿಳಿಯುತ್ತಿದ್ದಾರೆ.



ರದ್ದಾದ ನೋಟುಗಳ ಸಂಗ್ರಹದಲ್ಲಿ ದಾಖಲೆ ನಿರ್ಮಿಸಿದ 'ಮಾದರಿ' ರಾಜ್ಯದ ಬ್ಯಾಂಕ್

ಒಂದು ಜಿಲ್ಲಾ ಸಹಕಾರಿ ಬ್ಯಾಂಕ್ ನೋಟುರದ್ದತಿಯ ಮೊದಲ ಐದು ದಿನಗಳಲ್ಲೇ 745.59 ಕೋಟಿ ರೂ. ಮೊತ್ತದ ರದ್ದಾದ 500ರೂ. ಮತ್ತು 1000ರೂ. ನೋಟುಗಳನ್ನು ಸಂಗ್ರಹಿಸಿದೆ ಎಂದು ಮಾಹಿತಿ ಹಕ್ಕು ಕಾಯ್ದೆಯ ಅಡಿಯಲ್ಲಿ ಸಿಕ್ಕ ಮಾಹಿತಿ ಹೇಳುತ್ತದಂತೆ. ಅತಿ ಹೆಚ್ಚು ರದ್ದಾದ ನೋಟುಗಳನ್ನು ಸಂಗ್ರಹಿಸಿದ ಕೀರ್ತಿ ಇದ್ದರದ್ದು. ಇದರ ಹೆಗ್ಗಳಿಕೆ ಇಷ್ಟೇ ಅಲ್ಲ. ನಮ್ಮ ದೇಶದ ಈಗಿನ ಆಳುವ ಪಕ್ಷದ ರಾಷ್ಟ್ರಾಧ್ಯಕ್ಷರು ಇದರ ಒಬ್ಬ ನಿರ್ದೇಶಕರು, ಈಗಲೂ. ಇದು ಮುಂಬೈನ ಒಬ್ಬ ಆರ್‌ಟಿಐ ಕಾರ್ಯಕರ್ತ ಸಂಗ್ರಹಿಸಿದ ಮಾಹಿತಿ.

ಈ ಬ್ಯಾಂಕಿನ ಹೆಸರು ಅಹಮದಾಬಾದ್ ಜಿಲ್ಲಾ ಸಹಕಾರಿ ಬ್ಯಾಂಕ್.

ನೋಟುರದ್ದತಿಯ ಆರನೇ ದಿನ, ಅಂದರೆ ನವಂಬರ್ 14, 2016 ರಂದು ಸಹಕಾರಿ ಬ್ಯಾಂಕುಗಳು ರದ್ದಾದ ನೋಟುಗಳನ್ನು ಸ್ವೀಕರಿಸುವಂತಿಲ್ಲ ಎಂಬ ಆ ದಿನಗಳಲ್ಲಿ ಬಂದ ಆರ್‌ಬಿಐ ಸೂಚನೆಗಳ ದೊಡ್ಡ ಪಟ್ಟಿಯಲ್ಲಿ ಒಂದು ಹೇಳಿತ್ತು. ಇಲ್ಲವಾದರೆ ಈ ಬ್ಯಾಂಕ್ ಇನ್ನೂ ದೊಡ್ಡ ದಾಖಲೆ ನಿರ್ಮಿಸುತ್ತಿತ್ತೇನೋ.

ಅಂದ ಹಾಗೆ ಸಹಕಾರಿ ಬ್ಯಾಂಕುಗಳು ರದ್ದಾದ ನೋಟುಗಳನ್ನು ಸ್ವೀಕರಿಸಬಾರದು ಎಂದು ನಿಷೇಧ ಪ್ರಕಟಿಸಲು ಕಾರಣ ಅವು ಕಪ್ಪು ಹಣವನ್ನು ಬಿಳಿ ಮಾಡುವ ಸಾಧನಗಳಾಗಿವೆ ಎಂದು ಆರ್‌ಬಿಐಗೆ ಅನಿಸಿದ್ದರಿಂದ ಎನ್ನಲಾಗಿದೆ. ಅಂತಹ ಸಂದೇಹ ಇಂತಹ 'ದಾಖಲೆ' ಬ್ಯಾಂಕುಗಳನ್ನು ನೊಡಿಯೇ ಬಂದಿತ್ತೋ ತಿಳಿದಿಲ್ಲ.

ಇನ್ನೊಂದು ಗಮನಾರ್ಹ ಸಂಗತಿಯೆಂದರೆ ಈ ಸುದ್ದಿಯನ್ನು ಪ್ರಕಟಿಸಿದ್ದ ಟೈಮ್ಸ್ ನೌ, ನ್ಯೂಸ್18, ಫಸ್ಟ್‌ಪೋಸ್ಟ್ ಮತ್ತು ನ್ಯೂ ಇಂಡಿಯನ್ ಎಕ್ಸ್‌ಪ್ರೆಸ್ ಜೂನ್ 21ರಂದು ಈ ಸುದ್ದಿಗಳನ್ನು ತಮ್ಮ ವೆಬ್ ತಾಣಗಳಿಂದ ತೆಗೆದಿವೆ. ಅದಕ್ಕೆ ಕಾರಣಗಳನ್ನೇನೂ ಕೊಟ್ಟಿಲ್ಲ. ಅವು ಸುಳ್ಳು ಸುದ್ದಿಗಳು ಎಂದೇನೂ ಕೂಡ ಹೇಳಿಲ್ಲ. ನ್ಯೂಸ್18 ಮತ್ತು ಫಸ್ಟ್‌ಪೋಸ್ಟ್ ಅಂಬಾನಿ ಒಡೆತನದ ಮಾಧ್ಯಮಗಳು. 'ಸಾಫ್ ನಿಯತ್'ನ ಮತ್ತೊಂದು ಅಮೋಘ ಉದಾಹರಣೆ!

24 'ಚಿಂತಾಮುಕ್ತ' ರೈತರೊಂದಿಗೆ ಪ್ರಧಾನಿಗಳ ವೀಡಿಯೋ ಬಾತ್

'ಪ್ರಧಾನ ಸೇವಕ'ರಾಗಿ ನಾಲ್ಕು ವರ್ಷಗಳ ತಮ್ಮ ಸಾಧನೆಯ ಬಗ್ಗೆ ಪ್ರಧಾನಿಗಳು ವಿವಿಧ ವಿಭಾಗಗಳ ಜನಗಳೊಂದಿಗೆ 'ಸಂಭಾಷಣೆ' ನಡೆಸುವ ಕಾರ್ಯಕ್ರಮ ಹಾಕಿಕೊಂಡಿದ್ದಾರೆ. ಈ ಸರಣಿಯಲ್ಲಿ ರೈತರೊಂದಿಗಿನ ಸಂಭಾಷಣೆ ಜೂನ್ 20ರಂದು ನಡೆದಿದೆ. ಒಂಭತ್ತು ರಾಜ್ಯಗಳ 24 ರೈತರೊಂದಿಗೆ 'ಸಂಭಾಷಣೆ'ಯಲ್ಲಿ ಅವರು ಕೃಷಿರಂಗದಲ್ಲಿ ತಮ್ಮ ಸಾಧನೆಗಳ ಬಗ್ಗೆ ತಾವೇ ಬೆನ್ನು ತಟ್ಟಿಕೊಂಡರು, ದೇಶದ ರೈತರು ತಮ್ಮ ನಾಲ್ಕು ವರ್ಷಗಳ ಪ್ರಯತ್ನಗಳಿಂದಾಗಿ 'ಚಿಂತಾಮುಕ್ತ'ರಾಗಿಯೇ ಬಿಟ್ಟಿದ್ದಾರೆ ಎಂಬ ಅಂತಿಮ ಫಲಿತಾಂಶವನ್ನೂ ಪ್ರಕಟಿಸಿದರು. ಆದರೂ ಕೃಷಿ ಆದಾಯಗಳನ್ನು ದ್ವಿಗುಣಗೊಳಿಸುವ ಬಗ್ಗೆ ಮಾತಾಡಿದರು. ಆ ಬಗ್ಗೆ ಆಶ್ವಾಸನೆಯನ್ನು ಪುನರುಚ್ಚರಿಸಿದರು. ಅಂದರೆ ಅದು ಮಾತ್ರ ಈಗಾಗಲೇ ಈಡೇರಿಲ್ಲ ಎಂದು ಭಾವಿಸಬೇಕಾಗಿದೆ. ಈ 24 ರೈತರು ನಿಜವಾಗಿಯೂ 'ಚಿಂತಾಮುಕ್ತ'ರೇ ಆಗಿದ್ದಿರಬೇಕು, ಕಳೆದ ಕೆಲವು ತಿಂಗಳಿಂದ ಸಾವಿರಾರು ರೈತರು ಬೀದಿಗಿಳಿದು ಕೇಳುತ್ತಿರುವ ಯಾವ ಪ್ರಶ್ನೆಯನ್ನೂ ಅವರು ಕೇಳಲಿಲ್ಲ. ರೈತರೇಕೆ ತಮ್ಮ ಬೆಳೆಗಳನ್ನು ಬೀದಿಗಳಲ್ಲಿ ಚೆಲ್ಲುತ್ತಿದ್ದಾರೆ, ಬರಿಗಾಲಲ್ಲಿ, ಸುಡುಬಿಸಿಲಿನಲ್ಲಿ 700 ಕಿ.ಮೀ. ನಡೆಯುತ್ತಿದ್ದಾರೆ ಏಕೆ, ಪೋಲೀಸರ ಲಾಠಿ-ಗುಂಡುಗಳನ್ನು ಎದುರಿಸುತ್ತಿದ್ದಾರೆ ಎಂದೇನೂ ಕೇಳಲಿಲ್ಲ. ಒಬ್ಬರು ಮಾತ್ರವೇ 'ಕೃಷಿ ಆದಾಯ'ದ ಬಗ್ಗೆ ತುಸು ಅಳುಕಿನಿಂದಲೇ ಮಾತನಾಡಿದರು. ಕೃಷಿ ಲಾಗುವಾಡುಗಳ ಬೆಲೆಗಳು ಏರುತ್ತಿವೆ, ತಮ್ಮ ಆದಾಯ ಏರುತ್ತಿಲ್ಲ ಎಂದರು. ಆಗ ಪ್ರಧಾನಿಗಳು ಸರಕಾರದ ಮುತುವರ್ಜಿಗಳು ರೈತರಿಗೆ ಸಹಾಯ ಮಾಡುತ್ತಿವೆ ಎಂದು ಹೇಳಿ ಬೇರೆ ಯಾರಿಗಾದರೂ ಬೇರೇನಾದರೂ ಪ್ರಶ್ನೆಗಳಿವೆಯೆ ಎಂದು ಕೇಳಿ ಪ್ರಶ್ನೆಗಳಿಲ್ಲ ಎಂಬ ತೀರ್ಮಾನಕ್ಕೆ ಬಂದು 'ಸಂಭಾಷಣೆ' ಮುಗಿಸಿದರು.

ಈ 'ಸಂಭಾಷಣೆ' ಅವರ ಇತರ ಸಂದರ್ಶನ-ಸಂಭಾಷಣೆಗಳಂತೆ 'ಪೂರ್ವಯೋಜಿತ', ಆಯ್ದ ಸಂದರ್ಶಕರೇ ಇರುವಂತೆ, ಈ 'ಚಿಂತಾಮುಕ್ತ' ಸಂಭಾಷಣಾಕಾರರೂ 'ಆರಿಸಿದವರೇ' ಆಗಿದ್ದಿರಬೇಕು ಎಂದು ರಾಜಕೀಯ ವೀಕ್ಷಕರು ಅಭಿಪ್ರಾಯ ಪಟ್ಟಿದ್ದಾರೆ.

ಈ ಬಗ್ಗೆ ಟಿಪ್ಪಣಿ ಮಾಡುತ್ತ ರೈತರ ಹೋರಾಟಗಳ ಜತೆಗಿರುವ ಒಬ್ಬ ಪ್ರಮುಖರಾದ ಯೋಗೇಂದ್ರ ಯಾದವ್ **"ಕಳೆದ ನಾಲ್ಕು ವರ್ಷಗಳಲ್ಲಿ ಪ್ರಧಾನಿಗಳು ಒಮ್ಮೆಯೂ ರೈತರ ಆತ್ಮಹತ್ಯೆಗಳ ಬಗ್ಗೆ ಚಕಾರವೆತ್ತಿಲ್ಲ. ಈ ಸಂಭಾಷಣೆಯಲ್ಲೂ ಎತ್ತಿಲ್ಲ"** ಎಂಬ ಸಂಗತಿಯತ್ತ ಗಮನ ಸೆಳೆದಿದ್ದಾರೆ.

ಈ 'ಸಂಭಾಷಣೆ' ನಡೆಯುತ್ತಿದ್ದಾಗ ತಮಿಳುನಾಡಿನಲ್ಲಿ 25 ರೈತರನ್ನು ಬಂಧಿಸಲಾಗುತ್ತಿತ್ತು. ಏಕೆಂದರೆ ಅವರು ಚೆನ್ನೈ-ಸೇಲಂ ಎಂಟು ಪಥಗಳ ಹೆದ್ದಾರಿಗೆ ರೈತರ ಭೂಮಿಯನ್ನು ಬಲವಂತದಿಂದ ಸ್ವಾಧೀನ ಪಡಸಿಕೊಳ್ಳುವುದನ್ನು ಪ್ರತಿಭಟಿಸುತ್ತಿದ್ದರು. "ನಾನೀಗ ತಿರುವಣ್ಣಾಮಲೈನಲ್ಲಿ ಈ ಪ್ರತಿಭಟನಾಕಾರರ ನಡುವಿನಿಂದಲೇ ಮಾತಾಡುತ್ತಿದ್ದೇನೆ. ಇದೀಗ ಬುಡಮಟ್ಟದ ವಾಸ್ತವತೆ" ಎಂದು ಅಖಿಲ ಭಾರತ ಕಿಸಾನ್ ಸಭಾದ ಜಂಟಿ ಕಾರ್ಯದರ್ಶಿ ವಿಜೂ ಕೃಷ್ಣನ್ ಈ 'ಸಂಭಾಷಣೆ'ಯೆಂಬ ಇವೆಂಟ್ ಬಗ್ಗೆ ಪ್ರತಿಕ್ರಿಯಿಸುತ್ತ ಹೇಳಿದರು.

ಇದು ಈ "ಸಂಭಾಷಣೆ'ಗಳ ಸರಣಿಯಲ್ಲಿ ಏಳನೇ ಇವೆಂಟ್ ಎನ್ನಲಾಗಿದೆ. ಇನ್ನೆಷ್ಟು ಇಂತಹ ಸರಕಾರೀ ವೆಚ್ಚದ 'ಇವೆಂಟ್'ಗಳು ಬರಲಿವೆ ಎಂದೇನೂ ತಿಳಿದಿಲ್ಲ.


ಐದನೇ ವರ್ಷಕ್ಕೂ ಕಾಲಿಟ್ಟ ದಾದ್ರಿ 'ಪರಂಪರೆ'

ಜೂನ್ 18ರಂದು ಉತ್ತರ ಪ್ರದೇಶದ ಹಾಪುರ್‌ನಲ್ಲಿ 45 ವರ್ಷದ ಖಾಸಿಮ್ ಎಂಬಾತನನ್ನು ಜನರ ಗುಂಪೊಂದು ಬಡಿದು ಸಾಯಿಸಿದೆ. ಜತೆಗಿದ್ದ 65 ವರ್ಷದ ಸಮೆಯ್‌ದ್ದಿನ್‌ನನ್ನು ತೀವ್ರವಾಗಿ ಗಾಯಗೊಳಿಸಿ ಸುಮಾರಾಗಿ ಅಂಗವಿಕಲನನ್ನಾಗಿಸಿದೆ ಎಂದು ವರದಿಯಾಗಿದೆ. ಗೋವಧೆಯ ಸುಳ್ಳು ವದಂತಿಯ ಮೇಲೆ ನಡೆದ ಮತ್ತೊಂದು ಭೀಕರ 'ಗೋರಕ್ಷಕ'ರ ಕೃತ್ಯ ಇದು ಎಂದು ಸಂತ್ರಸ್ತರ ಕುಟುಂಬದವರು ಹೇಳುತ್ತಾರೆ. ಆದರೆ ಪೋಲಿಸರು ಇದು ರಸ್ತೆಯಲ್ಲಿ ವಾಹನ ಅಪಘಾತದಿಂದಾಗಿ ಆದ ಘರ್ಷಣೆಯ ಪರಿಣಾಮ ಎಂದು ಹೇಳುತ್ತಿದ್ದಾರೆ. ಅದು ಬಡಿದು ಸಾಯಿಸಿದ ಘಟನೆ ಎಂದು ದಾಖಲಾಗದಂತೆ ಪ್ರಯತ್ನಿಸುತ್ತಿದ್ದಾರೆ

ಆದರೆ ಇದು ಇತ್ತೀಚೆಗೆ ಉತ್ತರಪದೇಶದ ಚುನಾವಣೆಗಳ ಫಲಿತಾಂಶಗಳಿಗೆ ಮುಯ್ಯಿ ಮತ್ತು ಮುಂದಿನ ವರ್ಷದ ಸಾರ್ವತ್ರಿಕ ಚುನಾವಣೆಗಳಿಗೆ 'ಸಿದ್ಧತೆ'ಯ ಲಕ್ಷಣಗಳನ್ನೇ ಹೆಚ್ಚಾಗಿ ಪ್ರದರ್ಶಿಸುತ್ತಿದೆ ಎನ್ನಲಾಗುತ್ತಿದೆ.

ಒಂದೇ ನಿರ್ಧಾರದಲ್ಲಿ ಎರಡು ವಿಫಲತೆಗಳು ಬಯಲು

ಜೂನ್ 19 ರಂದು ಜಮ್ಮು ಮತ್ತು ಕಾಶ್ಮೀರದ ಸಮ್ಮಿಶ್ರ ಸರಕಾರದಿಂದ ಬಿಜೆಪಿ ಹೊರಬಂದಿರುವುದು 2019 ರ ಸಾರ್ವತ್ರಿಕ ಚುನಾವಣೆಗಳ ಮೇಲೆ ಕಣ್ಣಿಟ್ಟು ಎಂಬ ಅಭಿಪ್ರಾಯಗಳು ವಿಶ್ಲೇಷಕರಿಂದ ಸಾರ್ವತ್ರಿಕವಾಗಿ ಕೇಳಬಂದಿವೆ. ಆದರೆ ತಮ್ಮ ಪಕ್ಷದ ಈ ನಿರ್ಧಾರದಲ್ಲಿ ಯಾವುದೇ ರಾಜಕೀಯ ಪರಿಗಣನೆಗಳು ಇರಲಿಲ್ಲ ಎಂದು ಮೂರು ವರ್ಷಗಳ ಹಿಂದೆ ಈ 'ಕಾಮನಬಿಲ್ಲು ಮೈತ್ರಿ'ಯನ್ನು ರೂಪಿಸಿದ ಮುಖ್ಯ ರೂವಾರಿ ಹೇಳಿದ್ದಾರೆ. ಭಯೋತ್ಪಾದನೆ ಹೆಚ್ಚುತ್ತಿದ್ದು ಅದನ್ನು ನಿಭಾಯಿಸಲು ರಾಜಕೀಯ ಮುಖಂಡತ್ವಕ್ಕೆ ಸಾಧ್ಯವಾಗುತ್ತಿಲ್ಲ ಎಂದನಿಸಿದ್ದರಿಂದ ರಾಷ್ಟ್ರೀಯ ಹಿತದೃಷ್ಟಿಯಿಂದ ಮತ್ತು ರಾಜ್ಯದ ಒಳಿತಿಗಾಗಿ ಈ ನಿರ್ಧಾರ ಕೈಗೊಳ್ಳಲಾಗಿದೆ ಎಂದು ಅವರು ಹೇಳಿದ್ದಾರೆ. ಈ 'ರಾಜಕೀಯ ಮುಖಂಡತ್ವ'ದಲ್ಲಿ ಅವರ ಪಕ್ಷವೂ ಸೇರಿದೆಯೇ ಗೊತ್ತಾಗಿಲ್ಲ.



ವ್ಯಂಗ್ಯಚಿತ್ರ: ಸಂದೀಪ್ ಅದ್ವರ್ಯು, ಟೈಂಸ್ ಆಫ್ ಇಂಡಿಯ

ಆದರೆ ಬಹಳಷ್ಟು ಮಂದಿಗೆ ಕಳೆದ ನಾಲ್ಕು ವರ್ಷಗಳ ಅಚ್ಛೇ ದಿನ್‌ಗಳ ಅನುಭವ ಈ ಪಕ್ಷದ 'ಸಾಫ್ ನಿಯತ್' ಬಗ್ಗೆ ನಂಬಿಕೆಯನ್ನು ಹುಟ್ಟಿಸಿಲ್ಲ. ನಂಬಿದ್ದವರೂ ಆ ಬಗ್ಗೆ ಪುನರಾಲೋಚನೆ ಮಾಡುತ್ತಿದ್ದಾರೆ. ಇದು ಟ್ವಿಟರ್‌ನಲ್ಲಿ ಚೆನ್ನಾಗಿ ವ್ಯಕ್ತಗೊಂಡಿದೆ.(ಉದಾ: ಸ್ಕ್ರಾಲ್.ಇನ್, ಜೂನ್ 22).

ಒಂದು ಸ್ಯಾಂಪಲ್ ನೋಡಿ:

ನೋಟುರದ್ಧತಿಯ ವೇಳೆಯಲ್ಲಿ ಬಿಜೆಪಿ
(ನವಂಬರ್ 2016) ನೋಟುರದ್ಧತಿ ಭಯೋತ್ಪಾದನೆಯ
ಬೆನ್ನು ಮುರಿದಿದೆ.
ಬಿಜೆಪಿ ಇಂದು (ಜೂನ್ 19, 2018)
ಕಣಿವೆಯಲ್ಲಿ ಭಯೋತ್ಪಾದನೆ ಹೆಚ್ಚಿರುವುದರಿಂದ ನಾವು
ಮೈತ್ರಿಯಿಂದ ಹೊರಬರಲು ನಿರ್ಧರಿಸಿದ್ದೇವೆ.
ಬಿಜೆಪಿ ತನ್ನ ಎರಡು ವಿಫಲತೆಗಳನ್ನು ಬಯಲು ಮಾಡಿಕೊಂಡಿದೆ.

ಕಳೆದ ವಾರ ಪ್ರಧಾನ ಮಂತ್ರಿಗಳು ಲೋಕಸಭೆ ಮತ್ತು ವಿಧಾನಸಭೆಗೆ ಏಕಕಾಲದಲ್ಲಿ ಚುನಾವಣೆ ನಡೆಸುವ ಬಗ್ಗೆ ವ್ಯಾಪಕ ಚರ್ಚೆಗಳು ನಡೆಯುಬೇಕು, ಸದಾ ಚುನಾವಣಾ ಗುಂಗಿನಲ್ಲಿ ಇರುವುದನ್ನು ತಪ್ಪಿಸಬೇಕು ಎಂದು ಮತ್ತೆ ಸೂಚಿಸಿದ್ದಾರೆ. -ಸುದ್ದಿ
ಹಿಂದೆ ಯಾವ ಪ್ರಧಾನಿಗೂ ಸದಾ ಚುನಾವಣಾ ಗುಂಗಿನಲ್ಲಿರುವ ಅಗತ್ಯ ಬಂದಿರಲಿಕ್ಕಿಲ್ಲವೇ?-ಒಂದು ಟಿಪ್ಪಣಿ



ವ್ಯಂಗ್ಯಚಿತ್ರ: ಸತೀಶ್ ಆಚಾರ್ಯ, ಕಾರ್ಟೂನಿಸ್ತಾನ್.

ಟ್ರಂಪ್ ಒಂದು ತೀರದಲ್ಲಿ, ಮಿಕ್ಕವರು ಇನ್ನೊಂದು ತೀರದಲ್ಲಿ



ಅಮೇರಿಕಾ ತುಳಿಯುವ ಹಾದಿಯನ್ನು ಟ್ರಂಪ್ ನಿರ್ಧರಿಸಿದ್ದಾರೆ. ಸರ್ಕಾರದ ವೆಚ್ಚಗಳನ್ನು ಹೆಚ್ಚಿಸುವ (ವಿತ್ತೀಯ ಕೊರತೆ) ಮೂಲಕ ಒಟ್ಟಾರೆ ಬೇಡಿಕೆ ಉತ್ತೇಜನಗೊಳ್ಳುವಂತೆ ಮಾಡುವುದು, ಮತ್ತು, ಅದೇ ಸಮಯದಲ್ಲಿ, ದೇಶದ ಆಂತರಿಕ ಮಾರುಕಟ್ಟೆಗೆ ರಕ್ಷಣೆ ಒದಗಿಸುವುದು ಅವರ ಉದ್ದೇಶ. ಇಂತಹ ಒಂದು ಕಾರ್ಯನೀತಿಯನ್ನು ಅಳವಡಿಕೊಳ್ಳುವ ಸಾಹಸವನ್ನು ಟ್ರಂಪ್ ಮಾತ್ರ ಮಾಡಬಹುದು, ಬಂಡವಾಳಶಾಹಿ ಜಗತ್ತಿನಲ್ಲಿ ಅಮೇರಿಕಾ ಹೊಂದಿರುವ ಸ್ಥಾನ–ಮಾನದಿಂದಾಗಿ. ಅಮೇರಿಕಾದ ಅರ್ಥವ್ಯವಸ್ಥೆಯ ಸಂದರ್ಭದಲ್ಲಿ ಟ್ರಂಪ್‌ರವರ ನೀತಿ ಯಶಸ್ವಿಯಾಗಿದೆ ಎಂಬುದು ಅನುಮಾನದ ವಿಷಯ. ಯಶಸ್ವಿಯಾಗಿದ್ದರೂ, ಅದು ಪೈಪೋಟಿಯ ಮೊದಲ ಹಂತದಲ್ಲಿ. ಮುಂದೆ ಟ್ರಂಪ್ ಕೈಗೊಳ್ಳುವ ಎಲ್ಲ ಏಟುಗಳಿಗೆ ಮಿಕ್ಕವರು ಪ್ರತಿ ಏಟು ಕೊಟ್ಟಾಗ ಅವರ ಯಶಸ್ಸು ಮಾಯವಾಗುತ್ತದೆ.

ಹಣಕಾಸು ಬಂಡವಾಳದ ಅಧಿನಾಯಕತ್ವವನ್ನು ಬಗ್ಗುಬಡಿಯುವ ಯೋಚನೆ ಇವರಾರಿಗೂ ಇಲ್ಲವಾದ್ದರಿಂದ ಬಂಡವಾಳಶಾಹಿಯ ಸಂರಚನಾತ್ಮಕ ಬಿಕ್ಕಟ್ಟು ಮುಂದುವರಿಯುತ್ತದೆ, ಮೇಲುನೋಟದಲ್ಲಿ ತದ್ವಿರುದ್ಧವಾಗಿ ಕಂಡರೂ ಸಹ.

–ಪ್ರೊ. ಪ್ರಭಾತ್ ಪಟ್ನಾಯಕ್

ಅವರ Trumph versus the Rest

ಲೇಖನದ ಭಾವಾನುವಾದ:**ಕೆ.ಎಂ.ನಾಗರಾಜ್**

ಅಮೇರಿಕಾ, ಕೆನಡಾ, ಬ್ರಿಟನ್, ಜರ್ಮನಿ, ಫ್ರಾನ್ಸ್, ಇಟಲಿ ಮತ್ತು ಜಪಾನ್ ದೇಶಗಳು, ಕೆಲವು ಸಮಸ್ಯೆಗಳ ಬಗ್ಗೆ ಸಮಾಲೋಚಿಸಲು, ಜಿ–7 ಎಂಬ ಹೆಸರಿನ ಒಂದು ಅನೌಪಚಾರಿಕ ಗುಂಪು ಕಟ್ಟಿಕೊಂಡಿವೆ. ಇತ್ತೀಚೆಗೆ, ಕೆನಡಾದಲ್ಲಿ ನಡೆದ ಈ ಗುಂಪಿನ ಶೃಂಗ ಸಭೆಯಲ್ಲಿ ಅಮೇರಿಕಾದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ತಳೆದ ನಿಲವು ಈ ಗುಂಪನ್ನು ಇಬ್ಭಾಗ ಮಾಡಿದೆ. ಬಂಡವಾಳಶಾಹಿ ಬಿಕ್ಕಟ್ಟಿನ ಸಂದರ್ಭದಲ್ಲಿ, ಅಮೇರಿಕಾ ಈಗ ಅನುಸರಿಸಲು ಹೊರಟಿರುವ ತನ್ನ ರಕ್ಷಣಾತ್ಮಕ ವ್ಯಾಪಾರ ನೀತಿಗಳಲ್ಲಿ ಅಲ್ಪ–ಸ್ವಲ್ಪ ಬದಲಾವಣೆ ಮಾಡಿಕೊಳ್ಳಲೂ ಟ್ರಂಪ್ ಒಪ್ಪದಿರುವುದು, ಬಂಡವಾಳಶಾಹಿ ದೇಶಗಳ ನಡುವೆ ಐಕ್ಯತೆ ಇಲ್ಲ ಎಂಬುದನ್ನು ಸೂಚಿಸುತ್ತದೆ. ಅಮೇರಿಕಾ ತುಳಿಯುವ ಹಾದಿಯನ್ನು ಟ್ರಂಪ್ ನಿರ್ಧರಿಸಿದ್ದಾರೆ. ಸರ್ಕಾರದ ವೆಚ್ಚಗಳನ್ನು ಹೆಚ್ಚಿಸುವ (ವಿತ್ತೀಯ ಕೊರತೆ) ಮೂಲಕ ಒಟ್ಟಾರೆ ಬೇಡಿಕೆ ಉತ್ತೇಜನಗೊಳ್ಳುವಂತೆ ಮಾಡುವುದು, ಮತ್ತು, ಅದೇ ಸಮಯದಲ್ಲಿ, ದೇಶದ ಆಂತರಿಕ ಮಾರುಕಟ್ಟೆಗೆ ರಕ್ಷಣೆ ಒದಗಿಸುವುದು ಅವರ ಉದ್ದೇಶ.

ಟ್ರಂಪ್ ಅವರ ಕಾರ್ಯನೀತಿಯಲ್ಲಿ ಈ ಎರಡೂ ಎಳೆಗಳನ್ನೂ ಒಟ್ಟಿಗೇ ಎಳೆಯಬೇಕಾಗುತ್ತದೆ. ಏಕೆಂದರೆ, ಆಂತರಿಕ ಮಾರುಕಟ್ಟೆಗೆ ರಕ್ಷಣೆ ಒದಗಿಸದೆ, ಕೇವಲ ಸರ್ಕಾರದ ವೆಚ್ಚಗಳನ್ನು ಹೆಚ್ಚಿಸಿದರೆ ಅದರ ಲಾಭ ಬೇರೆ ದೇಶಗಳಿಗೆ ಸಿಗುತ್ತದೆ. ಅಂದರೆ, ಬೇರೆ ದೇಶಗಳ ಉದ್ಧಾರಕ್ಕಾಗಿ ಅಮೆರಿಕಾ ಸಾಲ ಹೊರುವಂತಾಗುತ್ತದೆ. ಹಾಗಾಗಿ, ವಿತ್ತೀಯ ಕೊರತೆಯ ಹೆಚ್ಚಳ (ಸರ್ಕಾರದ ವೆಚ್ಚಗಳ ಹೆಚ್ಚಳ) ಮತ್ತು ಆಂತರಿಕ ಮಾರುಕಟ್ಟೆಯ ರಕ್ಷಣೆ ಈ ಎರಡರ ಮೇಳೈಕೆಯು ದೇಶದಲ್ಲಿ ಉದ್ಯೋಗ ಸೃಷ್ಠಿಸುತ್ತದೆ ಮತ್ತು ಹೊರ ದೇಶಗಳೊಂದಿಗೆ ಸಾಲ ಮಾಡಿಕೊಳ್ಳುವುದನ್ನೂ ತಪ್ಪಿಸುತ್ತದೆ.

ಇಂತಹ ಒಂದು ಕಾರ್ಯನೀತಿಯನ್ನು ಅಳವಡಿಕೊಳ್ಳುವ ಸಾಹಸವನ್ನು ಟ್ರಂಪ್ ಮಾತ್ರ ಮಾಡಬಹುದು, ಬಂಡವಾಳಶಾಹಿ ಜಗತ್ತಿನಲ್ಲಿ ಅಮೇರಿಕಾ ಹೊಂದಿರುವ ಸ್ಥಾನ–ಮಾನದಿಂದಾಗಿ. ಬೇರೆ ಯಾವುದೇ ದೇಶವು ವಿತ್ತೀಯ ಕೊರತೆ ಹೆಚ್ಚಳದ ಜೊತೆಗೆ ಆಂತರಿಕ ಮಾರುಕಟ್ಟೆಯ ರಕ್ಷಣೆಗೆ ಹೊರಟಿದ್ದೇ ಆದರೆ, "ಹೂಡಿಕೆದಾರರ ವಿಶ್ವಾಸ"ಕ್ಕೆ ಧಕ್ಕೆ ಉಂಟಾದಂತಾಗಿ, ಹೂಡಿಕೆಯಾದ ಹಣ ದೇಶದಿಂದ ಹೊರ ಹೋಗುತ್ತಿತ್ತು. ಆದರೆ, ಅಮೇರಿಕಾದ ಸ್ಥಾನ–ಮಾನವೇ ಬೇರೆ: ಅನೇಕ ಕಾರಣಗಳಿಂದಾಗಿ, ವಾಣಿಜ್ಯ–ವ್ಯವಹಾರಗಳಲ್ಲಿ "ಡಾಲರ್ ಬಂಗಾರಕ್ಕೆ ಸಮ" ಎಂಬ ಪರಿಗಣನೆಯಿಂದಾಗಿ ಹಣಕಾಸು ಬಂಡವಾಳವು ಅಲ್ಲಿಂದ ಹೊರ ಹೋಗುವ ಗುಟುರು ಹಾಕುವುದಿಲ್ಲ. ಬಂಡವಾಳಶಾಹಿ ಜಗತ್ತಿಗೆ ಅಮೇರಿಕವೇ ಜಗದ್ಗುರು. ಅಲ್ಲಿ ಬಡ್ಡಿ ದರಗಳು ಉನ್ನತವಾಗಿವೆ. ಈ ಕಾರಣಗಳಿಂದಾಗಿ ಅಮೇರಿಕಾ ಮಾತ್ರ ಇಂತಹ ಸಾಹಸ ಮಾಡಬಲ್ಲದು. ತನ್ನ ಸ್ವಾರ್ಥಕ್ಕಾಗಿ, ಅಂದರೆ, ತನ್ನ ಅರ್ಥವ್ಯವಸ್ಥೆಯ ಪುನಶ್ಚೇತನಕ್ಕಾಗಿ ಅದು ಅಳವಡಿಕೊಳ್ಳುವ ನೀತಿಗಳು ಮಿಕ್ಕ ಬಂಡವಾಳಶಾಹಿ ದೇಶಗಳ ಮೇಲೆ ಎಂತಹ ಪರಿಣಾಮ ಬೀರುತ್ತವೆ ಎಂಬ ಪರಿವೆ ಅದಕ್ಕಿಲ್ಲ.

ನಾವು ಸಾಮಾನ್ಯವಾಗಿ ಭಾವಿಸುವಂತೆ, "ರಕ್ಷಣಾತ್ಮಕ ಕ್ರಮ ಒಳ್ಳೆಯದಲ್ಲ", "ಮುಕ್ತ ವ್ಯಾಪಾರ ಒಳ್ಳೆಯದು" ಎಂಬ ಕಾರಣಗಳಿಂದ, ಅಥವಾ, "ರಾಷ್ಟ್ರೀಯವಾದ"ಯನ್ನು ಪ್ರತಿಪಾದಿಸುವ ಕಾರ್ಯನೀತಿಯು ಪ್ರತಿಗಾಮಿ ಏಕೆಂದರೆ ಅದು ಪ್ರಗತಿಯ ಸಂಕೇತವಾದ "ಅಂತಾರಾಷ್ಟ್ರೀಯವಾದ"ಕ್ಕೆ ವಿರುದ್ಧವಾಗಿದೆ ಎಂಬ ಕಾರಣಗಳಿಂದ, ಟ್ರಂಪ್ ಅವರ ಈ ಕಾರ್ಯನೀತಿಯು ತಪ್ಪಲ್ಲ. ಈ ಕಾರ್ಯನೀತಿಯು ತಪ್ಪು ಏಕೆಂದರೆ ಅದು ಅಮೇರಿಕಾದಂತಹ ದೇಶಕ್ಕೂ ಕಾರ್ಯಸಾಧುವಲ್ಲ (ಅದು ಯಶಸ್ವಿಯಾಗಬಹುದು ಎಂಬ ಅನಿಸಿಕೆ ಸದ್ಯ ಇದ್ದರೂ). ಇನ್ನು ಇಡೀ ಬಂಡವಾಳಶಾಹಿ ಜಗತ್ತಿಗೆ ಅದು ಸಲ್ಲುತ್ತದೆಯೇ?



"ರಾಷ್ಟ್ರೀಯವಾದ"ಕ್ಕೆ ಎದುರಾಗಿ "ಅಂತಾರಾಷ್ಟ್ರೀಯವಾದ" ಎಂಬ ಪ್ರವಚನವೇ ವಿಶ್ಲೇಷಣಾತ್ಮಕವಾಗಿ ತಪ್ಪು. ಏಕೆಂದರೆ, ಇಂತಹ ಶಬ್ದಗಳು ಯಾವ ವರ್ಗದ ಗುಣ–ಲಕ್ಷಣಗಳನ್ನು ಬಿಂಬಿಸುತ್ತವೆ ಎಂಬುದನ್ನು ಅರಿಯದೆ ಅವುಗಳನ್ನು ವಿವರಿಸಲಾಗದು. ಉದಾಹರಣೆಗೆ, "ರಾಷ್ಟ್ರೀಯವಾದ"ವು ಒಂದೇ ತೆರನಾದುದಲ್ಲ. ಅದು ಎಲ್ಲ ಸಂದರ್ಭದಲ್ಲೂ ಒಂದೇ ಅರ್ಥ ಕೊಡುವುದಿಲ್ಲ – ಹೋ ಚಿ ಮಿನ್ಹ್‌ರ "ರಾಷ್ಟ್ರೀಯವಾದ"ವು ಹಿಟ್ಲರ್‌ನದ್ದಕ್ಕಿಂತ ಸಂಪೂರ್ಣ ಭಿನ್ನವಾದದ್ದು. ನೈತಿಕ ಆಧಾರವಿಲ್ಲದ್ದು. ಆದ್ದರಿಂದ, "ಅಂತಾರಾಷ್ಟ್ರೀಯವಾದ" ಕಾರ್ಯನೀತಿಯೇ ಶ್ರೇಷ್ಠವೆಂದು ಭಾವಿಸಿ ಅದನ್ನು ವ್ಯರ್ಥವಾಗಿ ಅನುಸರಿಸುವವರಿಗೆ ಹೋಲಿಸಿದರೆ, ಒಂದು ವೇಳೆ, ಎಲ್ಲ ದೇಶಗಳೂ "ರಾಷ್ಟ್ರೀಯವಾದ" ಕಾರ್ಯನೀತಿಯನ್ನೇ ಅಳವಡಿಕೊಂಡು ಜನೋಪಯೋಗಿ ಕೆಲಸಗಳಿಗೆ ಹೆಚ್ಚು ಹಣ ವೆಚ್ಚಮಾಡುವುದರ ಜೊತೆಗೆ ಎಲ್ಲೆಡೆಯಲ್ಲೂ ಹೆಚ್ಚು ಉದ್ಯೋಗ ಸೃಷ್ಠಿಸಿದರೆ, ಅಂತಹ ಸಂರ್ಭದಲ್ಲಿ, "ರಾಷ್ಟ್ರೀಯವಾದ" ಕಾರ್ಯನೀತಿಯ ಬಗ್ಗೆ ಆಕ್ಷೇಪ ಎತ್ತುವುದು ಸಮರ್ಥನೀಯವೇ ಅಲ್ಲ.

ಸಧ್ಯದಲ್ಲಿ, ಟ್ರಂಪ್‌ರವರ ಕಾರ್ಯನೀತಿ ಪರಿಣಾಮಕಾರಿಯಾಗಿದೆ ಎಂದು ಕೆಲವರು ಹೇಳುತ್ತಾರೆ. ಈಗ ಅಮೇರಿಕಾದಲ್ಲಿ, ಅಧಿಕೃತವಾಗಿ, ಶೇ.4ರಷ್ಟು ನಿರುದ್ಯೋಗವಿದೆ, ಕೆಲ ವರ್ಷಗಳ ಹಿಂದಿದ್ದ ಪರಿಸ್ಥಿತಿಗೆ ಹೋಲಿಸಿದರೆ, ನಿರುದ್ಯೋಗ ಇಳಿದಿದೆ ಎಂದೂ ಹೇಳುತ್ತಾರೆ. ಬಂಡವಾಳದಾರರ ತೆರಿಗೆ ಕಡಿಮೆ ಮಾಡಿದ್ದರೂ (ವಿತ್ತೀಯ ಕೊರತೆಯ ಮೂಲಕ), ಅದೇ ಸಮಯದಲ್ಲಿ, ಟ್ರಂಪ್ ಆಡಳಿತವು ಸಾಮಾಜಿಕ ವೆಚ್ಚಗಳನ್ನು ಕಡಿತಗೊಳಿಸಿಲ್ಲ. ಇಂತಹ ಉತ್ಕರ್ಷದ ಅವಧಿಯಲ್ಲೂ ಹಣದುಬ್ಬರ ಕೆಳ ಮಟ್ಟದಲ್ಲಿದೆ, ಡಾಲರ್ ಬಲಗೊಂಡಿದೆ ಎಂಬುದನ್ನೂ ಹೇಳುತ್ತಾರೆ.

ಟ್ರಂಪ್ ನೀತಿಗಳು ಫಲಕಾರಿಯಾಗಿವೆ ಎಂಬುದನ್ನು ನಿರೂಪಿಸಲು ಹೇಳುವ ಈ ಎಲ್ಲ ಅಂಶಗಳು, ಏಕ ಕಾಲದಲ್ಲಿ, ನಿಜವೆಂದು ನಂಬಲಾಗದು. ಏಕೆಂದರೆ, ಕಡಿಮೆ ಪ್ರಮಾಣದ ನಿರುದ್ಯೋಗ, ದೊಡ್ಡ ಗಾತ್ರದ ವಿತ್ತೀಯ ಕೊರತೆ, ವ್ಯಾಪಾರಗಳಲ್ಲಿ ರಕ್ಷಣಾತ್ಮಕ ನೀತಿ ಮತ್ತು ಹಣದುಬ್ಬರ ಕಡಿಮೆ ಇದೆ ಎಂಬುದಾಗಿ ಹೇಳುವ ಈ ಎಲ್ಲ ಅಂಶಗಳು, ಕ್ಷಣಿಕವಾಗಿ ಮಾತ್ರವೇ ಒಟ್ಟಿಗೆ ಇರಲು ಶಕ್ಯ.. ಮೊದಲಿನ ಮೂರು ಅಂಶಗಳು ಒಟ್ಟಿಗೆ ಸೇರಿದಾಗ ಬೇಡಿಕೆಯ ಮೇಲೆ ಅತಿಯಾದ ಒತ್ತಡ ಬೀಳುತ್ತದೆ. ಪರಿಣಾಮವಾಗಿ, ಹಣದುಬ್ಬರ ಕೆಳ ಮಟ್ಟದಲ್ಲಿ ಉಳಿಯಲಾರದು. ಆದರೂ, ಈ ನಾಲ್ಕೂ ಅಂಶಗಳೂ ನಿಜವೆಂದು ಊಹಿಸಿಕೊಳ್ಳೋಣ.

ಈ ಎಲ್ಲ ಅಂಶಗಳು, ಟ್ರಂಪ್ ಕಾರ್ಯನೀತಿಯ ಮೊದಲ ಸುತ್ತಿನ ಫಲಿತಾಂಶಗಳು ಮಾತ್ರ. ಅಮೇರಿಕಾದ ರಕ್ಷಣಾತ್ಮಕ ವ್ಯಾಪಾರ ನೀತಿಯ ಹೊಡೆತಕ್ಕೆ ಒಳಗಾದ ಮಿಕ್ಕ ದೇಶಗಳು, ತಮ್ಮ ದೇಶಗಳಿಗೆ ಅಮೇರಿಕಾ ರಫ್ತು ಮಾಡಿದ ನಿರುದ್ಯೋಗವನ್ನು ಕೈಕಟ್ಟಿ ಒಪ್ಪಿಕೊಂಡು ಸುಮ್ಮನೇ ಕುಳಿತುಕೊಳ್ಳುವುದಿಲ್ಲ. ಅವರೂ ಸಹ ಅಂತದೇ ಕ್ರಮಗಳ ಮೂಲಕ, ಅಂದರೆ, ದೊಡ್ಡ ಪ್ರಮಾಣದಲ್ಲಿ ಸರ್ಕಾರದ ವೆಚ್ಚಗಳು(ವಿತ್ತೀಯ ಕೊರತೆ) ಮತ್ತು ರಕ್ಷಣಾತ್ಮಕ ಕ್ರಮಗಳ ಮೂಲಕ, ಪ್ರತೀಕಾರ ಕೈಗೊಳ್ಳುತ್ತವೆ. ಆದರೆ, ಅವರಿಗೆ ಅಮೇರಿಕಾ ಹೊಂದಿರುವ ಜಗದ್ಗುರುವಿನ ಸ್ಥಾನ–ಮಾನ ಇಲ್ಲದಿರುವುದರಿಂದ, ಅವರು ಪ್ರತೀಕಾರ ಕ್ರಮ ಕೈಗೊಂಡಾಗ, ಅಲ್ಲಿ ಹೂಡಿಕೆಯಾಗಿದ್ದ ಬಂಡವಾಳ ಹೊರ ಹರಿಯುತ್ತದೆ. ಅದನ್ನು ತಡೆಯಲು ಅವರು ಬಂಡವಾಳದ ಹರಿವಿನ ಮೇಲೆ ನಿಯಂತ್ರಣ ಹೇರಬೇಕಾಗುತ್ತದೆ. ಅಥವಾ, ಬಂಡವಾಳ ಹೊರ ಹರಿಯದಂತಹ ಆಕರ್ಷಕ ಬಡ್ಡಿ ದರ ಏರಿಕೆಯ ಪ್ರಲೋಭನೆ ಒಡ್ಡಬೇಕಾಗುತ್ತದೆ.

ಬಂಡವಾಳದ ಹರಿವಿನ ಮೇಲೆ ನಿಯಂತ್ರಣ ಹೇರುವ ಕ್ರಮ ಜಾಗತೀಕರಣದ ಬೇರುಗಳನ್ನೇ ಕತ್ತರಿಸುತ್ತದೆ. ಸರಕು–ಸೇವೆಗಳ ಆಮದುಗಳ ಮೇಲೆ ರಕ್ಷಣಾತ್ಮಕ ಕ್ರಮಗಳನ್ನು ವಿಧಿಸಿರುವ ಟ್ರಂಪ್ ಕೂಡ ಬಂಡವಾಳದ ಮುಕ್ತ ಹರಿವಿನ ಮೇಲೆ ನಿಯಂತ್ರಣ ಹೇರದಿರುವುದು ಗಮನಾರ್ಹವಾಗಿದೆ. ಅದೇ ರೀತಿಯಲ್ಲಿ, ಮಿಕ್ಕ ಬಂಡವಾಳಶಾಹಿ ದೇಶಗಳೂ ಸಹ ಬಂಡವಾಳದ ಮುಕ್ತ ಹರಿವಿನ ಮೇಲೆ ನಿಯಂತ್ರಣ ಹೇರಲು ಹಿಂಜರಿಯುತ್ತವೆ. ಬಂಡವಾಳ ಹೊರ ಹರಿಯದಂತೆ ತಡೆಯಲು ಅವು, ಬಡ್ಡಿ ದರ ಏರಿಕೆ ಮಾಡಲೇಬೇಕಾಗುತ್ತದೆ.

ಬಡ್ಡಿ ದರ ಏರಿಸುವ ಕ್ರಮಗಳು ನಿರುದ್ಯೋಗ ತಗ್ಗಿಸುವಲ್ಲಿ ಹೇಳಿಕೊಳ್ಳುವಂತಹ ಫಲ ಕೊಡುವುದಿಲ್ಲ. ಪೈಪೋಟಿಯ ದೃಷ್ಟಿಯಿಂದ ಅಮೇರಿಕವೂ ಬಡ್ಡಿದರವನ್ನು ಮತ್ತಷ್ಟು ಏರಿಸಬೇಕಾಗುತ್ತದೆ. ಹಾಗಾಗಿ, ಟ್ರಂಪ್ ಆರಂಭಿಸಿದ "ವ್ಯಾಪಾರ ಯುದ್ಧ"ವು ಬಡ್ಡಿ ದರ ಏರಿಕೆಯ ಪೈಪೋಟಿಯಲ್ಲಿ ಪರ್ಯವಸಾನಗೊಳ್ಳುತ್ತದೆ. ಒಟ್ಟಾರೆಯಾಗಿ, ಅಮೇರಿಕಾ ಸೇರಿದಂತೆ ಎಲ್ಲ ಬಂಡವಾಳಶಾಹಿ ದೇಶಗಳೂ ತಮ್ಮ ಮೈ ಮೇಲೆ ಎಳೆದುಕೊಂಡ ವಿತ್ತೀಯ ಕೊರತೆ ಮತ್ತು ರಕ್ಷಣಾತ್ಮಕ ವ್ಯಾಪಾರ ಕ್ರಮಗಳು ಆಯಾ ದೇಶಗಳಲ್ಲಿ ಉಂಟಾದ ಸ್ವಲ್ಪ ಮಟ್ಟಿನ ಉದ್ಯೋಗ ಪರಿಸ್ಥಿತಿಯನ್ನು ನಿರರ್ಥಕಗೊಳಿಸುತ್ತವೆ.

ಇಂತಹ ಇಕ್ಕಟ್ಟಿನ ಪರಿಸ್ಥಿತಿ ಏನನ್ನು ಸ್ಪಷ್ಟವಾಗಿ ತೋರಿಸುತ್ತದೆ ಎಂದರೆ, ಬಂಡವಾಳದ ಮುಕ್ತ ಹರಿವಿನ ಮೇಲೆ ನಿಯಂತ್ರಣ ಹೇರದ ಹೊರತು ಬಂಡವಾಳಶಾಹಿಯು ಈ ಬಿಕ್ಕಟ್ಟಿನಿಂದ ಹೊರಬರುವುದು ಸಾಧ್ಯವಿಲ್ಲ ಎಂಬುದು. ಅಂದರೆ, ಹಣಕಾಸು ಬಂಡವಾಳದ ಅಧಿನಾಯಕತ್ವವನ್ನು ಕಿತ್ತೊಗೆಯಬೇಕಾಗುತ್ತದೆ. ಆದರೆ, ಟ್ರಂಪ್ ಕಾರ್ಯನೀತಿಯು ಹಣಕಾಸು ಬಂಡವಾಳದ ಅಧಿನಾಯಯಕತ್ವವನ್ನು ಕಿತ್ತೊಗೆಯುವ ಗುರಿ ಹೊಂದಿಲ್ಲ. ಮಿಕ್ಕ ಬಂಡವಾಳಶಾಹಿ ದೇಶಗಳೂ ಅದನ್ನು ಕಿತ್ತೊಗೆಯಲು ಮನಸ್ಸು ಮಾಡದಿದ್ದರೆ, ಬಡ್ಡಿ ದರ ಪೈಪೋಟಿಯಲ್ಲಿ ತೊಡಗಿಕೊಳ್ಳವುದೇ ಅವರೆಲ್ಲರ ಕೆಲಸವಾಗುತ್ತದೆ. ಅದರಿಂದ ಜಾಗತಿಕ ಬಂಡವಾಳಶಾಹಿ ಅರ್ಥವ್ಯವಸ್ಥೆಯ ಪರಿಸ್ಥಿತಿ ಉತ್ತಮವಾಗುವುದಿಲ್ಲ.

ದೀರ್ಘ ಕಾಲದಿಂದಲೂ ಬಿಕ್ಕಟ್ಟಿನಿಂದ ನರಳುತ್ತಿರುವ ಜಾಗತಿಕ ಬಂಡವಾಳಶಾಹಿ ಅರ್ಥವ್ಯವಸ್ಥೆಯು ಅದರಿಂದ ಹೊರಬರಲು ತರ್ಕಬದ್ಧವಾದ ಎರಡು ದಾರಿಗಳಿವೆ. ಮೊದಲನೆಯದು, 1930ರ ದಶಕದ ಮಹಾ ಕುಸಿತದ ಸಂದರ್ಭದಲ್ಲಿ ಹೆಸರಾಂತ ಅರ್ಥಶಾಸ್ತ್ರಜ್ಞ ಕೀನ್ಸ್ ಮತ್ತು ಜರ್ಮನಿಯ ಕೆಲವು ಟ್ರೇಡ್ ಯೂನಿಯನ್ ಮುಖಂಡರು ಸಲಹೆ ಮಾಡಿದ್ದಂತೆ, ಮುಂದುವರಿದ ಎಲ್ಲ ದೇಶಗಳೂ ಒಂದು ಸಂಘಟಿತ ಆರ್ಥಿಕ ಉತ್ತೇಜನ ಕಾರ್ಯಕ್ರಮವನ್ನು ಹಮ್ಮಿಕೊಳ್ಳಬೇಕಾಗುತ್ತದೆ. ಇದನ್ನು ಅಂತಾರಾಷ್ಟ್ರೀಯ ಹಣಕಾಸು ಬಂಡವಾಳವು ವಿರೋಧಿಸುತ್ತದೆ. ತನ್ನ ಮುಖಾಂತರವಾಗಿ ನಡೆಯದ ಯಾವುದೇ ಕ್ರಮಗಳನ್ನು ನೇರವಾಗಿ ಪ್ರಭುತ್ವವೇ ಕೈಗೊಳ್ಳುವುದನ್ನು ಅದು ವಿರೋಧಿಸುತ್ತದೆ. ಆದರೆ, ಈ ನಿಟ್ಟನಲ್ಲಿ, ಎಲ್ಲ ರಾಷ್ಟ್ರ ಪ್ರಭುತ್ವಗಳೂ ಒಗ್ಗಟ್ಟಿನಿಂದ ನೇರ ಕಾರ್ಯಾಚರಣೆಗೆ ಇಳಿದರೆ, ಅದರ ವಿರೋಧವನ್ನು ಹಿಮ್ಮೆಟ್ಟಿಸಬಹುದು. ಇಂತಹ ಒಂದು ಕಾರ್ಯಾಚರಣೆಯ ಬಗ್ಗೆ ಜಿ–7ರಲ್ಲಿ ಯಾರೂ ಚಕಾರ ಎತ್ತಲಿಲ್ಲ. ಅಂದರೆ, ಅದು ಬಂಡವಾಳಶಾಹಿ ಜಗತ್ತಿನ ಅಜೆಂಡಾದಲ್ಲೇ ಇಲ್ಲ. ಈ ಅಜೆಂಡಾವನ್ನು ಬೆನ್ನಟ್ಟಿ ಹೋಗುವ ಪ್ರಯತ್ನಗಳು, ಅಂತಾರಾಷ್ಟ್ರೀಯ ಹಣಕಾಸು ಬಂಡವಾಳದ ವಿರೋಧವನ್ನು ಹಿಮ್ಮೆಟ್ಟಿಸುತ್ತವೆ. ಈ ಕಾರ್ಯವನ್ನು ನೆರವೇರಿಸಲು ಬಂಡವಾಶಾಹಿ ಅಸಮರ್ಥವಾಗಿದೆ. ಹಾಗಾಗಿ, ಈ ಪ್ರಯತ್ನಗಳು, ಬಂಡವಾಳಶಾಹಿಯನ್ನು ಮೀರುವ ಕೆಲಸ ಮಾಡುತ್ತವೆ. ಅಂದರೆ, ಬಂಡವಾಳಶಾಹಿ ಬಿಕ್ಕಟ್ಟಿನಿಂದ ಹೊರಬರುವ ಪ್ರಕ್ರಿಯೆಯೇ ಬಂಡವಾಳಶಾಹಿಯನ್ನು ಮೀರುತ್ತದೆ.

ತರ್ಕಬದ್ಧವಾದ ಎರಡನೆಯ ದಾರಿ ಎಂದರೆ, ನಿರ್ದಿಷ್ಟ ದೇಶಗಳು, ಟ್ರಂಪ್ ಹೋಗುತ್ತಿರುವ ಹಾಗೆ, ಒಂಟಿಯಾಗಿ ಹೋಗುವುದು. ಈ ಕ್ರಮ ಯಶಸ್ವಿಯಾಗಬೇಕಾದರೆ, ಬಂಡವಾಳದ ಹೊರ ಹರಿವನ್ನು ನಿಯಂತ್ರಿಸಬೇಕಾಗುತ್ತದೆ. ಇಲ್ಲದಿದ್ದರೆ, ಬಂಡವಾಳದ ಹೊರ ಹರಿವು ಆ ದೇಶವನ್ನೂ ಮತ್ತು ಅದರ ಪ್ರತಿಸ್ಪರ್ಧಿಗಳನ್ನೂ ಬಡ್ಡಿ ದರ ಪೈಪೋಟಿಗೆ ಬೀಳುವಂತೆ ಮಾಡುತ್ತದೆ. ಪರಿಣಾಮವಾಗಿ, ಬಂಡವಾಳಶಾಹಿ ಜಗತ್ತಿನ ಆರ್ಥಿಕ ಪುನಶ್ಚೇತನ ಬುಡಮೇಲಾಗುತ್ತದೆ.

ಅಮೇರಿಕಾದ ಅರ್ಥವ್ಯವಸ್ಥೆಯ ಸಂದರ್ಭದಲ್ಲಿ ಟ್ರಂಪ್‌ರವರ ನೀತಿ ಯಶಸ್ವಿಯಾಗಿದೆ ಎಂಬುದು ಅನುಮಾನದ ವಿಷಯ. ಯಶಸ್ವಿಯಾಗಿದ್ದರೂ, ಅದು ಪೈಪೋಟಿಯ ಮೊದಲ ಹಂತದಲ್ಲಿ. ಮುಂದೆ ಟ್ರಂಪ್ ಕೈಗೊಳ್ಳುವ ಎಲ್ಲ ಏಟುಗಳಿಗೆ ಮಿಕ್ಕವರು ಪ್ರತಿ ಏಟು ಕೊಟ್ಟಾಗ ಅವರ ಯಶಸ್ಸು ಮಾಯವಾಗುತ್ತದೆ. ಟ್ರಂಪ್ ಆಗಲೀ ಅಥವಾ ಅವರ ಎದುರಾಳಿಗಳಾಗಲೀ ಬಂಡವಾಳದ ಹೊರ ಹರಿವಿನ ನಿಯಂತ್ರಣದ ಬಗ್ಗೆ ಯೋಚಿಸುತ್ತಲೂ ಇಲ್ಲ. ಈ ಕಾರಣದಿಂದಾಗಿ, ಹಣಕಾಸು ಬಂಡವಾಳದ ಅಧಿನಾಯಕತ್ವವನ್ನು ಬಗ್ಗುಬಡಿಯುವ ಸಾಧ್ಯತೆಯನ್ನು ತಳ್ಳಿಹಾಕಬೇಕಾಗುತ್ತದೆ. ಹಾಗಾಗಿ, ಬಂಡವಾಳಶಾಹಿಯ ರಾಚನಿಕ ಬಿಕ್ಕಟ್ಟು ಮುಂದುವರಿಯುತ್ತದೆ, ಮೇಲುನೋಟದಲ್ಲಿ ತದ್ವಿರುದ್ಧವಾಗಿ ಕಂಡರೂ ಸಹ.

ಸ್ಟರ್ಲೈಟ್ ವಿರುದ್ಧ ತೂತ್ತುಕಡಿ ಜನರೊಡನೆ ನಿಂತ ಸಿಪಿಐ(ಎಂ)

ರಾಜ್ಯಗಳ ಸುತ್ತ





ತಮಿಳುನಾಡಿನ ತೂತ್ತುಕುಡಿಯಲ್ಲಿ 13 ಜನರ ಕಗ್ಗೊಲೆ ನಡೆಸಿದ ಪೋಲೀಸ್ ಗೋಲೀಬಾರಿನ ನಂತರ ಅಲ್ಲಿ ಮೊದಲ ಸಾರ್ವಜನಿಕ ಸಭೆ ಜೂನ್ 19ರಂದು ನಡೆಯಿತು. ಸಿಪಿಐ(ಎಂ)ಪೊಲಿಟ್‌ಬ್ಯುರೊ ಸದಸ್ಯರಾದ ಬೃಂದಾ ಕಾರಟ್ ಮತ್ತು ಕೇಂದ್ರ ಸಮಿತಿ ಸದಸ್ಯರಾದ ಯು.ವಾಸುಕಿ ಅದನ್ನುದ್ದೇಶಿಸಿ ಮಾತನಾಡಿದರು.

ಗೋಲೀಬಾರಿನ ನಂತರ ರಾಜ್ಯ ಸರಕಾರ ಮತ್ತು ಜಿಲ್ಲಾ ಆಡಳಿತ ಯಾವುದೇ ಸಾರ್ವಜನಿಕ ಸಭೆಗೆ ಅನುಮತಿ ಕೊಡುತ್ತಿರಲಿಲ್ಲ, ಆದ್ದರಿಂದ ಸಿಪಿಐ(ಎಂ) ಮದ್ರಾಸ್ ಹೈಕೋರ್ಟಿನ ಮಧುರೈ ಪೀಠದಲ್ಲಿ ಅರ್ಜಿ ಸಲ್ಲಿಸಿತು. ಅದು ವಾಕ್ ಸ್ವಾತಂತ್ರ್ಯ ಮತ್ತು ಸಾರ್ವಜನಿಕ ಸಂವಾದಗಳನ್ನು ದಮನ ಮಾಡಲು ಸಾಧ್ಯವಿಲ್ಲ ಎಂಬ ಮಹತ್ವದ ಟಿಪ್ಪಣಿಗಳನ್ನು ಮಾಡುತ್ತ ಭಾಷಣಕಾರರ ಸಂಖ್ಯೆ ಮುಂತಾದ ಕೆಲವು ಶರತ್ತುಗಳ ಮೇಲೆ ಅನುಮತಿ ನೀಡಿತು. ಇದು ಜನಗಳಲ್ಲಿ ದೊಡ್ಡ ಪ್ರಮಾಣದಲ್ಲಿ ಉತ್ಸಾಹ ಮೂಡಿಸಿತು.

ಬೃಂದಾ ಕಾರಟ್ ಅವರು ವಾಸುಕಿ, ಸಂಪತ್, ಕನಕರಾಜ್, ಅರ್ಜುನನ್, ಮತ್ತು ಜಿಲ್ಲಾ ಮುಖಂಡರೊಂದಿಗೆ ಸ್ಟೆರ್ಲೈಟ್ ಸ್ಥಾವರದ ಸುತ್ತಲಿನ ನಾಲ್ಕು ಅತಿ ಹೆಚ್ಚು ಸಂತ್ರಸ್ತ ಹಳ್ಳಿಗಳಿಗೆ ಭೇಟಿ ನೀಡಿದರು. ಅಲ್ಲಿನ ಮಹಿಳೆಯರು ಪೋಲೀಸರ ಭಯೋತ್ಪಾದಕ ಕೆಲಸಗಳ ಬಗ್ಗೆ ದೂರಿದರು. ಕಗ್ಗೊಲೆಯಾದವರ ಕುಟುಂಬದ ಸದಸ್ಯರನ್ನೂ ಸಿಪಿಐ(ಎಂ) ನಿಯೋಗ ಭೇಟಿ ಮಾಡಿತು. ಇವರೆಲ್ಲರ ದೂರುಗಳೊಂದಿಗೆ ಜಿಲ್ಲಾ ಅಧಿಕಾರಿಗಳು ಮತ್ತು ಐಜಿಯವರನ್ನೂ ಭೇಟಿ ಮಾಡಿತು.

ಈ ನಡುವೆ ಅಖಿಲ ಭಾರತ ವಕೀಲರ ಸಂಘ ಹೈಕೋರ್ಟಿನ ಉಸ್ತುವಾರಿಯಲ್ಲಿ ಒಂದು ಸ್ವತಂತ್ರ ತನಿಖೆ ನಡೆಯಬೇಕೆಂದು ಆಗ್ರಹಿಸಿ ಅರ್ಜಿಯನ್ನು ಸಲ್ಲಿಸಿದೆ. ಪ್ರಾಥಮಿಕ ಟಿಪ್ಪಣಿಯಲ್ಲಿ ಹೈಕೋರ್ಟ್ ಇದು ಸಿಬಿಐಗೆ ಹೋಗಲು ಅರ್ಹವಾದ ಕೇಸ್ ಎಂದು ಹೇಳಿದರು.

ಸಾರ್ವಜನಿಕ ಸಭೆಯನ್ನು ಉದ್ದೇಶಿಸಿ ಮಾತನಾಡುತ್ತ ಬೃಂದಾ ಕಾರಟ್ "ಪರಿಸರ ಮತ್ತು ಸಾಮಾಜಿಕ ಪರಿಣಾಮದ ತಪಾಸಣೆ ನಡೆಸದೆ ಸ್ಥಾವರದ ವಿಸ್ತರಣೆಗೆ ಅನುಮತಿ ನೀಡಿದ ಮೋದಿ ಸರಕಾರಕ್ಕೆ ಜನಗಳಿಗಿಂತ ತನ್ನ ಚಮಚಾಗಳ ಹಿತಾಸಕ್ತಿಗಳ ರಕ್ಷಣೆ ಮುಖ್ಯವಾಗಿದೆ ಎಂದರು.

ಒಂದು ವಾರದ ಪ್ರಚಾರಾಂದೋಲನ

ಇದಕ್ಕೆ ಮೊದಲು ಜೂನ್ 8 ರಂದು ತಿರುವಳ್ಳುರ್, ವೆಲ್ಲೋರ್, ನೀಲ್‌ಗಿರಿ, ಕಡಲೂರ್, ಎಟ್ಟಯಪುರಂ ಮತ್ತು ಕನ್ಯಾಕುಮಾರಿ, ಈ ಆರು ಸ್ಥಳಗಳಿಂದ ಆರಂಭವಾದ ರ್ಯಾಲಿಗಳು ಜಿಲ್ಲೆಗಳಲ್ಲೆಲ್ಲ ಸಂಚರಿಸಿ ಜೂನ್ 14 ರಂದು ತಿರುಚಿ ತಲುಪಿದವು. ಅಲ್ಲಿ ಒಂದು ಬೃಹತ್ ಸಭೆಯೊಂದಿಗೆ ಈ ಒಂದು ವಾರದ ಪ್ರಚಾರಂದೋಲನ ಸಮಾರೋಪಗೊಂಡಿತು. ಕೇಂದ್ರದ ಬಿಜೆಪಿ ಸರಕಾರ ಮತ್ತು ರಾಜ್ಯದ ಎಐಎಡಿಎಂಕೆ ಸರಕಾರದ ಜನ–ವಿರೋಧಿ ಧೋರಣೆಗಳ ವಿರುದ್ಧ ಮತ್ತು ತೂತ್ತುಕುಡಿಯ ಕಗ್ಗೊಲೆಗಳ ವಿರುದ್ಧ ಜನಜಾಗೃತಿ ಮೂಡಿಸಲು ಈ ಪ್ರಚಾರಾಂದೋಲನವನ್ನು ನಡೆಸಲಾಯಿತು.

ಜೂನ್ 14 ರ ಸಮಾರೋಪ ರ್ಯಾಲಿಯನ್ನುದ್ದೇಶಿಸಿ ಪ್ರಧಾನ ಕಾರ್ಯದರ್ಶಿ ಸೀತಾರಾಮ್ ಯೆಚುರಿ, ಇನ್ನೊಬ್ಬ ಪೊಲಿಟ್‌ಬ್ಯುರೊ ಸದಸ್ಯರಾದ ಜಿ.ರಾಮಕೃಷ್ಣನ್, ರಾಜ್ಯಕಾರ್ಯದರ್ಶಿ ಕೆ.ಬಾಲಕೃಷ್ಣನ್ ಮತ್ತಿತರರು ಮಾತನಾಡಿದರು.

ತೆಲಂಗಾಣದಲ್ಲಿ ಬಹುಜನ ಎಡರಂಗದ 'ಮಹಾಧರಣಿ' ಚಳುವಳಿ

"ತೆಲಂಗಾಣ ಟಿಆರ್‌ಎಸ್ ಸರಕಾರ ಆಶ್ವಾಸನೆಗಳನ್ನು ಈಡೇರಿಸಬೇಕು"

ತೆಲಂಗಾಣದಲ್ಲಿ ಸಿಪಿಐ(ಎಂ) ಮುತುವರ್ಜಿಯಿಂದ ರೂಪುಗೊಂಡಿರುವ ಬಹುಜನ ಎಡರಂಗ(ಬಿಎಲ್‌ಎಫ್) ಎಲ್ಲ ಜಿಲ್ಲಾ ಕಲೆಕ್ಟರ್ ಕಚೇರಿಗಳ ಮುಂದೆ ಜೂನ್ 25 ರಿಂದ 27ರ ವರೆಗೆ ಮೂರುದಿನ ಮಹಾಧರಣಿ ಕಾರ್ಯಾಚರಣೆ ನಡೆಸಲು ಕರೆ ನೀಡಿದೆ. ಟಿಆರ್‌ಎಸ್ ಸರಕಾರ ಕಳೆದ ವಿಧಾನಸಭಾ ಚುನಾವಣೆಗಳಲ್ಲಿ ರಾಜ್ಯದ ಜನತೆಗೆ ನೀಡಿದ ಆಶ್ವಾಸನೆಗಳನ್ನು ಈಡೇರಿಸಬೇಕು ಎಂಬುದು ಈ ಕಾರ್ಯಾಚರಣೆಯ ಮುಖ್ಯ ಬೇಡಿಕೆ. ಬಿಎಲ್‌ಎಫ್ ಭಾಗವಾಗಿ ಸಿಪಿಐ(ಎಂ) ಕಾರ್ಯಕರ್ತರು ಹಳ್ಳಿ–ಹಳ್ಳಿಗಳಿಗೆ ಹೋಗುತ್ತಿದ್ದಾರೆ, ಜನರೊಡನೆ ಅವರ ಸಮಸ್ಯೆಗಳ ಬಗ್ಗೆ ಮಾತಾಡುತ್ತಿದ್ದಾರೆ, ಮಹಾಧರಣಿಗಳಿಗೆ ಜನಗಳನ್ನು ಅಣಿನೆರೆಸುತ್ತಿದ್ದಾರೆ.



ತಪ್ಪಿತಸ್ಥರನ್ನು ಗುರುತಿಸದ ಮಂದ್‌ಸೌರ್ ಗೋಲೀಬಾರ್ ತನಿಖಾ ವರದಿಯನ್ನು ವಿರೋಧಿಸಲು ಮಧ್ಯಪ್ರದೇಶ ಕಿಸಾನ್ ಸಭಾ ಕರೆ

ಆರು ರೈತರನ್ನು ಬಲಿ ತೆಗೆದುಕೊಂಡ ಮಂದ್‌ಸೌರ್ ಪೋಲಿಸ್ ಗೋಲೀಬಾರ್ ನಡೆದು ಒಂದು ವರ್ಷವಾದ ಮೇಲೆ ಈ ಕುರಿತು ತನಿಖೆ ನಡೆಸಲು ನೇಮಿಸಿದ್ದ ನ್ಯಾಯಮೂರ್ತಿ ಜೆ ಕೆ ಜೈನ್ ಆಯೋಗ ತನ್ನ ವರದಿ ಸಲ್ಲಿಸಿದೆ.

ಅದರ ಪ್ರಕಾರ ಈ ಗೋಲೀಬಾರಿಗೆ ಪೋಲೀಸ್ ಅಥವ ಸಿಆರ್‌ಪಿಎಫ್ ದೋಷಿಗಳಲ್ಲ. ಆದರೆ ಗೋಲೀಬಾರ್ ಅಗತ್ಯವಾಗಿತ್ತು. ಎಂದು ಅದು ಹೇಳಿದೆ. ಹಾಗಿದ್ದರೆ ಅದು ಗೋಲೀಬಾರಿನಲ್ಲಿ ಸತ್ತವರು ಮತ್ತು ಗಾಯಗೊಂಡವರೇ ದೋಷಿಗಳೆಂದು ಭಾವಿಸಿದೆಯೇ ಎಂದು ಮಧ್ಯಪ್ರದೇಶ ಕಿಸಾನ್ ಸಭಾದ ಅಧ್ಯಕ್ಷ ಜಸ್ವಿಂದರ್ ಸಿಂಗ್ ಮತ್ತು ಪ್ರಧಾನ ಕಾರ್ಯದರ್ಶಿ ಅಶೋಕ್ ತಿವಾರಿ ಪ್ರಶ್ನಿಸಿದ್ದಾರೆ.

ಈ ವರ್ದಿ ಪ್ರಕಟಣೆಯೊಂದಿಗೆ ಮುಖ್ಯಮಂತ್ರಿ ಶಿವರಾಜ್ ಚೌಹಾಣ್ ಅವರ ಇನ್ನೊಂದು ಕಿಸಾನ್–ವಿರೋಧಿ ಮುಖ ಬಯಲಾಗಿದೆ ಎಂದು ಈ ಮುಖಂಡರು ಹೇಳಿಕೆಯೊಂದರಲ್ಲಿ ಅಭಿಪ್ರಾಯ ಪಟ್ಟಿದ್ದಾರೆ.

ಪೋಲಿಸ್ ಮತ್ತು ಸಿಆರ್‌ಪಿಎಫ್ ದೋಷಿಗಳಲ್ಲ, ಆಡಳಿತವೂ ದೋಷಿಯಲ್ಲ ಎಂದಾದರೆ ಗೋಲೀಬಾರಿನ ತಪ್ಪಿತಸ್ಥರು ಯಾರು ಎಂಬ ಸಹಜ ಪ್ರಶ್ನೆಗೆ ಈ ವರದಿಯಲ್ಲಿ ಉತ್ತರ ಸಿಗುತ್ತಿಲ್ಲ. ಗೋಲೀಬಾರಿನ ಮೊದಲು ಜನಗಳನ್ನು ಚದುರಿಸಲು ಗಾಳಿಯಲ್ಲಿ ಅಥವ ನೆಲದಲ್ಲಿ ಗುಂಡು ಹಾರಿಸುವ ಮೊದಲು ಪ್ರಯತ್ನ ಮಾಡಲಾಗಿಲ್ಲೆಂದೂ ಆಯೋಗ ಟಿಪ್ಪಣಿ ಮಾಡಿದೆ. ಹಾಗಿದ್ದರೆ ಇದಕ್ಕಾದರೂ ಪೊಲೀಸ್/ಸಿಆರ್‌ಪಿಎಫ್/ಆಡಳಿತವನ್ನು ದೋಷಿಗಳೆಂದು ಪರಿಗಣಿಸಬೇಕಿತ್ತಲ್ಲವೇ ಎಂದು ಕಿಸಾನ್ ಸಭಾ ಮುಖಂಡರು ಪ್ರಶ್ನಿಸಿದ್ದಾರೆ.

ಗೋಲೀಬಾರ್ ನಡೆದ ನಂತರ ಉಪವಾಸ ಕೂತ ಮುಖ್ಯಮಂತ್ರಿಗಳು ಅದನ್ನು ಮುಗಿಸುವಾಗ ತಪಪಿತಸ್ಥರನ್ನು ಬಿಡುವುದಿಲ್ಲ ಎಂದು ಘೋಷಿಸಿದ್ದರು. ಈಗ ಆರು ರೈತರ ಸಾವಿಗೆ ಅವರು ಯಾರನ್ನು ಶಿಕ್ಷಿಸುತ್ತಾರೆ ಎಂದು ಜಸ್ವಿಂದರ್ ಸಿಂಗ್ ಪ್ರಶ್ನಿಸಿದ್ದಾರೆ.

ಕೋಟಾದಲ್ಲಿ ಕುಳಿತಿರುವ ಅಫೀಮ್ ಮಾಫಿಯಾ ಇದರ ಪಿತೂರಿ ಮಾಡಿದ್ದಾರೆ ಎಂದೂ ಮುಖ್ಯಮಂತ್ರಿಗಳು ಆಗ ಗುಡುಗಿದ್ದರು. ಆದರೆ ತನಿಖಾ ಆಯೋಗ ಈ ಕುರಿತೂ ಯಾವುದೇ ಬೆಳಕು ಚೆಲ್ಲಿಲ್ಲ. ಮುಖ್ಯಮಂತ್ರಿಯ ಸ್ಥಾನದಲ್ಲಿ ಕುಳಿತಿರುವ ವ್ಯಕ್ತಿಯೊಬ್ಬರು ಸತ್ಯ ಹೇಳುತ್ತಿಲ್ಲ, ಆಮೂಲಕ ಅಸ್ಥಾನಕ್ಕೆ ಅವಮಾನ ಮಾಡಿದ್ದಾರೆ ಎಂದಾಗುವುದಿಲ್ಲವೇ ಎಂದೂ ಅವರು ಕೇಳಿದ್ದಾರೆ.

ಕಿಸಾನ್ ಸಭಾ ಆರಂಭದಿಂದಲೂ ಹಾಲಿ ಹೈಕೋರ್ಟ್ ನ್ಯಾಯಾಧೀಶರಿಂದ ತನಿಖೆ ನಡೆಸಬೇಕು ಎಂದು ಆಗ್ರಹಿಸುತ್ತಿತ್ತು, ಮತ್ತು ಆಯೋಗದ ಮುಖ್ಯ ಕಚೇರಿ ಪಿಪಲ್ಯಾ ಮಂಡಿಯಲ್ಲಿ ಇರಬೇಕು, ಇಂದೋರಿನಲ್ಲಿ ಅಲ್ಲ ಎಂದೂ ಹೇಳಿತ್ತು. ಏಕೆಂದರೆ ಸಂತ್ರಸ್ತ ಜನಗಳು ತಮ್ಮ ಅಭಿಪ್ರಾಯಗಳನ್ನು ಹೇಳಲು ಅವಕಾಶವಾಗುತ್ತಿತ್ತು. ಸತ್ತವರಿಗೆ ನ್ಯಾಯ ಸಿಗಬಾರದು ಮತ್ತು ತಪ್ಪಿತಸ್ಥರನ್ನು ಗುರುತಿಸಿ ಶಿಕ್ಷೆಯಾಗಬಾರದು ಎಂಬ ಪಿತೂರಿಯ ಭಾಗವಾಗಿಯೇ ತನಿಖಾ ಆಯೋಗದ ಕಚೇರಿಯನ್ನು ಇಂದೋರಿನಲ್ಲಿ ತೆರೆಯಲಾಯಿತು ಎಂದು ಕಿಸಾನ್ ಸಭಾ ಆಪಾದಿಸಿದೆ.

ಬಿಜೆಪಿ ಅಧಿಕಾರಾವಧಿಯಲ್ಲಿ ಇದುವರೆಗೆ 108 ನಿರಪರಾಧಿಗಳು ಪೋಲೀಸ್ ಗುಂಡುಗಳಿಗೆ ಬಲಿಯಾಗಿದ್ದಾರೆ. ಇದು ಈ ಸರಕಾರದ ಜನ–ವಿರೋಧಿ ಸ್ವರೂಪವನ್ನು ಎತ್ತಿ ತೋರುತ್ತದೆ ಎಂದಿರುವ ಮಧ್ಯಪ್ರದೇಶ ಕಿಸಾನ್ ಸಭಾ ಈ ತನಿಖಾ ವರದಿಯನ್ನು ವಿರೋಧಿಸಬೇಕು ಎಂದು ಎಲ್ಲ ರೈತ ಸಂಘಟನೆಗಳಿಗೆ, ಪ್ರಜಾಪ್ರಭುತ್ವವಾದಿ ಮತ್ತು ಸಾಮಾಜಿಕ ಚಳುವಳಿಗಳಿಗೆ ಮನವಿ ಮಾಡಿದೆ.

ಕೇರಳ: 2 ಲಕ್ಷ ಕೃಷಿ ಕಾರ್ಮಿಕರಿಗೆ ತರಬೇತಿ

ಅಖಿಲ ಭಾರತ ಕೃಷಿ ಕಾರ್ಮಿಕರ ಸಂಘಕ್ಕೆ ಸೇರಿದ ರಾಜ್ಯ ಕೃಷಿ ಕಾರ್ಮಿಕರ ಸಂಘ (ಕೆಎಸ್‌ಕೆಟಿಯು) 2 ಲಕ್ಷ ಕೃಷಿ ಕಾರ್ಮಿಕರಿಗೆ ತರಬೇತಿ ನೀಡುವುದಾಗಿ ಜಂಟಿ ಕಾರ್ಯದರ್ಶಿ ಎಂ.ವಿ.ಗೋವಿಂದನ್ ಹೇಳಿದ್ದಾರೆ. ಅವರು ತ್ರಿಶೂರಿನ ಅಥನಿಯಲ್ಲಿ ಕೃಷಿ ದುಡಿಮೆಪಡೆಯ ರಚನೆಗೆ ಏರ್ಪಡಿಸಿದ್ದ ರಾಜ್ಯ ಮಟ್ಟದ ವಿಚಾರ ಸಂಕಿರಣವನ್ನು ಉದ್ಘಾಟಿಸುತ್ತ ಈ ವಿಷಯ ಪ್ರಕಟಿಸಿದರು.

ವಿದ್ಯಾವಂತ ಯುವಜನರನ್ನು ಕೃಷಿಯತ್ತ ಸೆಳೆಯಲು ರಾಜ್ಯದಲ್ಲಿ ಕೃಷಿ ಕೆಲಸವನ್ನು ಆಧುನೀಕರಿಸಲಾಗುವುದು. ತರಬೇತಿ ಇದರ ಮೇಲೆ ಹೆಚ್ಚಿನ ಒತ್ತು ನೀಡುತ್ತದೆ. ಪ್ರತಿ ಹಳ್ಳಿಯಲ್ಲೂ ತನ್ನದೇ ಆದ ದುಡಿಮೆಯ ಪಡೆಯಿರುತ್ತದೆ. ಜುಲೈನಲ್ಲಿ ಜಿಲ್ಲಾ ಮಟ್ಟದ ವಿಚಾರಸಂಕಿರಣಗಳು ನಡೆಯುತ್ತವೆ. ಅದರೊಂದಿಗೆ ಕೃಷಿ ದುಡಿಮೆ ಪಡೆಗೆ ದಾಖಲಾತಿಯನ್ನು ನಡೆಸಲಾಗುವುದು.

ಈ ಕಾರ್ಯಕ್ರಮದ ಅಂತಿಮ ಗುರಿ ರಾಜ್ಯದಲ್ಲಿ ಕೃಷಿ ಉತ್ಪಾದಕತೆಯನ್ನು ಬಹುಪಾಲು ಹೆಚ್ಚಿಸುವುದು ಎನ್ನಲಾಗಿದೆ.

ಕಿಮ್–ಟ್ರಂಪ್ ಸಿಂಗಪುರ ಶೃಂಗಸಭೆ: ಐತಿಹಾಸಿಕ ಹೆಜ್ಜೆ

ಸಮಾಜವಾದಿ ಕ್ಯೂಬಾದ ಮೇಲಿನ ಮುಂಚಿನ ಕಾರ್ಯತಂತ್ರಗಳು ವಿಫಲವಾದ್ದರಿಂದ, ಈ ಹಿಂದಿನ ಅಧ್ಯಕ್ಷ ಒಬಾಮರವರು ಪರಿಸ್ಥಿತಿಯಲ್ಲಿ ಉಂಟಾದ ಬದಲಾವಣೆಯಿಂದಾಗಿ ಬಲವಂತದಿಂದ ತಮ್ಮ ಸಾಮ್ರಾಜ್ಯಶಾಹಿ ಕಾರ್ಯವ್ಯೂಹವನ್ನು ಮರು ವಿಮರ್ಶೆಗೆ ಒಳಪಡಿಸಿದ್ದರು. ಇದೀಗ ಅದೇ ರೀತಿಯಾಗಿ ಟ್ರಂಪ್ ಕೂಡಾ ಬದಲಾದ ಪರಿಸ್ಥಿತಿಗೆ ಅನುಗುಣವಾಗಿ ಉ.ಕೊರಿಯಾ ಕುರಿತಂತೆ ಅಮೆರಿಕಾದ ಕಾರ್ಯತಂತ್ರವನ್ನು ಪುನರ್ ವಿಮರ್ಶೆ ಮಾಡುವಂತಾಯಿತು ಎಂದು ವ್ಯಾಖ್ಯಾನಿಸಲಾಗಿದೆ. ಅದಾಗ್ಯೂ, ಅಮೆರಿಕಾವು ಈ ದೇಶಗಳನ್ನು ತನ್ನ ಅಧೀನದಲ್ಲಿ ಇಟ್ಟು ಕೊಳ್ಳ ಬಯಸುವ ತನ್ನ ಬಯಕೆಯನ್ನು ಬಿಟ್ಟು ಕೊಟ್ಟಿದೆ ಅಥವಾ ಸಮಾಜವಾದ ವ್ಯವಸ್ಥೆಯ ಬಗ್ಗೆ ಸಾಮ್ರಾಜ್ಯಶಾಹಿಗಿರುವ ದ್ವೇಷವನ್ನು ಮರೆತು ಬಿಟ್ಟಿದೆ ಎಂದರ್ಥವಲ್ಲ.

ಜಗದ ಸುತ್ತ

ನಾಗರಾಜ್ ನಂಜುಂಡಯ್ಯ

"ಇಡೀ ವಿಶ್ವವೆ ಒಂದು ಪ್ರಮುಖ ಬದಲಾವಣೆಯನ್ನು ಮುಂದೆ ಕಾಣುತ್ತದೆ." ಹೀಗೆಂದು ಘೋಷಣೆ ಮಾಡಿದವರು ಉತ್ತರ ಕೊರಿಯಾದ ಅಧ್ಯಕ್ಷ ಕಿಮ್ ಜೊಂಗ್–ಯುನ್.

"ಯಾರಾದರೂ ಕೂಡ ಯುದ್ಧವನ್ನು ಮಾಡಬಹುದು; ಆದರೆ, ಅತ್ಯಂತ ಧೈರ್ಯಶಾಲಿ ಮಾತ್ರ ಶಾಂತಿಯನ್ನು ಬಯಸಬಲ್ಲನು" ಹೀಗೆಂದು ಹೇಳಿದವರು ಯು.ಎಸ್.ಎ ಅಧ್ಯಕ್ಷರಾದ ಡೊನಾಲ್ಡ್ ಟ್ರಂಪ್.

ಸಂದರ್ಭ ಜೂನ್ 12 ರಂದು ಸಿಂಗಪುರ್ ನಲ್ಲಿ ನಡೆದ ಶೃಂಗಸಭೆ. ಕೊರಿಯಾ ಪರ್ಯಾಯ ದ್ವೀಪದಲ್ಲಿ ಶಾಂತಿ ನೆಲೆಸುವಂತೆ ಮಾಡುವ ಪ್ರಕ್ರಿಯೆಗೆ ಈ ಶೃಂಗಸಭೆಯು ಐತಿಹಾಸಿಕ ತಿರುವು ಎಂದು ಜಗತ್ತಿನ ಶಾಂತಿ ಪ್ರಿಯರ ಭಾವನೆಯಾಗಿದೆ.

ಆದರೆ, ಕೇವಲ ಒಂದೂವರೆ ಒಂದುವರೆ ಪುಟಗಳಷ್ಟು ಮಾತ್ರ ಇರುವ ಘೋಷಣೆಯನ್ನು ಜಾಗತಿಕ ಮಾಧ್ಯಮ ಹೆಚ್ಚಾಗಿ ನಕಾರಾತ್ಮಕವಾಗಿಯೇ ಕಂಡಿದೆ. ಆದರೂ ಈ ಶೃಂಗಸಭೆಯು, ಕೊರಿಯಾನ್ ಪರ್ಯಾಯ ದ್ವೀಪದಲ್ಲಿನ ಉದ್ವಿಗ್ನತೆಯ ವಾತಾವರಣವನ್ನಂತೂ ಕಡಿಮೆ ಮಾಡಿದೆ. ಈ ನಿಟ್ಟಿನಲ್ಲಿ ಒಂದು ಶಾಶ್ವತವಾದ ಶಾಂತಿ ಮಾರ್ಗವನ್ನು ಈ ಶೃಂಗಸಭೆ ತೆರೆದಿಟ್ಟಿದೆ ಎಂದು ಈ ಎಲ್ಲಾ ವಿಶ್ಲೇಷಕರು ಒಪ್ಪಿಕೊಳ್ಳುತ್ತಾರೆ.

ಕೆಲವು ತಿಂಗಳ ಹಿಂದೆಯಷ್ಟೆ, ಇಬ್ಬರು ಅಧ್ಯಕ್ಷರು ಶಾಂತಿ ಪ್ರಕ್ರಿಯೆಗಾಗಿ ಸಭೆ ಸೇರುತ್ತಾರೆ ಎಂಬ ಘೋಷಣೆ ಹೊರಬಿದ್ದ ನಂತರ, ಅನೇಕರು ಹುಬ್ಬೇರಿಸಿ ಸಂಶಯ ವ್ಯಕ್ತಪಡಿಸಿದ್ದರು. ಆದರೆ, 1950–53 ಕೊರಿಯಾದ ಯುದ್ಧದ ನಂತರದ ಈ ಕಾಲಾವಧಿಯಲ್ಲಿ ಅಧಿಕೃತವಾಗಿ ಉತ್ತರ ಕೊರಿಯಾ ಮತ್ತು ಯು.ಎಸ್.ಎ ಮಧ್ಯೆ ಯಾವುದೇ ಇಂತಹ ಸಭೆ ನಡೆದಿರಲಿಲ್ಲವೆಂಬುದನ್ನು ಇಲ್ಲಿ ಗಮನಿಸಬೇಕು. ಕೆಲವು ತಿಂಗಳುಗಳ ಹಿಂದಿನವರೆಗೂ ಈ ಇಬ್ಬರು ನಾಯಕರು ಒಬ್ಬರ–ಮೇಲೊಬ್ಬರು ಆರೋಪ–ಪ್ರತ್ಯಾರೋಪ ಮತ್ತು ಬೆದರಿಕೆಯ ಕೆಸರೆರಚಾಟದಲ್ಲಿ ತೊಡಗಿದ್ದರು. ಇದು ಯುದ್ಧದ ಕಾರ್ಮೋಡವನ್ನು ಸೃಷ್ಟಿಸಿತ್ತು, ಆತಂಕದ ವಾತಾವರಣ ಮೂಡಿತ್ತು. ಜೊತೆಗೆ ಟ್ರಂಪ್, ಕಿಮ್ ನೊಂದಿಗೆ ಯಾವುದೇ ಮಾತುಕತೆ ಅಸಾಧ್ಯವೆಂದು, ಯಾವುದೇ ಶೃಂಗಸಭೆ ಯಲ್ಲಿ ಪಾಲ್ಗೊಳ್ಳುವುದಿಲ್ಲ ಎಂದು ಘೋಷಿಸಿ, ಅವನೊಬ್ಬ ಹುಚ್ಚನೆಂದು ಟ್ವಿಟ್ಟರ್ ನಲ್ಲಿ ಪೋಸ್ಟ್ ಮಾಡಿದ್ದರು.

ದಕ್ಷಿಣ ಕೊರಿಯಾ ಮತ್ತು ಚೀನಾಗಳ ಪಾತ್ರ

ಶೃಂಗಸಭೆ ನಡೆಯುವುದರ ಹಿಂದೆ ದಕ್ಷಿಣ ಕೊರಿಯಾ ಮತ್ತು ಚೀನಾದ ಪಾತ್ರವು ಗಮನಾರ್ಹವಾದದ್ದು ಈ ನಿಟ್ಟಿನಲ್ಲಿ ತೆರೆಮರೆಯಲ್ಲಿ ಪೂರ್ವಸಿದ್ಧತೆಗಳು ತೀವ್ರತರ ದಲ್ಲಿಯೇ ನಡೆಯುತ್ತಿದದ್ದು ತಿಳಿಯದ ಸಂಗತಿಯೇನಲ್ಲ. ಇದೇ ವರ್ಷ ಏಪ್ರಿಲ್ ನಲ್ಲಿ ನಡೆದ ಉತ್ತರ ಮತ್ತು ದಕ್ಷಿಣ ಕೊರಿಯಾ ಅಧ್ಯಕ್ಷರ ನಡುವಿನ ಶೃಂಗಸಭೆಯು ಇದನ್ನು ಮತ್ತಷ್ಟು ಖಾತ್ರಿ ಗೊಳಿಸಿತ್ತು. ಇದರ ನಂತರ, ಯು.ಎಸ್. ನ ಕಾರ್ಯದರ್ಶಿ ಪೆಂಪೆಯೊ ರವರು ಉತ್ತರ ಕೊರಿಯಾಕ್ಕೆ ಎರಡು ಬಾರಿ ಭೇಟಿಕೊಟ್ಟಿದ್ದು, ಅದೇ ರೀತಿಯಲ್ಲಿ ಕೊರಿಯಾದ ಕಾರ್ಯದರ್ಶಿ ಕಿಮ್ ಯಾಂಗ್–ಚಾಲ್ನ್ ರು ನ್ಯೂ ಯಾರ್ಕ್ ಗೆ ಕೊಟ್ಟಿದ್ದ ಭೇಟಿಗಳು ಸೇರಿದಂತೆ, ವಿವಿಧ ಹಂತದ ಅಧಿಕಾರಿಗಳ ಸರಣಿ ಸಭೆಗಳು, ಮತ್ತೊಂದೆಡೆ, ಸಿಂಗಪುರದ ಈ ಶೃಂಗಸಭೆಗೆ ಏರ್ಪಡಿಸಿದ್ದ ಸೆಕ್ಯುರಿಟಿ ವ್ಯವಸ್ಥೆ, ಇದೆಲ್ಲದರ ಹಿಂದೆ ಚೀನಾ ಮತ್ತು ದ.ಕೊರಿಯಾದ ಅಪಾರವಾದ ಪಾತ್ರವನ್ನು ನಿರ್ಲಕ್ಷಿಸಲು ಸಾಧ್ಯವಿಲ್ಲ.

ಅಂತಿಮವಾಗಿ ಶೃಂಗಸಭೆಯು ಯಶಸ್ವಿಯಾಗಿಯೇ ನಡೆಯಿತು ಎಂದು ಪರಿಗಣಿಸಬೇಕು. ಸೋವಿಯತ್ ಒಕ್ಕೂಟದ ಪತನವಾದ ನಂತರ ಉತ್ತರ ಕೊರಿಯಾದಲ್ಲಿ ಏನು ನಡೆಯುತ್ತಿದೆ ಎಂಬುದರ ಬಗ್ಗೆ ಜಗತ್ತಿನಾದ್ಯಂತ ಸಾಕಷ್ಟು ಅಜ್ಞಾನ ತುಂಬಿತ್ತು. ಕಳೆಷ ವರ್ಷ ಕಿಮ್ ಜೊಂಗ್ ರವರ ಅಧ್ಯಕ್ಷತೆಯಲ್ಲಿ ಹೈಡ್ರೋಜನ್ ಬಾಂಬ್ ಮತ್ತು ಹಲವು ಕ್ಷಿಪಣಿಗಳ ಪರೀಕ್ಷೆಗಳನ್ನು ಮಾಡುವುದರ ಮೂಲಕವೇ ತನ್ನ ಭದ್ರ ಇರುವಿಕೆಯನ್ನು ಜಗತ್ತಿಗೆ ಪರಿಚಿಸಿತ್ತು, ಇದು ಅಮೆರಿಕಾಕ್ಕೆ ನುಂಗಲಾರದ ತುತ್ತಾಗಿತ್ತು. ಹಿಂದಿನಿಂದಲೂ ಯಾವುದೇ ಅಧಿಕಾರದಲ್ಲಿದ್ದ ಅಮೆರಿಕಾದ ಅಧ್ಯಕ್ಷರೊಂದಿಗೆ, ಡಿ ಪಿ ಆರ್ ಕೆ ಯ ಯಾವುದೇ ಅಧ್ಯಕ್ಷರೂ ಸಹಾ ಎಂದಿಗೂ ಭೇಟಿಯಾಗಿರಲಿಲ್ಲ. ಈ ಹಿನ್ನೆಲೆಯಲ್ಲಿ ಸಿಂಗಪುರದ ಶೃಂಗಸಭೆ ಮಹತ್ವಪೂರ್ಣವಾದದ್ದು ಎಂದು ಪರಿಗಣಿಸಲೇಬೇಕು.



ಶೃಂಗಸಭೆ ಯಲ್ಲಿ ಅಂಗೀಕರಿಸಿದ ಘೋಷಣೆ ಯಲ್ಲಿ, ಅಮೆರಿಕಾವು ಒಪ್ಪಿಕೊಂಡ ಮತ್ತೊಂದು ಪ್ರಮುಖ ಅಂಶ ವೆಂದರೆ, ಉ.ಕೊರಿಯಾಕ್ಕೆ ಪೂರ್ಣ ಪ್ರಮಾಣದಲ್ಲಿ ಭದ್ರತಾ ಖಾತರಿ ನೀಡುವುದು. ಇದು ಉ.ಕೊರಿಯಾದ ಪ್ರಮುಖ ಬೇಡಿಕೆಗಳಲ್ಲಿ ಒಂದಾಗಿತ್ತು. ಟ್ರಂಪ್ ಇದಕ್ಕೆ ಒಪ್ಪಿಗೆ ಸೂಚಿಸಿದ್ದರೂ ಸಹಾ, ಖಾತರಿಗಳನ್ನು ಸರಿಯಾಗಿ ಸ್ಪಷ್ಟ ಗೊಳಿಸುವಲ್ಲಿ ಆಸಕ್ತಿ ತೋರಿಲ್ಲ. ಈ ಪ್ರಕ್ರಿಯೆಯ ಭಾಗವಾಗಿ ಉ.ಕೊರಿಯಾವು, ಪರಮಾಣುಗಳ ನಿಶಸ್ತ್ರೀಕರಣಕ್ಕೆ ಒಪ್ಪಿಗೆ ಸೂಚಿಸಿರುವುದು ಅತ್ಯಂತ ಪ್ರಮುಖ ಖಾತ್ರಿಯಾಗಿದೆ. ಜೊತೆಗೆ, ಎರಡೂ ದೇಶಗಳು ಕೊರಿಯಾದ ಪರ್ಯಾಯ ದ್ವೀಪದಲ್ಲಿ ಶಾಶ್ವತವಾದ ಶಾಂತಿ ಸ್ಥಾಪನೆಗೆ ತಮ್ಮ ಎಲ್ಲಾ ಪ್ರಯತ್ನ ಗಳನ್ನು ಮಾಡಲು ಒಪ್ಪಿಗೆ ಸೂಚಿಸಿವೆ.

ಅಂತರಾಷ್ಟ್ರೀಯ ಮಾಧ್ಯಮಗಳು ಉ.ಕೊರಿಯಾದ ಆಡಳಿತವನ್ನು ಸರ್ವಾಧಿಕಾರಶಾಹಿಯೆಂದೂ ನಾಯಕರನ್ನು ಸರ್ವಾಧಿಕಾರಿಗಳೆಂದು ತಮ್ಮ ಅನುಕೂಲಕ್ಕೆ ತಕ್ಕಂತೆ ಬಿಂಬಿಸಿಕೊಂಡು ಬಂದಿದ್ದಾರೆ. ಈ ದೇಶದ ಬಗ್ಗೆ ಸುದ್ದಿಗಳು ಹರಡುವ ಮೂಲಗಳಲ್ಲಿ ಹೆಚ್ಚಿನವು ನಂಬಲರ್ಹವಾಗಿರಲಿಲ್ಲ. ಈ ಹಿನ್ನೆಲೆಯಲ್ಲಿ ಮೊದಲ ಬಾರಿಗೆ ಇಡೀ ವಿಶ್ವವೇ ಈ ಶೃಂಗಸಭೆಯ ಮೂಲಕ ಉ.ಕೊರಿಯಾ ನಾಯಕರ ಕಡೆಗೆ ವಿಸ್ಮಯದಿಂದ ನೋಡುವ ಅವಕಾಶವಾಯಿತು.

ಶೃಂಗಸಭೆಯ ಪ್ರಮುಖ ಘೋಷಣೆಗಳು

ದಕ್ಷಿಣ ಕೊರಿಯಾದ ಪ್ರದೇಶದಲ್ಲಿ ಅಮೆರಿಕಾವು ನಡೆಸುತ್ತಿರುವ "ಯುದ್ಧದ ಆಟ"(ವಾರ್ ಗೇಮ್ಸ್)ಗಳನ್ನು ತಕ್ಷಣವೇ ನಿಲ್ಲಿಸಬೇಕು. ಇದು "ಪ್ರಚೋದನಕಾರಿ" ಹಾಗೂ ತನ್ನ ಭದ್ರತೆಗೆ ಬೆದರಿಕೆಯನ್ನು ಒಡ್ಡುತ್ತದೆ ಎಂಬ ಉ.ಕೊರಿಯಾದ ಅಭಿಪ್ರಾಯವನ್ನು ಅಮೆರಿಕದ ಅಧ್ಯಕ್ಷ ಟ್ರಂಪ್ ಒಪ್ಪಿಕೊಂಡು, ಮುಂದಿನ ಆಗಸ್ಟ್ ನಲ್ಲಿ ನಡೆಯಲಿರುವ ಸಭೆಯಲ್ಲಿ" ಯುದ್ಧದ ಆಟಗಳಿಗೆ" ತೆರೆ ಎಳೆಯಲು ಟ್ರಂಪ್ ಒಪ್ಪಿಗೆ ಸೂಚಿಸಿದ್ದಾರೆ ಎನ್ನಲಾಗಿದೆ. ಅಮೆರಿಕದ ಪಡೆಗಳು ಯುದ್ಧದ ಆಟಗಳನ್ನು ಆಡುತ್ತಿಲ್ಲ. ಇದೊಂದು ಸಾಮಾನ್ಯವಾಗಿ ನಡೆಯುವ ಮಿಲಿಟರಿ ಸಮರಾಭ್ಯಾಸದ ಕಸರತ್ತುಗಳು ಅಷ್ಟೇ. ಈ ಒಪ್ಪಂದದಿಂದ ಅಮೆರಿಕಾಕ್ಕೆ ಹಿನ್ನಡೆ ಎಂದು ಕೆಲವು ರಕ್ಷಣಾ ವಲಯಗಳ ಪ್ರತಿನಿಧಿಗಳು ಅಭಿಪ್ರಾಯ ಪಟ್ಟಿದ್ದಾರೆ. ಆದರೆ, ಡೊನಾಲ್ಡ್ ಟ್ರಂಪ್ ತಮ್ಮ ವಿಶಿಷ್ಟ ಶೈಲಿಯಲ್ಲಿ ಪ್ರಚೋದನಕಾರಿಯಾದ ನಮ್ಮ "ಯುದ್ದದ ಆಟ"ಗಳನ್ನು ನಿಲ್ಲಿಸುತ್ತೇವೆ. ಏಕೆಂದರೆ, ನಮ್ಮ ಬೊಕ್ಕಸ ದಿಂದ ಅಪಾರ ಹಣ ವ್ಯಯವಾಗುವುದನ್ನು ಉಳಿಸಬಹುದು ಎಂದಿದ್ದಾರೆ.

ಐತಿಹಾಸಿಕ ಹಿನ್ನೆಲೆ: ಬದಲಾದ ಪ್ರತಿಕೂಲ ವಾತಾವರಣ

ಈ ಶೃಂಗಸಭೆಯ ಸಂದರ್ಭದಲ್ಲಿ ಏನೇ ಸಕಾರಾತ್ಮಕವಾದ ಘೋಷಣೆ ಏರ್ಪಟ್ಟಿದ್ದರು ಸಹಾ, 1950–53 ಕೊರಿಯಾದ ಯದ್ದವು ಅಧಿಕೃತವಾಗಿ ಕೊನೆಗೊಂಡಿಲ್ಲ ಎಂಬುದನ್ನು ಮರೆಯಬಾರದು. ಯುದ್ಧ ವಿರಾಮದ ನಂತರ 1954 ರ ಜಿನಿವಾ ಸಮ್ಮೇಳನದಲ್ಲಿ ಶಾಂತಿಯ ಪ್ರಕ್ರಿಯೆಗಳಿಗೆ ಭಂಗ ತಂದು ಕೊರಿಯಾವನ್ನು ಎರಡು ಹೋಳು ಮಾಡಲಾಯಿತು. ಹಾಗೆಯೇ, 1957 ರಲ್ಲಿ ಕೊರಿಯಾದ ಪರ್ಯಾಯ ದ್ವೀಪದಲ್ಲಿ ಪರಮಾಣು ಶಸ್ತ್ರಾಸ್ತ್ರಗಳನ್ನು ತರುವ ತನ್ನ ದುರುದ್ದೇಶವನ್ನು ಏರ್ಪಟ್ಟಿದ್ದ ಕದನ ವಿರಾಮದ ಒಪ್ಪಂದಕ್ಕೆ ವ್ಯತಿರಿಕ್ತವಾಗಿ ಯು.ಎಸ್. ಘೋಷಿಸಿತು. ಅಲ್ಲಿಂದೀಚೆಗೆ, ತನ್ನ ನೌಕಾ ದಳದ ಹಡಗುಗಳನ್ನು, ಪತ್ತೇದಾರಿ ವಿಮಾನ ಗಳನ್ನು ಉ.ಕೊರಿಯಾಕ್ಕೆ ಕಳುಹಿಸುವುದರ ಮೂಲಕ ಮತ್ತು ಆ ಪ್ರದೇಶದಲ್ಲಿ ತನ್ನ ಮಿಲಿಟರಿ ಉಪಸ್ಥಿತಿಯ ಕಾರ್ಯಾಚರಣೆಯನ್ನು ಹೆಚ್ಚಿಸುವ ಮೂಲಕ ಉ.ಕೊರಿಯಾದ ವಿರುದ್ಧ ತನ್ನ ಪ್ರತಿಕೂಲ ಚಟುವಟಿಕೆಗಳನ್ನು ಅಮೆರಿಕಾವು ಮುಂದುವರಿಸಿತ್ತು. ಆ ಸಂದರ್ಭದಲ್ಲಿ ಮಾತುಕತೆ ನಡೆಸಲು ಉ.ಕೊರಿಯಾದ ಎಲ್ಲಾ ಸತತ ಪ್ರಯತ್ನಗಳನ್ನು ಅಮೆರಿಕಾವು ತಿರಸ್ಕರಿಸಿತ್ತು. ಆ ನಂತರದಲ್ಲಿ ಹಿಂದಿನ ಅಧ್ಯಕ್ಷ ಜಾರ್ಜ್ ಬುಷ್ .ಕೊರಿಯಾವನ್ನು "ದುಷ್ಟ ಕೂಟದ ಅಕ್ಷ" ವೆಂದು ಘೋಷಿಸಿದಾಗ ಸಂಬಂಧ ಗಳು ಮತ್ತಷ್ಟು ಹದಗೆಟ್ಟವು. ಹೀಗೆ ಅಮೆರಿಕಾವು ಎಲ್ಲಾ ಒಪ್ಪಂದಗಳು ಮತ್ತು ಬದ್ಧತೆಗಳನ್ನು ಉಲಂಘಿಸುವುದನ್ನು ಮುಂದುವರಿಸಿತು. ಈ ಕಾರಣ ಗಳಿಂದಾಗಿ, ಉ.ಕೊರಿಯಾ 2003 ರಲ್ಲಿ ಪರಮಾಣು ಪ್ರಸರಣ ವಿರೋಧಿ ಒಪ್ಪಂದಿಂದ ಹಿಂದಕ್ಕೆ ಸರಿಯಿತು. ಆನಂತರ ಉ.ಕೊರಿಯವನ್ನು ಒಳಗೊಂಡಂತೆ, ಆರು ರಾಷ್ಟ್ರ (ಯು.ಎಸ್., ರಷ್ಯಾ, ಚೀನಾ, ಜಪಾನ್ ಮತ್ತು ಧಕ್ಷಿಣ ಕೊರಿಯಾ) ಗಳ ಮಾತುಕತೆಗಳಲ್ಲಿ ಸಹಕರಿಸಲು ಅಮೆರಿಕಾವು ನಿರಾಕರಿಸಿತ್ತು. ಬದಲಿಗೆ ಕೊರಿಯಾದ ಪರ್ಯಾಯ ದ್ವೀಪದಲ್ಲಿ ತನ್ನ ಮಿಲಿಟರಿ "ಯುದ್ಧದ ಆಟ"ಗಳನ್ನು ಹೆಚ್ಚಿಸಿತು, ಜೊತೆಗೆ ಉ.ಕೊರಿಯಾದ ಮೇಲೆ ಆರ್ಥಿಕ ನಿರ್ಬಂಧಗಳನ್ನು ಹೇರಿತು.

ಹೀಗೆ, ಅಮೆರಿಕವು ಎಲ್ಲಾ ಒಪ್ಪಂದ ಗಳನ್ನು ಉಲಂಘಿಸಿ, ಉ.ಕೊರಿಯಾವನ್ನು ಬೆದರಿಸಿತು. ಅದರ ಆರ್ಥಿಕತೆಯನ್ನು ಅಧೋಗತಿಗೆ ತರುವ ದುರುದ್ದೇಶದಿಂದ ಕಾರ್ಯ ತಂತ್ರ ರೂಪಿಸಲು ಆರಂಭಿಸಿತು. ಇದರಿಂದಾಗಿ ತನ್ನ ದೇಶದ ರಕ್ಷಣೆಗಾಗಿ ಉ.ಕೊರಿಯಾ 2006 ರಿಂದ ಪರಮಾಣು ಕಾರ್ಯವನ್ನು ಮತ್ತು ಪರೀಕ್ಷೆ ಗಳನ್ನು ಆರಂಭಿಸಲೇ ಬೇಕಾದ ಅನಿವಾರ್ಯತೆ ಆಯಿತು. ಅಂದಿನಿಂದ ಇತ್ತೀಚಿನ ವರೆವಿಗೂ ಅಣು ಪರೀಕ್ಷೆಗಳನ್ನು ಮುಂದುವರಿಸಿಕೊಂಡು ಬಂದಿತು. ಆದಾಗ್ಯೂ, ಶಾಂತಿ ಒಪ್ಪಂದಕ್ಕೆ ಉ.ಕೊರಿಯಾ ಒತ್ತಾಯ ಮಾಡುತ್ತಲೇ ಬಂದಿದೆ. ಆದರೆ ಇಲ್ಲಿಯವರೆಗೂ ಅಮೆರಿಕಾ ನಿರಾಕರಿಸುತ್ತಲ್ಲೇ ಬಂದಿತ್ತು. ತನ್ನ ಮಿಲಿಟರಿ ಪ್ರಾಬಲ್ಯ ದಿಂದ ಉ.ಕೊರಿಯಾವನ್ನು ಬಲಹೀನ ಮಾಡ ಬಹುದೆಂದು ಅಂದಾಜು ಮಾಡಿದ್ದ ಅಮೆರಿಕದ ಕಾರ್ಯ ತಂತ್ರ ಸಪಲವಾಗಿಲ್ಲ. ಉ.ಕೊರಿಯಾ ನೇತೃತ್ವದಲ್ಲಿ ಸಮಾಜವಾದದ ವ್ಯವಸ್ಥೆ ಯನ್ನು ಕಟ್ಟುವ ಹಾಗೂ ಸಾಮ್ರಾಜ್ಯಶಾಹಿ–ವಿರೋಧಿ ದೊರಣೆಯನ್ನು ಪ್ರತಿಪಾದಿಸಿ, ಅಮೆರಿಕಾಕ್ಕೆ ಸೆಡ್ಡು ಹೊಡೆದು ತಿರುಗೇಟು ನೀಡಲು ತಯಾರಾಯಿತು.

ಶಾಂತಿ ಸ್ಥಾಪನೆ ಹಾಗೂ ಅಭಿವೃದ್ಧಿಯತ್ತ

ಜಂಟಿ ಘೋಷಣೆ ಉಭಯ ದೇಶಗಳ ಹೊಸ ಸಂಬಂಧಗಳೊಂದಿಗೆ ಹೊಸ ಅಲೆಯನ್ನು ಹುಟ್ಟು ಹಾಕಲು ಅಂದರೆ ಪ್ರಮುಖವಾಗಿ, ಕೊರಿಯಾದ ಪರ್ಯಾಯ ದ್ವೀಪದಲ್ಲಿ ಶಾಶ್ವತವಾಗಿ ಶಾಂತಿ ಸ್ಥಾಪನೆ ಮತ್ತು ಅಭಿವೃದ್ಧಿಯ ಪಥದತ್ತ ಸಾಗುವ ಆಶಯವನ್ನು ಮೂಡಿಸಿವೆ. ಆ ನಿಟ್ಟಿನಲ್ಲಿ ಶಾಂತಿಯೊಂದಿಗೆ, ಸಮೃದ್ಧಿ ಹಾಗೂ ಹೆಚ್ಚು ಭದ್ರತೆಯ ಉತ್ತೇಜನಕ್ಕೆ ಸಹಕರಿಸಲು ಇಬ್ಬರೂ ಬದ್ಧತೆಯನ್ನು ವ್ಯಕ್ತಪಡಿಸಿದ್ದಾರೆ.

ಈ ಶೃಂಗಸಭೆಯಲ್ಲಿ ಮೂಡಿ ಬಂದಿರುವ ಘೋಷಣೆಗಳು ಇಡೀ ವಿಶ್ವಕ್ಕೆ ಶಾಂತಿಯ ಸಂದೇಶ ವನ್ನು ರವಾನಿಸಿದೆ ಎಂದು ಅನೇಕ ವಿಶ್ವ ನಾಯಕರುಗಳು ವಿಶ್ವಾಸ ವ್ಯಕ್ತಪಡಿಸಿದ್ದಾರೆ, ಪ್ರಮುಖವಾಗಿ ದಕ್ಷಿಣ ಕೊರಿಯಾದ ಅಧ್ಯಕ್ಷ ರಾದ ಮೂನ್ ಜೇ–ಇನ್, ರವರು "ಈ ಒಪ್ಪಂದವು ನಮ್ಮನ್ನು ಹೊಸ ಹಾದಿಯತ್ತಾ ಮುಂದುವರಿಸಲು ಆಧಾರವಾಗಿದೆ. ಮತ್ತು ಈ ಎರಡೂ ದೇಶಗಳ ನಡುವೆ ಸಂಭವಿಸಬಹುದಾಗಿದ್ದ, ಹಲವಾರು ತೊಂದರೆಗಳ ಸಾಧ್ಯತೆಯನ್ನು ತಳ್ಳಿ ಹಾಕಿದೆ. ಇಬ್ಬರೂ ಪರಿಸ್ಥಿತಿಯನ್ನು ಸರಿಯಾಗಿ ಅರ್ಥೈಸಿ ಕೊಂಡು ಬಾಂಧವ್ಯ ವೃದ್ಧಿ ಸಿಕೊಳ್ಳುವ ನಿಟ್ಟಿನಲ್ಲಿ ಈ ಒಪ್ಪಂದಕ್ಕೆ ಬಂದಿರುವುದು ಉತ್ತಮ ಬೆಳವಣಿಗೆಯಾಗಿದೆ. ಮತ್ತೆ ಹಿಂದುರಿಗಿ ನೋಡದೆ ಈ ಪಯಣವನ್ನು ಮುಂದುವರಿಸುವಂತೆ ಹೇಳಿಕೆ ನೀಡಿದ್ದಾರೆ. ಈ ಶೃಂಗಸಭೆ ಸಂಭವಿಸಲು ಮೂನ್ ರವರ ಕೊಡುಗೆ ಶ್ಲಾಘನೀಯ ಎಂಬುದನ್ನು ಮರೆಯಬಾರದು. ಅದೇರೀತಿ, ಉ.ಕೊರಿಯಾದ ಕೊರಿಯನ್ ಸೆಂಟ್ರಲ್ ನ್ಯೂಸ್ ಎಜೆನ್ಸಿ (ಕೆ.ಸಿ.ಎನ್.ಎ)ಯ ಮೇಲೆ ಟ್ರಂಪ್ ಹೇರಿರುವ ನಿರ್ಬಂಧಗಳನ್ನು ಹಿಂಪಡೆಯುವ ನಿರ್ಧಾರವು ನಿಜಕ್ಕೂ ಒಳ್ಳೆಯ ಬೆಳವಣಿಗೆ ಎಂದಿದೆ. ಹಾಗೆಯೇ, ಕಿಮ್ ಜೊಂಗ್ ರವರು ಹೇಳಿರುವಂತೆ, ಅಮೆರಿಕಾವು ನಂಬಿಕೆಯನ್ನು ಕಾಪಾಡಿಕೊಂಡು ಬಂದರೆ ಬಾಂಧವ್ಯವನ್ನು ವೃದ್ಧಿಸಲು ಇಬ್ಬರು ಮುಖಂಡರು ಅನುಕೂಲಕರ ಸಮಯದಲ್ಲಿ ಮತೆ ಬೇಟಿಯಾಗವ ಆಶಯವನ್ನು ವ್ಯಕ್ತಪಡಿಸಿದ್ದಾರೆ.

ಬದಲಾದ ಅಮೆರಿಕಾದ ಕಾರ್ಯ ತಂತ್ರ :

ಸಮಾಜವಾದಿ ಕ್ಯೂಬಾದ ಮೇಲಿನ ಮುಂಚಿನ ಕಾರ್ಯತಂತ್ರ ಗಳು ವಿಫಲವಾದ್ದರಿಂದ, ಈ ಹಿಂದಿನ ಅಧ್ಯಕ್ಷ ಒಬಾಮರವರು ಪರಿಸ್ಥಿತಿಯಲ್ಲಿ ಉಂಟಾದ ಬದಲಾವಣೆಯಿಂದಾಗಿ ಬಲವಂತದಿಂದ ತಮ್ಮ ಸಾಮ್ರಾಜ್ಯಶಾಹಿ ಕಾರ್ಯವ್ಯೂಹವನ್ನು ಮರು ವಿಮರ್ಶೆಗೆ ಒಳಪಡಿಸಿದ್ದರು. ಇದೀಗ ಅದೇ ರೀತಿಯಾಗಿ ಟ್ರಂಪ್ ಕೂಡಾ ಬದಲಾದ ಪರಿಸ್ಥಿತಿಗೆ ಅನುಗುಣವಾಗಿ ಉ.ಕೊರಿಯಾ ಕುರಿತಂತೆ ಅಮೆರಿಕಾದ ಕಾರ್ಯತಂತ್ರವನ್ನು ಪುನರ್ ವಿಮರ್ಶೆ ಮಾಡುವಂತಾಯಿತು ಎಂದು ವ್ಯಾಖ್ಯಾನಿಸಲಾಗಿದೆ. ಅದಾಗ್ಯೂ, ಅಮೆರಿಕಾವು ಈ ದೇಶಗಳನ್ನು ತನ್ನ ಅಧೀನದಲ್ಲಿ ಇಟ್ಟು ಕೊಳ್ಳ ಬಯಸುವ ತನ್ನ ಬಯಕೆಯನ್ನು ಬಿಟ್ಟು ಕೊಟ್ಟಿದೆ ಅಥವಾ ಸಮಾಜವಾದ ವ್ಯವಸ್ಥೆಯ ಬಗ್ಗೆ ಸಾಮ್ರಾಜ್ಯಶಾಹಿಗಿರುವ ದ್ವೇಷವನ್ನು ಮರೆತು ಬಿಟ್ಟಿದೆ ಎಂದರ್ಥವಲ್ಲ. ಅಮೆರಿಕಕ್ಕೆ ಬಂದು ಹೋದ ಎಲ್ಲಾ ಅಧ್ಯಕ್ಷರು ನಿರಂತರವಾಗಿ ದುಡಿದು ಶಾಂತಿ ಸ್ಥಾಪನೆಗಾಗಿ "ಪಾರಿವಾಳಗಳನ್ನು ಹಾರಿಸಿ ನೋಬಲ್ ಶಾಂತಿ ಪಾರಿತೋಷಕ" ಪಡೆಯಲು ಎಂದು ಸಹ ಭಾವಿಸಕೂಡದು. ಬದಲಾದ ಸಂದರ್ಭವೇ, ನಿಜವಾದ ನೈಜ ಕಾರಣಗಳು ಎಂದು ಪರಿಗಣಿಸಬೇಕು.


ಉ.ಕೊರಿಯಾಕ್ಕೆ ಇದೀಗ ಅಗತ್ಯವಿರುವುದು ತನ್ನ ದೇಶದ ಮೇಲೆ ಹೇರಿರುವ ಆರ್ಥಿಕ ನಿರ್ಬಂಧಗಳನ್ನು ಅಮೆರಿಕವು ತೆಗೆಯಬೇಕೆಂಬುದು, ಏಕೆಂದರೆ, ಅದು ಆ ದೇಶದ ಅಭಿವೃದ್ಧಿಗೆ ತೊಡಕಾಗಿದೆ. ಮತ್ತೊಂದೆಡೆ, ಅಮೆರಿಕಾ ಮತ್ತು ದಕ್ಷಿಣ ಕೊರಿಯಾ ದೇಶಗಳು ಉ.ಕೊರಿಯಾವನ್ನು ಶೋಷಣೆಗೈಯ್ಯಲು ಅದರ ಸಂಪನ್ಮೂಲ ಗಳ ಮೇಲೆ ಗಮನ ಕೇಂದ್ರೀಕರಿಸಿವೆ. ಏಕೆಂದರೆ ಕೊರಿಯಾ ಇಂದಿನ ಸ್ಮಾರ್ಟ್ ಗ್ಯಾಡ್ಜೆಟ್ ನಲ್ಲಿ ಬಳಸಲಾಗುವ ಅಪರೂಪದ ಭೂ ಲೋಹಗಳ ದೊಡ್ಡ ದೊಡ್ಡ ಪ್ರಮಾಣದ, ಕಬ್ಬಿಣ ಮತ್ತು ಖನಿಜಗಳ ನಿಕ್ಷೇಪಗಳನ್ನು ಹೊಂದಿದೆ. ಜೊತೆಗೆ, ಅಂತರ್‍ರಾಷ್ಟ್ರೀಯ ಹಣಕಾಸು ಬಂಡವಾಳ ಹೂಡಿಕೆಗೆ ಉ.ಕೊರಿಯಾದಲ್ಲಿ ಸಣ್ಣದಾದರೂ ಇರುವ ಮುಕ್ತ ಅವಕಾಶವನ್ನು ಬಳಸಲು ಅಲೋಚಿಸುತ್ತಿದೆ. ದಕ್ಷಿಣ ಕೊರಿಯಾವು ಉ. ಕೊರಿಯಾದ ತಂತಜ್ಞಾನವನ್ನು ಬಳಸಿಕೊಂಡು, ತನ್ನ ರೈಲಿನ ಸಂಪರ್ಕವನ್ನು ಹೇಗೆ ಯುರೋಪ್‌ನ್ನು ಕಡಿಮೆ ಕಾಲಮಾನದಲ್ಲಿ ತಲುಪುವಂತ ಯೋಜನೆ ರೂಪಿಸಬಹುದು ಎಂಬ ಲೆಕ್ಕಾಚಾರದಲ್ಲಿದೆ. ಹಾಗೆಯೇ, ರಷ್ಯವು ಕೂಡಾ, ತನ್ನ ಅನಿಲ ಮಾರುಕಟ್ಟೆಯ ವಿಸ್ತರಣೆಗಾಗಿ ಎದುರು ನೋಡುತ್ತಿದೆ. ಉ.ಕೊರಿಯಾದ ಪರಿಣತ ಶ್ರಮಶಕ್ತಿ ಅದರ ಮತ್ತೊಂದು ದೊಡ್ಡ ಆಕರ್ಷಣೆಯಾಗಿದೆ. ಇಷ್ಟೆಲ್ಲಾ ಅವಕಾಶಗಳನ್ನು ಈ ಶೃಂಗಸಭೆಯು ತೆರೆದಿಟ್ಟಿದೆ.

ಸಾಮ್ರಾಜ್ಯಶಾಹಿ ವರ್ಗಗುಣಗಳು ಎಂದಿಗೂ ಬದಲಾಗದು

ಶೃಂಗಸಭೆ ನಡೆದಿದೆ, ಶಾಂತಿ ಸ್ಥಾಪನೆಗಾಗಿ ಮತ್ತು ಅಭಿವೃದ್ಧಿ ಗಾಗಿ ಘೋಷಣೆ ಗಳ ಮೂಲಕ ಒಪ್ಪಂದಗಳು ಏರ್ಪಟ್ಟಿವೆ. ಆದರೂ ಸಾಮ್ರಾಜ್ಯಶಾಹಿಯ ಶಾಂತಿಯ ಭಾಷೆಯ ನಿಜವಾದ ಉದ್ದೇಶಗಳು ಏನೆಂಬುದನ್ನು ತಿಳಿದವರೇ ಬಲ್ಲರು. ಆದ್ದರಿಂದ, ಯಾವಾಗಲೂ ಎಚ್ಚರಿಕೆ ಹಾಗೂ ಜಾಗರೂಕತೆ ಯಿಂದ ಬೆಳವಣಿಗೆಗಳನ್ನು ಗಾಂಭೀರ್ಯದಿಂದ ವೀಕ್ಷಿಸುತ್ತಿರಬೇಕು. ಸಾಮ್ರಾಜ್ಯ ಶಾಹಿಯು ಹೆಣೆಯುವ ಬಲೆಗೆ ಬೀಳದೆ, ಅದರಿಂದ ಯಾವುದೇ ರೀತಿಯ ರಿಯಾಯಿತಿ ಪಡೆಯದೆ. ಜಗತ್ತಿನ ಯಾವುದೇ ಪ್ರದೇಶದಲ್ಲಿ ಶಾಂತಿ ಸ್ಥಾಪನೆಗಾಗಿ, ಇಡುವ ಒಂದು ಸಣ್ಣ ಹೆಜ್ಜೆಯನ್ನು ಸ್ವಾಗತಿಸಲೇ ಬೇಕಾಗಿದೆ, ಅದು ಒಂದು ಸಮಾಜವಾದಿ ದೇಶದಲ್ಲಿನ ಇಂತಹ ಬೆಳವಣಿಗೆಗಳನ್ನು ಗುರುತಿಸಿ ಶ್ಲಾಘಿಸಬೇಕು. ಜೊತೆಗೆ, ಸಾಮ್ರಾಜ್ಯ ಶಾಹಿಯ ನಿಜ ಸ್ವರೂಪದ ವರ್ಗ ಗುಣಗಳು ಖಂಡಿತ ಬದಲಾಗದು ಎಂಬುದನ್ನು ಮಾತ್ರ ಮರೆಯಬಾರದು. ●

JANASHAKTHI KANNADA VARA PATRIKE JUNE 25-JULY 1, 2018 Price: Rs. 10/- Date of Publication: 22 JUNE 2018 RNI No. KARKAN /2006/17926 Posted on every Saturday
"REGISTERD" Postal Reg. No. RNP/KA/BGS/2078/2016-18 Posted at Bangalore PSO, BG - 560026 Licensed to Post without prepayment License No. WPP-283

ಪ್ರಸ್ತುತವೆನಿಸುವ ಪೆರಿಯಾರ್ ಹೇಳುವ "ಸ್ವಾಭಿಮಾನದ ಮದುವೆಗಳು"



ಸ್ವಾಭಿಮಾನದ ಮದುವೆಗಳು
ಪೆರಿಯಾರ್
ಕನ್ನಡಕ್ಕೆ: ಬಿ.ಸುಜ್ಞಾನಮೂರ್ತಿ
ಲಡಾಯಿ ಪ್ರಕಾಶನ, ಗದಗ.
ಪುಟ:98, ಬೆಲೆ: 70/–, 2016.

ಫೇಸ್ ಬುಕ್ ನಲ್ಲಿ ಪುಸ್ತಕ ಸಂವಾದದ ಸರಣಿ ಆರಂಭಿಸಿರುವ ಕನ್ನಡದ ಸಂಸ್ಕೃತಿ ಚಿಂತಕರಲ್ಲಿ ಒಬ್ಬರಾದ ಅರುಣ್ ಜೋಳದ ಕೂಡ್ಲಿಗಿ ಅವರು ಪ್ರತಿ ದಿನ ಅವರು ಓದಿರುವ ಪ್ರಸ್ತುತವಾದ ಪುಸ್ತಕದ ಪರಿಚಯ ಮಾಡಿಕೊಡುತ್ತಾರೆ. ಆ ಸರಣಿಯಲ್ಲಿ ಬರೆದ ಮೊದಲ ಪುಸ್ತಕದ ಪರಿಚಯ ಇದು.

ಅರುಣ್ ಜೋಳದ ಕೂಡ್ಲಿಗಿ

ಅದ್ದೂರಿ ಮದುವೆಗಳು ಚರ್ಚೆಗೊಳಗಾದ ಈ ಹೊತ್ತಿನಲ್ಲಿ, ಅಂತರ್ಜಾತಿ ವಿವಾಹಗಳು ಮರ್ಯಾದ ಹತ್ಯೆಗಳಾಗುತ್ತಿರುವಲ್ಲಿ, ಜ್ಯೋತಿಷ್ಯ, ಮೂಢನಂಬಿಕೆಗಳು ಮರಳುತ್ತಿರುವಲ್ಲಿ, ದುಂದುವೆಚ್ಚದ ಮದುವೆ ರೈತರ ಆತ್ಮಹತ್ಯೆಗೂ ಕಾರಣವಾಗುತ್ತಿರುವಲ್ಲಿ ಪೆರಿಯಾರ್ ಅವರ 'ಸ್ವಾಭಿಮಾನದ ಮದುವೆಗಳು' ಕೃತಿ ಜೀವಜಲದಂತೆ ಪ್ರಸ್ತುತವೆನ್ನಿಸುತ್ತದೆ. ಪೆರಿಯಾರ್ 1925 ರಲ್ಲಿ ದ್ರಾವಿಡರ ಏಳ್ಗೆಗಾಗಿ ಆರಂಭಿಸಿದ ಆತ್ಮಗೌರವ ಚಳವಳಿಯ ಭಾಗವಾಗಿ 'ಸ್ವಾಭಿಮಾನ ವಿವಾಹ ಪದ್ದತಿ'ಯನ್ನು ರೂಢಿಗೆ ತಂದರು. ಮುಂದೆ ತಮಿಳುನಾಡಿನಲ್ಲಿ ಡಿಎಂಕೆ ಪಕ್ಷ ಆಡಳಿತಕ್ಕೆ ಬಂದಾಗ ಮುಖ್ಯಮಂತ್ರಿ ಅಣ್ಣಾದುರೈ 1967ರಲ್ಲಿ ಇದು ಕಾನೂನಾಗಿಯೂ ಜಾರಿಗೆ ಬಂತು.

'ಮದುವೆ'ಯನ್ನು ಕೇಂದ್ರದಲ್ಲಿಟ್ಟುಕೊಂಡು ಜೀವಸಂಕುಲದ ಸಂತಾನೋತ್ಪತ್ತಿನ ಸಹಜತೆಯನ್ನು ವಿವರಿಸುತ್ತಾ ಗಂಡು ಹೆಣ್ಣಿನ ಸಂಬಂಧದ ಸಂಕೀರ್ಣತೆಯನ್ನು ಬಿಡಿಸಲು ಪ್ರಯತ್ನಿಸಿದ್ದಾರೆ. ಮದುವೆಗಳ ಸಾಂಪ್ರದಾಯಿಕ ಆಚರಣೆಗಳಲ್ಲಿ ಪರೋಕ್ಷವಾಗಿ ಹೇಗೆ ಪುರುಷಾಧಿಕಾರವನ್ನು, ಬ್ರಾಹ್ಮಣಶಾಹಿಯನ್ನು ಬಲಗೊಳಿಸಿ ಮಹಿಳೆಯನ್ನು ದಮನಗೊಳಿಸುವ ಹುನ್ನಾರಗಳು ಅಡಗಿವೆ ಎಂದು ಸರಳವಾಗಿ ವಿಶ್ಲೇಷಿಸುತ್ತಾರೆ. ಈ ಹಿನ್ನೆಲೆಯಲ್ಲಿ ಮಹಿಳೆಯ ಸ್ವಾಭಿಮಾನವನ್ನು ಪೆರಿಯಾರ್ ಬಡಿದೆಬ್ಬಿಸುತ್ತಾರೆ.

ಜ್ಯೋತಿಷಿಗಳಿಲ್ಲದ, ಮಂತ್ರಗಳಿಲ್ಲದ, ಅದ್ದೂರಿತನದ ಆಡಂಬರವಿಲ್ಲದ ಸರಳ ಸಾಂಕೇತಿಕ ವಿವಾಹಗಳ ಬಗ್ಗೆ ಈ ಕೃತಿಯಲ್ಲಿ ಬಹು ಆಯಾಮಗಳ ಚರ್ಚೆಯನ್ನು ಪೆರಿಯಾರ್ ಮಾಡಿದ್ದಾರೆ. ಮುಖ್ಯವಾಗಿ ಮದುವೆ ಬಗ್ಗೆ ಇದ್ದ ವೈದಿಕಶಾಹಿ ಹುಟ್ಟಿಸಿದ ನಂಬಿಕೆಗಳನ್ನು ಒಡೆಯುತ್ತಾ, ಪುರಾಣಗಳ ಹುಸಿತನವನ್ನು ಬಯಲು ಮಾಡುತ್ತಾ ಹೋಗುತ್ತಾರೆ. ಮದುವೆಗಳು ಮತ್ತು ಅವುಗಳ ಸುತ್ತುವರಿದ ನಂಬಿಕೆ ಲೋಕವು ಪುನರ್ ಸ್ಥಾಪಿಸುವ ಪುರುಷ ಯಾಜಮಾನ್ಯವನ್ನು ಒಡೆಯುತ್ತಾ ಲಿಂಗತಾರತಮ್ಯಗಳನ್ನು ಮೀರುವ ಬಗೆಗಳನ್ನೂ ಸೂಕ್ಷ್ಮವಾಗಿ ವಿಶ್ಲೇಷಿಸುತ್ತಾರೆ.


ಪೆರಿಯಾರ್, ಅತ್ಯಂತ ವೈಜ್ಞಾನಿಕವಾಗಿ ಸರಳ ಸತ್ಯಗಳನ್ನು ಹೇಳುತ್ತಾ ಅದಕ್ಕೆ ಪೂರಕವಾಗಿ ನಮ್ಮ ನಡುವೆಯೇ ಜೀವಂತವಿರುವ ಉದಾಹರಣೆಗಳನ್ನು ಕೊಡುತ್ತಾ ಓದುಗರನ್ನು ವೈಚಾರಿಕತೆಯೆಡೆಗೆ ಕೊಂಡೊಯ್ಯುತ್ತಾರೆ. ಗಂಡ ಹೆಂಡತಿ ಸಾಂಪ್ರದಾಯಿಕ ಹುಸಿತನಗಳನ್ನು ಮೀರಿ ಸ್ನೇಹಿತರಾಗಿರಬೇಕೆನ್ನುತ್ತಾರೆ. ಸ್ವಾಭಿಮಾನದ ಮದುವೆಗಳ ಸ್ವರೂಪ ಎಲ್ಲಾ ಕಾಲಕ್ಕೂ ಒಂದೇ ರೀತಿ ಇರಬೇಕಿಲ್ಲ, ಅವು ಕಾಲದ ಜತೆ ಬದಲಾಗುತ್ತವೆ. ಹೀಗಾಗಿ ಪೆರಿಯಾರ್ ಗಂಡು ಹೆಣ್ಣು ಜೊತೆಯಾಗಿ ರೂಢಿಸಿಕೊಳ್ಳಬೇಕಾದ ಸಾರ್ವಕಾಲೀಕ ಮೌಲ್ಯಗಳನ್ನು ಹೇಳುತ್ತಾರೆ. ಇಂದಿನ ಲಿವಿಂಗ್ ಟುಗೆದರ್ ಜೀವನ ಪದ್ದತಿಯಲ್ಲಿ ಇದರ ಒಂದು ಎಳೆ ಕಾಣುತ್ತದೆ.

'ವಿವಾಹಿತರ ಜೋಡಿ ಇನ್ನುಮುಂದೆ ಸದಾ ಸ್ನೇಹಿತರಂತಿರಬೇಕು. ಅವರು ಲಿಂಗಬೇಧವನ್ನು ಪಾಲಿಸಬಾರದು. ಒಬ್ಬರನ್ನೊಬ್ಬರು ಮೋಸಗೊಳಿಸಿಕೊಳ್ಳದೆ, ಒಬ್ಬರ ಮೇಲೊಬ್ಬರು ಅಧಿಕಾರ ಚಲಾಯಿಸದೆ, ಪ್ರೀತಿಯಿಂದ ಕೆಲಸ ಕಾರ್ಯ ನಿರ್ವಹಿಸಿಕೊಳ್ಳಬೇಕು. ನಿನ್ನ ಸಂಗಾತಿಯ ಬಗ್ಗೆ ನೀನು ಸಹನೆಯಿಂದ, ಪ್ರೀತಿಯಿಂದ, ಸೌಮ್ಯದಿಂದ ವರ್ತಿಸಿದ್ದಾದರೆ ಪ್ರೇಮ ಬಂಧನವನ್ನು ಮತ್ತಷ್ಟು ಬಲಿಷ್ಠಗೊಳಿಸಿದವರಾಗುತ್ತೀರಿ. ಸಾಸಿವೆಯಷ್ಟು ತಪ್ಪನ್ನು ಬೆಟ್ಟದಷ್ಟು ಮಾಡಬೇಡಿ. ವೈವಾಹಿಕ ಜೀವನದಲ್ಲಿ ಬಾಹ್ಯ ಘರ್ಷಣೆ ಹೊಡೆದಾಟಗಳು ನಿಮ್ಮಿಬ್ಬರ ಜೀವನಕ್ಕೆ ಹಾನಿಕರವಾಗುತ್ತವೆ. ಎಲ್ಲಾ ವಿಷಯಗಳಲ್ಲಿ ಅಧಿಕಾರ ಪ್ರೀತಿಯದೇ ಆಗಬೇಕು. ಯಾವ ತಪ್ಪಾದರೂ ಗೌರವದಿಂದಲೇ ಸರಿಪಡಿಸಬೇಕು. ನಿಮಗಾಗಿಯೇ ಅಲ್ಲದೆ ಇತರರಿಗಾಗಿ ಜೀವಿಸುವುದನ್ನು ಕಲಿತುಕೊಳ್ಳಿರಿ' ಎಂದು ಪೆರಿಯಾರ್ ನವಜೋಡಿಗಳಿಗೆ ಕರೆಕೊಡುತ್ತಾರೆ. ಕೆಲವು ಸಂಗತಿಗಳಲ್ಲಿ ಕನ್ನಡದ ಧೀಮಂತ ಲೇಖಕ ಕುವೆಂಪು ಅವರ ಮಂತ್ರ ಮಾಂಗಲ್ಯವನ್ನು ಪೆರಿಯಾರ್ ನೆನಪಿಸುತ್ತಾರೆ.

ಪ್ರೇಮಿಸುವ ಯುವ ಜೋಡಿಗಳು, ಮದುವೆ ಮಾಡುವ ತಯಾರಿಯಲ್ಲಿರುವ ತಂದೆ ತಾಯಿಗಳು, ಮದುವೆ ಬಗ್ಗೆ ಕಟುವಾದ ಭಿನ್ನಾಭಿಪ್ರಾಯ ಹೊಂದಿದ ಹುಡುಗಿಯರು, ಅತ್ಯಂತ ಆಧುನಿಕ ಮನಸ್ಥಿತಿ ಹೊಂದಿದ ಯುವಜನತೆ, ಅದ್ದೂರಿ ಮದುವೆಯ ಕನಸು ಕಾಣುತ್ತಿರುವವರು, ಸಾಂಪ್ರದಾಯಿಕ ನಂಬಿಕೆಗಳ ಬಲೆಯಲ್ಲಿ ಸಿಕ್ಕು ಉಸಿರುಗಟ್ಟಿದವರು ಈ ಕೃತಿಯನ್ನು ಅಗತ್ಯವಾಗಿ ಓದಬೇಕಾಗಿದೆ. ಹಿರಿಯರ ಪಟ್ಟು ಸಡಿಲಿಸಲಾಗದೆ ಪುರೋಹಿತರ ಸಮ್ಮುಖದಲ್ಲಿ ಆಡಂಬರದ ವಿವಾಹವಾದವರಲ್ಲಿ ಈ ಕೃತಿ ಪಾಪಪ್ರಜ್ಞೆಯನ್ನು ಹುಟ್ಟಿಸುತ್ತದೆ. ಇಂತಹ ಮಹತ್ವದ ಕೃತಿಯನ್ನು ಬಿ.ಸುಜ್ಞಾನಮೂರ್ತಿ ಅವರು ಆಪ್ತವಾಗಿ ಕನ್ನಡಕ್ಕೆ ತಂದಿದ್ದಾರೆ.


ಚಿತ್ರ ನೋಟ

ಹೆಚ್. ಆರ್. ನವೀನ್ ಕುಮಾರ್



'ಕೋಶ ಓದು ದೇಶ ನೋಡು'–2 'ಟ್ರೈನ್ ಟು ಪಾಕಿಸ್ತಾನ್'

ದ್ವೇಷ ಅಳಿಯದೆ ದೇಶ ಬೆಳಗದು' ಎಂಬ ಅರಿವು, 'ಸೌಹಾರ್ದತೆಯೆಡೆಗೆ ಸಹಪಯಣ' ಎಂಬ ಆಶಯ



'ಚಿರಸ್ಮರಣೆ ಓದು ಕಯ್ಯೂರು ನೋಡು' ಎಂಬ ವಿಶಿಷ್ಟ ಕಾರ್ಯಕ್ರಮವನ್ನು ಕಳೆದ ವರ್ಷ ಯಶಸ್ವಿಯಾಗಿ ಪೂರೈಸಿದ 'ಕೋಶ ಓದು ದೇಶ ನೋಡು' ತಂಡ ಅದರ ಮುಂದುವರಿಕೆಯಾಗಿ ಇನ್ನೊಂದು ಅಂತಹುದೇ "ಟ್ರೈನ್ ಟು ಪಾಕಿಸ್ತಾನ್" ಓದಿನ ಕಾರ್ಯಕ್ರಮ ಹಾಕಿಕೊಂಡಿದೆ.

2019 ರ ಚುನಾವಣೆಯನ್ನು ದೃಷ್ಟಿಯಲ್ಲಿಟ್ಟುಕೊಂಡು ದೇಶದಲ್ಲಿ ಕೋಮುದ್ವೇಷವನ್ನು ವ್ಯವಸ್ಥಿತವಾಗಿ ಹಬ್ಬಿಸಲಾಗುತ್ತಿದೆ. ಧರ್ಮದ ಆಧಾರದಲ್ಲಿ ಮತದಾರರ ಧ್ರುವೀಕರಣ ನಡೆಯುತ್ತಿದೆ. ಇದರ ಸ್ಯಾಂಪಲ್ ಕರ್ನಾಟಕದ ಚುನಾವಣೆಯಲ್ಲಿ, ಅದರಲ್ಲೂ ಕರಾವಳಿ ಹಾಗೂ ಮಲೆನಾಡಿನಲ್ಲಿ ಎದ್ದು ಕಂಡಿದೆ. ಇದು ಹೀಗೆಯೇ ಮುಂದುವರಿದರೆ ಸಮಾಜ ಅಂತರ್ಯುದ್ಧದತ್ತ ಸಾಗಬಹುದು. ಈ ಕುರಿತು ಯುವ ತಲೆಮಾರು ಎಚ್ಚರದಿಂದ ಇರುವುದು ಅತ್ಯಗತ್ಯ. ಓದು ಅಂತಹ ಒಂದು ಎಚ್ಚರದ ಅರಿವನ್ನು ಸಮರ್ಥವಾಗಿ ಒದಗಿಸಬಲ್ಲದು, ಎಂದು ತಂಡ ಹೇಳಿದೆ.

ದೇಶವಿಭಜನೆಯ ಹಿನ್ನೆಲೆಯಲ್ಲಿ ನಡೆದಿರುವ ಕೋಮುಗಲಭೆಗಳನ್ನು ಈ ದೇಶ ಯಾವತ್ತು ಮರೆಯಲಾರದು. ಆ ದಿನಗಳಲ್ಲಿ ನಡೆದ ನರಮೇಧದಲ್ಲಿ ಕನಿಷ್ಟ 12 ಲಕ್ಷ ಹಿಂದು – ಮುಸ್ಲಿಮ್ – ಸಿಖ್ಖರು ಪ್ರಾಣ ತೆತ್ತಿದ್ದಾರೆ. ಅತ್ಯಾಚಾರ, ಸುಲಿಗೆಗಳಂತೂ ಎಣಿಕೆಗೆ ನಿಲುಕದ್ದು. ಆಗ ನಡೆದ ಅಮಾನವೀಯ ಕೃತ್ಯಗಳು ಮನುಷ್ಯರಾದವರ ಮೈನಡುಗಿಸುತ್ತದೆ. ಈ ದುರಂತದ ಕಥನಗಳ ಪರಿಚಯವನ್ನು ಹಿಂದಿ ಮತ್ತು ಉರ್ದು ಸಾಹಿತ್ಯಲೋಕ ನಮಗೆ ಮಾಡಿಸುತ್ತದೆ. ಇಂಥಾ ಸಾಹಿತ್ಯ ಕೃತಿಗಳಲ್ಲಿ ಸಾದತ್ ಹಸನ್ ಮಾಂಟೋ ಕಥೆಗಳು ಮತ್ತು ಖುಷ್ವಂತ್ ಸಿಂಗರ ಕೃತಿಗಳು ಮುಂಚೂಣಿಯಲ್ಲಿ ನಿಲ್ಲುವಂಥವು. ವಿಭಜನೆಯ ದಿನಗಳಲ್ಲಿ ನಡೆದ ರಾಜಕಾರಣ, ಹಿಂಸೆ, ಮನುಷ್ಯ ಸಂಬಂಧಗಳ ತೊಳಲಾಟಗಳನ್ನು ಖುಷ್ವಂತ್ ಸಿಂಗ್ ತಮ್ಮ "ಟ್ರೈನ್ ಟು ಪಾಕಿಸ್ತಾನ್" ನಲ್ಲಿ ಕಟ್ಟಿಕೊಟ್ಟಿದ್ದಾರೆ.

ಇಂಡಿಯಾ ಈಗ ಮತ್ತೊಮ್ಮೆ ಅದೇ ದಿಕ್ಕಿನಲ್ಲಿ ಸಾಗುತ್ತಿದೆ. ಮತ್ತೊಂದು ಅಂತಹ ಬೃಹತ್ ನರಮೇಧವನ್ನು ಭರಿಸುವ ಶಕ್ತಿ ಖಂಡಿತಾ ನಮ್ಮ ಸಮಾಜಕ್ಕಿಲ್ಲ. ಅಂದಿನ ನೋವುಗಳನ್ನು, ಕೋಮುಸಂಘರ್ಷದ ನಿರರ್ಥಕತೆಯನ್ನು ಅರ್ಥ ಮಾಡಿಕೊಂಡರೆ, ಅಂತಹ ದುರಂತದ ಸಾಧ್ಯತೆಯಿಂದ ಪಾರಾಗುವ ಪ್ರಯತ್ನ ಮಾಡಲು ಸಾಧ್ಯ. ಅದರ ಪರಿಚಯ ಮಾಡಿಸಲೆಂದೇ ನಮ್ಮ 'ಕೋಶ ಓದು ದೇಶ ನೋಡು' ತಂಡ ಈ ಬಾರಿ 'ಟ್ರೈನ್ ಟು ಪಾಕಿಸ್ತಾನ್' ಓದಿನ ಅಭಿಯಾನಕ್ಕೆ ಚಾಲನೆ ನೀಡಿದೆ.

ಒಂದೆಡೆ ಓದುವ ಅಭಿರುಚಿಯನ್ನು ಬೆಳೆಸುವುದು, ಮತ್ತೊಂದೆಡೆ ಕೋಮುವಾದದದ ದುರಂತಗಳನ್ನು ಮನದಟ್ಟು ಮಾಡಿಸಿ ಸೌಹಾರ್ದ ಜೀವನಕ್ಕೆ ಪ್ರೇರಣೆ ನೀಡುವುದು ನಮ್ಮ ಉದ್ದೇಶ., ಎನ್ನುತ್ತದೆ ಆ ತಂಡ.

ಜುಲೈ 30ಕ್ಕೆ ಓದಿನ ಅಭಿಯಾನ ಮುಕ್ತಾಯ ಕಾಣಲಿದ್ದು, ಆಗಸ್ಟ್ 4 ಮತ್ತು 5ರಂದು ಮಂಗಳೂರಿನಲ್ಲಿ ಸಮಾರೋಪ ಕಾರ್ಯಕ್ರಮಗಳು ನಡೆಯಲಿವೆ. ಈ ಸಂದರ್ಭದಲ್ಲಿ ಓದಿನ ಉತ್ಪನ್ನವನ್ನು ಸಂವಾದ, ಸಾಂಸ್ಕೃತಿಕ ಕಾರ್ಯಕ್ರಮಗಳು ಇತ್ಯಾದಿ ಮೂಲಕ ಹಂಚಿಕೊಳ್ಳುವ ಯೋಜನೆಯನ್ನು ರೂಪಿಸಲಾಗುತ್ತಿದೆ. ಈ ಅಭಿಯಾನವು 'ದ್ವೇಷ ಅಳಿಯದೆ ದೇಶ ಬೆಳಗದು' ಎಂಬ ಅರಿವು, ಮತ್ತು 'ಸೌಹಾರ್ದತೆಯೆಡೆಗೆ ಸಹಪಯಣ' ಎಂಬ ಆಶಯಗಳನ್ನು ಹೊತ್ತು ಸಾಗಲಿದೆ.

'ಟ್ರೈನ್ ಟು ಪಾಕಿಸ್ತಾನ್' ಓದಿನ ಅಭಿಯಾನಕ್ಕೆ ಜೊತೆಯಾಗಲು ಇಚ್ಛಿಸುವವರು ನಮ್ಮನ್ನು ಸಂಪರ್ಕಿಸಿ ಎಂದು ಫೇಸ್ ಬುಕ್ ನಲ್ಲಿ ಕೇಳಿಕೊಂಡಿದ್ದಾರೆ.

JANASHAKTHI KANNADA VARA PATRIKE: Printed, Published by **G.V.SRIRAMA REDDY**, EMS Bhavana, No.37/A, 8th Cross, Mahalakshmi Layout, BANGALORE-560086 Karnataka on behalf of **COMMUNIST PARTY OF INDIA (MARXIST)** and **Printed at : Kriya Prakashana,** No. 12, 18th Cross, Sampangirama Nagar, Bangalore 560027
Editor : **G.V.SRIRAMA REDDY**